
ದುಡಿವ ಜನರ ಪ್ರಾಣ ಮಿತ್ರ

# ಐಕ್ಯರಂಗ

ಸಂಪುಟ 27 ಸಂಚಿಕೆ 18 ಮೇ 01, 2005 ಬೆಲೆ ರೂ. 3.00

## ಅರ್ಕಾತಿಗೆ ಹೈಕೋರ್ಟ್ ಅಂಕುಶ




ಅಂಗನವಾಡಿ ನೌಕರರ ಸಮ್ಮೇಳನ

## ವಿಶಾಲವಾದ ಚಳುವಳಿ ದೃಢವಾದ ಸಂಘಟನೆಯಾಗಿ ಚಿಮ್ಮುವುದರತ್ತ....



## ವಿಷಪೂರಿತ ಸಾರಾಯಿ ಹಂತಕರಿಗೆ ಶಿಕ್ಷೆ ಇಲ್ಲವೇ?





## ವಿಯೆಟ್ನಾಂ ವಿಮೋಚನೆ ಮುವತ್ತು ವರುಷಗಳು

## ಭಾರತ-ಪಾಕ್

ಶಾಂತಿ ಪ್ರಕ್ರಿಯೆಯ ಹೆಜ್ಜೆಗಳು

- ಮಂಡ್ಯ-ಮಹಿಳೆಯ ಮೇಲೆ ಹಲ್ಲೆ-ಅತ್ಯಾಚಾರ
- ಪ.ಬಂಗಾಳ - ಸಾಮಾನ್ಯ ಗ್ರಹಿಕೆ ಮತ್ತು ವಾಸ್ತವ

**ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಪಶ್ಚಿಮಬಂಗಾಳ ಮತ್ತು ತ್ರಿಪುರಾದ ಎಡರಂಗ ಸರ್ಕಾರಗಳು ಸಮಾರಂಭಗಳನ್ನು ಏರ್ಪಡಿಸಿದ್ದವು. ಈ ಸಂದರ್ಭದಲ್ಲಿ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಹಾಗೂ ಚಿಂತಕ ಸೀತಾರಾಂ ಯೆಚೂರಿಯವರು ಪ್ರಸ್ತುತಪಡಿಸಿದ ಪ್ರಬಂಧಗಳ ಅಂಶಗಳನ್ನಿಲ್ಲಿ ಸಂಗ್ರಹಿಸಲಾಗಿದೆ.**

# ವರ್ಗಶೋಷಣೆಯ ವಿರುದ್ಧ ಹೋರಾಟಗಳು ಸಾಮಾಜಿಕ ದಮನದ ವಿರುದ್ಧ ಹೋರಾಟಗಳೊಂದಿಗೆ ಮೇಳವಿಸಲಿ

**ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ಸೀತಾರಾಂ ಯೆಚೂರಿ**

1947 ರಲ್ಲಿ ದೊರೆತ ರಾಜಕೀಯ ಸ್ವಾತಂತ್ರ್ಯವನ್ನು ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವಾಗಿ ಪರಿವರ್ತಿಸುವುದರ ಅಗತ್ಯವಿದೆ - ಇದು ಅಂಬೇಡ್ಕರ್‌ರವರು ಹೇಳಿರುವ ಒಂದು ಮಹತ್ವಪೂರ್ಣ ಮಾತು. 'ರಾಜಕೀಯದಲ್ಲಿ ನಾವು ಒಬ್ಬ ವ್ಯಕ್ತಿ - ಒಂದು ಮತ ಮತ್ತು ಒಂದು ಮತ-ಒಂದು ಮೌಲ್ಯದ ನೀತಿಯನ್ನು ಮಾನ್ಯ ಮಾಡಲಿದ್ದೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಾವು ನಮ್ಮ ಸಾಮಾಜಿಕ ಮತ್ತು ಆರ್ಥಿಕ ರಚನೆಯಿಂದಾಗಿ ಒಬ್ಬ ವ್ಯಕ್ತಿ-ಒಂದು ಮೌಲ್ಯದ ನೀತಿಯನ್ನು ನಿರಾಕರಿಸುವುದನ್ನು ಮುಂದುವರೆಸುತ್ತೇವೆ. ಎಷ್ಟುಸಮಯ ನಾವು ಈ ವೈರುಧ್ಯಗಳ ನಡುವೆ ಬದುಕು ನಡೆಸಲು ಸಾಧ್ಯ?.............

.......... ನಾವು ಈ ವೈರುಧ್ಯಗಳನ್ನು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ನಿವಾರಿಸಬೇಕು. ಇಲ್ಲವಾದರೆ ಅಸಮಾನತೆಯಿಂದ ನರಳುತ್ತಿರುವವರು ಈ ಸಭೆ ಶ್ರಮಪಟ್ಟು ಕಟ್ಟಿರುವ ರಾಜಕೀಯ ಪ್ರಜಾಪ್ರಭುತ್ವದ ರಚನೆಯನ್ನು ಸ್ಫೋಟಗೊಳಿಸಿಬಿಡುತ್ತಾರೆ' ಎಂದು ನವೆಂಬರ್ 1949 ರಲ್ಲಿ ಡಾ. ಅಂಬೇಡ್ಕರ್ ಸಂವಿಧಾನ ಸಭೆಯಲ್ಲಿ ಮಾತನಾಡುತ್ತಾ ಎಚ್ಚರಿಸಿದ್ದರು. ಕಮ್ಯುನಿಸ್ಟರೂ ನಮ್ಮ ದೇಶದ ಜನತೆಗೆ ಇದನ್ನೇ ಮತ್ತೆ-ಮತ್ತೆ ಹೇಳುತ್ತಾ ಬಂದಿದ್ದಾರೆ. ಅಂಬೇಡ್ಕರ್ ಈಗಲೂ ಪ್ರಸ್ತುತರಾಗಿರುವುದು ಈ ಮೂಲ ಸಂಗತಿಯಿಂದಾಗಿಯೇ.

ಶಾಶ್ವತವೆಂಬುದೇನಿಲ್ಲ, ಸನಾತನವೆಂಬುದೇನಿಲ್ಲ, ಪ್ರತಿಯೊಂದು ಬದಲಾಗುತ್ತಿರುತ್ತದೆ, ಬದಲಾವಣೆ ಪ್ರತಿಯೊಬ್ಬ ವ್ಯಕ್ತಿ ಮತ್ತು ಸಮಾಜದ ನಿಯಮ ಎನ್ನುತ್ತಾ ಡಾ. ಅಂಬೇಡ್ಕರ್ 'ಸ್ಥಿರತೆ ಬೇಕು, ಆದರೆ ಬದಲಾವಣೆ ಅನಿವಾರ್ಯವಾದಾಗ ಅದನ್ನು ಮಾಡದೇ ಅಲ್ಲ' ಎಂದಿದ್ದರು. "ಸಾಮಾಜಿಕ ಸುಧಾರಣೆಯ ಹಾದಿಯಲ್ಲಿ ಹಲವು ಕಷ್ಟಗಳಿವೆ.... ಜಾತಿ ನಿಮ್ಮ ಹಾದಿಗೆ ಅಡ್ಡಬರುವ ಒಂದು ದೈತ್ಯ - ಆ ದೈತ್ಯನನ್ನು ಸಂಹರಿಸದೆ ರಾಜಕೀಯ ಸುಧಾರಣೆ ಸಾಧ್ಯವಿಲ್ಲ, ಆರ್ಥಿಕ ಸುಧಾರಣೆ ಸಾಧ್ಯವಿಲ್ಲ..." ಎಂದು ಎಚ್ಚರಿಸಿದ್ದರು ಅಂಬೇಡ್ಕರ್.

ಆದರೆ ಇಂದೂ ಸ್ವಾತಂತ್ರ್ಯದ 55 ವರ್ಷಗಳ ನಂತರವೂ ದಲಿತರ, ಹಿಂದುಳಿದ ಜಾತಿಗಳ ಪರಿಸ್ಥಿತಿ ಸಾರ್ವತ್ರಿಕವಾಗಿ ಸುಧಾರಿಸಿಲ್ಲ. ಈ ವಿಭಾಗಗಳಲ್ಲಿನ ಕೆಲವು ವ್ಯಕ್ತಿಗಳಷ್ಟೇ ಸುಧಾರಿಸಿರಬಹುದು - ಆದರೆ ರಾಜಕೀಯ ಸ್ವಾತಂತ್ರ್ಯವನ್ನು ನಿಜವಾದ, ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವಾಗಿ ಪರಿವರ್ತಿಸುವ ಕೆಲಸ ನಮ್ಮ ಸಮಾಜದ ಬಹುಪಾಲು ದಮನಿತ ವಿಭಾಗಗಳಿಗೆ ಇನ್ನೂ ದೂರದ ಕನಸು.

**ಮೀಸಲಾತಿ ಮತ್ತು ದಲಿತರು**

ದಲಿತರ ಇಂತಹ ಪರಿಸ್ಥಿತಿಯನ್ನು ನಿವಾರಿಸಲಿಕ್ಕಾಗಿ ..........ಅಂಬೇಡ್ಕರ್ ಮೀಸಲಾತಿಯಂತಹ ಸಾಂವಿಧಾನಿಕ ರಕ್ಷಣೆಗಳ ಬಗ್ಗೆ ಮಾತಾಡಿದ್ದರು. ದೇಶ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳಿಗೆ ಮೀಸಲಾತಿಯನ್ನು ಆರಂಭದಲ್ಲಿ ಹತ್ತು ವರ್ಷಗಳ ಅವಧಿಗೆ ಅಂಗೀಕರಿಸಿತು. ಅದನ್ನು ಇಲ್ಲಿಯ ವರೆಗೂ ವಿಸ್ತರಿಸಲಾಗಿದೆ. ಮುಂದೆಯೂ ವಿಸ್ತರಿಸಬೇಕಾಗುತ್ತದೆ. ಏಕೆಂದರೆ ನಿರೀಕ್ಷೆಗೆ ಅನುಗುಣವಾಗಿ ಅಥವಾ ಅವಶ್ಯಕತೆಗೆ ಅನುಗುಣವಾಗಿ ಅವರ ಪರಿಸ್ಥಿತಿ ಉತ್ತಮಗೊಂಡಿಲ್ಲ. ಮೀಸಲಾತಿಯಂತಹ ಸಾಂವಿಧಾನಿಕ ರಕ್ಷಣೆಗಳು ಮಹತ್ವದ್ದು. ಆದರೆ ದಮನಕ್ಕೊಳಗಾದವರ ಆರ್ಥಿಕ ಸ್ಥಾನಮಾನಗಳನ್ನು ತೀವ್ರವಾಗಿ ಉತ್ತಮಗೊಳಿಸದೆ ಕೇವಲ ಇಂತಹ ರಕ್ಷಣಾ ಕ್ರಮಗಳಿಂದಷ್ಟೇ ಅವರ ಪರಿಸ್ಥಿತಿ ಬದಲಾಗುವುದಿಲ್ಲ ಎಂದು ಅನುಭವದಿಂದ ಕಂಡುಬಂದಿದೆ. ಅಂಬೇಡ್ಕರ್ ಇದನ್ನು ಸ್ವೀಕರಿಸಿದ್ದರು, ಮಾತ್ರವಲ್ಲ ಒತ್ತಿಹೇಳಿದ್ದರು. ಕಾರ್ಷಿಕ ಸಂಬಂಧಗಳಲ್ಲಿ ಅರ್ಥಪೂರ್ಣವಾದ ಬದಲಾವಣೆಗಳು ಸಂಭವಿಸುವವರೆಗೆ ಇಂತಹ ರಿಯಾಯ್ತಿಗಳನ್ನು ಬೆಂಬಲಿಸಲೇಬೇಕು. ಆದರೆ ಈ ಬಗ್ಗೆ ಭ್ರಮೆಗಳಿರಬಾರದು.

ಏಕೆಂದರೆ ಈ ಕ್ರಮಗಳು ಉಪಶಮನಕಾರಿಯಷ್ಟೇ. ಬಡತನ, ನಿರುದ್ಯೋಗವನ್ನು ಪರಿಹರಿಸಲಾರವು. ಅವು ಕೆಲವು ವ್ಯಕ್ತಿಗಳಿಗೆ ಖಂಡಿತಾ ಪರಿಹಾರ ನೀಡುತ್ತವೆ, ಮುನ್ನಡೆಯ ಆತ್ಮವಿಶ್ವಾಸ ಹೆಚ್ಚಿಸುತ್ತವೆ, ಆದರೆ ಅವರ ಸ್ಥಾನಮಾನವನ್ನು ಒಟ್ಟಾಗಿ ದಲಿತರ, ಇತರ ದಮನಕ್ಕೊಳಗಾದವರ ಪರಿಸ್ಥಿತಿಗಳನ್ನು ಬದಲಿಸಲಾರವು. ಆಳುವ ವರ್ಗಗಳಿಗೆ ಇಂತಹ ರಿಯಾಯ್ತಿಗಳು ಮಹತ್ವದ್ದಾಗುತ್ತವೆ. ಮೊದಲನೆಯದಾಗಿ, ಉದ್ಯೋಗಕ್ಕಾಗಿ ಸ್ಪರ್ಧೆಯಲ್ಲಿ ಒಂದು ಶ್ರಮಜೀವಿ ವಿಭಾಗವನ್ನು ಇನ್ನೊಂದರ ವಿರುದ್ಧ ಎತ್ತಿಕಟ್ಟಬಹುದು. ಎರಡನೆಯದಾಗಿ, ಸರ್ಕಾರ ನಮ್ಮ ಮಿತ್ರ, ಆದ್ದರಿಂದ ತಮ್ಮ ಹೋರಾಟಗಳನ್ನು ಬೂರ್ಜ್ವಾ ವ್ಯವಸ್ಥೆಯೊಳಗೇ ಸೀಮಿತಗೊಳಿಸಬೇಕು ಎಂಬ ಭಾವನೆಯನ್ನು ಕೆಲವು ವಿಭಾಗಗಳಲ್ಲಿ ಹುಟ್ಟಿಸಲು ಸಾಧ್ಯವಾಗುತ್ತವೆ. ಹೀಗೆ ಸಮಾಜದ ಅತಿ ಕೆಳಗೆ ಇರುವ ವಿಭಾಗಗಳಿಂದ ಪ್ರಸಕ್ತ ಸಾಮಾಜಿಕ - ಆರ್ಥಿಕ ವ್ಯವಸ್ಥೆಗೆ ಸವಾಲು ಬರದಂತೆ ತಡೆಯಲು ಅವರಿಗೆ ಸಾಧ್ಯವಾಗುತ್ತದೆ.



ಇನ್ನೊಂದು ವಿದ್ಯಮಾನವನ್ನು ಗಮನಿಸಬೇಕು. ಸ್ವಾತಂತ್ರ್ಯದ ನಂತರ ಒಂದು ಆಧುನಿಕ ಪ್ರಭುತ್ವ ನಮ್ಮ ದೇಶದಲ್ಲಿ ಮೂಡಿಬರುತ್ತಿದೆ. ನಮ್ಮ ದೇಶದ ವಿಶಾಲ ಬಹುದೇಶೀಯ ಸ್ವರೂಪದಿಂದಾಗಿ ವಿವಿಧ ಜಾತಿ, ಮತ, ಜನಾಂಗ, ಪ್ರದೇಶ ಇತ್ಯಾದಿ ವಿವಿಧ ಭಾಗಗಳು ಒಂದು ಹೊಸ ಸ್ವತಂತ್ರ ರಾಜಕೀಯ ವ್ಯವಸ್ಥೆಯಲ್ಲಿ ಸಮಾನ ಸ್ಥಾನಮಾನ, ಅವಕಾಶಗಳು ಬೇಕೆಂದು ಒತ್ತಾಯಿಸುತ್ತಿವೆ. ಇದು ಸರಿಯಾಗಿಯೇ ಇದೆ. ಆದರೆ ಸ್ವಾತಂತ್ರ್ಯಾನಂತರದ ದಶಕಗಳಲ್ಲಿ ಆಳಗೊಂಡ ಆರ್ಥಿಕ ಬಿಕ್ಕಟ್ಟು ಈ ವಿಭಾಗಗಳ ನಿರೀಕ್ಷೆಗಳನ್ನು ಈಡೇರಿಸಲಿಲ್ಲ ಮಾತ್ರವಲ್ಲ, ತಾರತಮ್ಯಗಳನ್ನು ಹಿಗ್ಗಿಸಿದೆ. ಒಟ್ಟು ರೊಟ್ಟಿಯ ಆಕಾರ ಕಿರಿದಾದಂತೆ ತಂತಮ್ಮ ಪಾಲುಗಳನ್ನು ಹೆಚ್ಚಿಸಲು ವಿವಿಧ ಗುಂಪುಗಳ ನಡುವೆ ಕಿತ್ತಾಟಗಳು ಬೆಳೆಯುತ್ತಿವೆ. ಆದ್ದರಿಂದಲೇ ಹೊಸ ವಿಭಾಗಗಳಿಂದ ಮೀಸಲಾತಿಯ ಬೇಡಿಕೆಗಳು ಬಂದಿವೆ, ಇನ್ನೊಂದೆಡೆ ಮೀಸಲಾತಿಗಳಿಗೆ ವಿರೋಧಗಳು ಬೆಳೆಯುತ್ತಿವೆ.

**ಜಾತಿ ಅಣಿನೆರೆಕೆಯ ಸ್ವರೂಪ**

ಈ ಹಿನ್ನೆಲೆಯಲ್ಲಿ ಈಗಿನ ಸನ್ನಿವೇಶವನ್ನು ಪರಿಶೀಲಿಸಬೇಕು. ತಮ್ಮ ಸಾಮಾಜಿಕ ದಮನದ ಪರಿಸ್ಥಿತಿಗಳ ವಿರುದ್ಧ ಬಂಡೇಳುವ ಪ್ರಜ್ಞೆ ಈ ವಿಭಾಗಗಳಲ್ಲಿ ಬೆಳೆಯುತ್ತಿದೆ. ಇದು ಸಕಾರಾತ್ಮಕ ಅಂಶ. ಏಕೆಂದರೆ ಇಂತಹ ಪ್ರಜ್ಞೆಯಿಲ್ಲದಿದ್ದರೆ ದಮನ, ಶೋಷಣೆಯ ವಿರುದ್ಧ ನಿರ್ಣಾಯಕ ಹೋರಾಟ ಸಾಧ್ಯವಾಗದು. ಈ ಪ್ರಜ್ಞೆಯನ್ನು ಪೋಷಿಸಿ, ಬಲಗೊಳಿಸಿ ಪ್ರಸಕ್ತ ಸಾಮಾಜಿಕ-ಆರ್ಥಿಕ ವ್ಯವಸ್ಥೆಯ ವಿರುದ್ಧ ಹೋರಾಟಗಳನ್ನು ಬೆಸೆಯಬೇಕು. ಈ ರೀತಿ ಸಾಮಾಜಿಕ ದಮನದ ವಿರುದ್ಧದ ಹೋರಾಟವನ್ನು ಆಧುನಿಕ ಕಾಲದ ವರ್ಗ ಶೋಷಣೆಯ ವಿರುದ್ಧ ಹೋರಾಟದೊಂದಿಗೆ ಬೆಸೆದರೆ ಕಾರ್ಷಿಕ ಕ್ರಾಂತಿಯ ಹೋರಾಟ ಬಲಗೊಳ್ಳುತ್ತದೆ, ಅದನ್ನು ಅದರ ಗುರಿ ಮುಟ್ಟುವಂತೆ ಮುಂದೊಯ್ಯಲು ಸಾಧ್ಯವಾಗುತ್ತದೆ.

ಆದರೆ ಇನ್ನೊಂದೆಡೆ ಈ ರೀತಿಯ ಪ್ರಜ್ಞೆಯನ್ನು ಸಂಬಂಧಪಟ್ಟ ಜಾತಿಗೇ ಪರಿಮಿತಿಗೊಳಿಸುವ ಪ್ರಯತ್ನಗಳೂ ನಡೆಯುತ್ತಿವೆ. ಸದ್ಯದ ಇಂತಹ ಕೆಲವು ಆಂದೋಲನಗಳ ಮುಖಂಡರು ಪ್ರಸಕ್ತ ಕಾರ್ಷಿಕ ವ್ಯವಸ್ಥೆಯ ಪ್ರಶ್ನೆಯನ್ನು ಬದಿಗೆ ತಳ್ಳದಿದ್ದರೂ ಉಪೇಕ್ಷಿಸುತ್ತಾರೆ. ಆ ಮೂಲಕ ಈ ವಿಭಾಗಗಳನ್ನು ಪ್ರತ್ಯೇಕ ಗುಂಪುಗಳಾಗಿ, ವೋಟ್ ಬ್ಯಾಂಕ್‌ಗಳಾಗಿ ಕಾಣುತ್ತಾರೆ. ಶ್ರಮಜೀವಿಗಳ ಐಕ್ಯತೆಯನ್ನು ಬಲಪಡಿಸಲು ಈ ವಿದ್ಯಮಾನದ ವೈಜ್ಞಾನಿಕ ವಿಶ್ಲೇಷಣೆ ನಡೆಸುವುದು ಅಗತ್ಯವಾಗಿದೆ. ಈ ಮಹತ್ವದ ವಿದ್ಯಮಾನವನ್ನು ಸ್ಪಷ್ಟತೆಯಿಂದ ಎದುರಿಸದಿದ್ದರೆ ಈ ಜಾತಿ ಅಣಿನೆರೆಕೆಯ ಛಿದ್ರಕಾರಿ ಸಾಮರ್ಥ್ಯವನ್ನು ಮೀರಿ ನಿಲ್ಲಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ಪ್ರಶ್ನೆಯನ್ನು ಗಂಭೀರವಾಗಿ ಪರಿಶೀಲಿಸುವುದು ಅಗತ್ಯ.

ಹೀಗೆ ಮಾಡುವಾಗ ಮೊದಲಿಗೆ ಜಾತಿಯನ್ನು ವರ್ಗಕ್ಕೆ ಎದುರಾಗಿ ನಿಲ್ಲಿಸುವ ತಪ್ಪು ಪ್ರಯತ್ನಗಳನ್ನು ಬಯಲಿಗೆಳೆಯುವುದು ಅಗತ್ಯ. ಕಮ್ಯುನಿಸ್ಟರು ಸಮಾಜದ ವರ್ಗ ವಿಭಜನೆಯಲ್ಲಿ ನಂಬಿಕೆಯಿರುವವರಾದ್ದರಿಂದ ಜಾತಿಯತ್ತ ಅವರು ಗಮನ ಹರಿಸಬಾರದು ಎಂದು ಪಟ್ಟಭದ್ರ ಹಿತಾಸಕ್ತಿಗಳು ಸಲಹೆ ನೀಡುತ್ತಾರೆ. ಇದು ಹೊಲಸು ಸರಳೀಕರಣವಷ್ಟೇ ಅಲ್ಲ, ಈಗಿನ ವಾಸ್ತವತೆಯಿಂದ ದೂರವಾದದ್ದು. ಜಾತಿ ವರ್ಗೀಕರಣ ನಮ್ಮ ದೇಶದಲ್ಲಿ ಶತಮಾನಗಳಿಂದ ಬಂದದ್ದು. ಆದರಲ್ಲಿ ಸತತವಾಗಿ ಬದಲಾವಣೆಗಳು ನಡೆಯುತ್ತಾ ಬಂದಿವೆ. ಬಂಡವಾಳಶಾಹಿ ಇನ್ನೂ ಬೆಳೆಯುತ್ತಿರುವ ಆಧುನಿಕ ಭಾರತದಲ್ಲಿ ವರ್ಗಗಳು ಈ ವ್ಯವಸ್ಥೆಯೊಳಗೆ ರೂಪುಗೊಳ್ಳುತ್ತಿವೆ. ಆದ್ದರಿಂದ ಇಲ್ಲಿರುವ ಪ್ರಶ್ನೆ ಜಾತಿಯೋ ವರ್ಗವೋ ಎಂಬುದಲ್ಲ. ಸಾಮಾನ್ಯವಾಗಿ ನಮ್ಮ ಸಮಾಜದ ಅತಿಶೋಷಿತ ವರ್ಗಗಳು ಅತ್ಯಂತ ಹೆಚ್ಚು ಸಾಮಾಜಿಕ ದಮನಕ್ಕೊಳಗಾದ ಜಾತಿಗಳೂ ಆಗಿರುತ್ತವೆ. ಅಷ್ಟರಮಟ್ಟಿಗೆ ವರ್ಗಶೋಷಣೆಯ ವಿರುದ್ಧ ಹೋರಾಟ, ಸಾಮಾಜಿಕ ದಮನದ ವಿರುದ್ಧ ಹೋರಾಟಕ್ಕೆ ಪೂರಕವಾಗುತ್ತವೆ. ಈ ಪೂರಕತೆಯನ್ನು ಗುರುತಿಸಿ ನಮ್ಮ ದೇಶದ ಕಮ್ಯುನಿಸ್ಟ್ ಆಂದೋಲನ ಇಂದು ಈ ಎರಡು ಹೋರಾಟಗಳನ್ನು ಹೇಗೆ ಬೆಸೆಯುವುದು ಎಂದು ಚಿಂತಿಸಬೇಕಾಗಿದೆ. ಇಂತಹ ಬೆಸುಗೆಯಿಂದ ಮಾತ್ರವೇ ಶ್ರಮಜೀವಿಗಳ ಐಕ್ಯತೆಯನ್ನು ಬಲಗೊಳಿಸಿ ಜನತಾ ಪ್ರಜಾಪ್ರಭುತ್ವದತ್ತ ಸಾಗಲು ಸಾಧ್ಯ.



**ಜಾತಿ ದಮನದ ಮೂಲ**

ಭಾರತದಲ್ಲಿ ಜಾತಿ ವ್ಯವಸ್ಥೆ ಹೇಗೆ ವಿಕಾಸಗೊಂಡಿತು. ಏಕೆ ಉಳಿದುಕೊಂಡು ಬಂದಿದೆ ಎಂಬ ಬಗ್ಗೆ ದೊಡ್ಡ ಪ್ರಮಾಣದ ಸಾಹಿತ್ಯವಿದೆ. ಇವುಗಳಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳೂ ಇವೆ. ಅದೇನೇ ಇರಲಿ, ಸಾಮಾನ್ಯವಾಗಿ ಹೆಚ್ಚಿನವರು ಒಪ್ಪಿರುವ ಒಂದು ಸಂಗತಿಯೆಂದರೆ ಜಾತಿಯೆಂಬುದು ಬಂಡವಾಳಶಾಹಿಯ ಹಿಂದಿನ ಆರ್ಥಿಕ ಮೂಲ ಸಂರಚನೆಯ ಮೇಲಿರುವ ಸಂರಚನೆ, ಮಾರ್ಕ್ಸ್‌ವಾದಿ ಪದಗಳಲ್ಲಿ ಹೇಳುವುದಾದರೆ ಮೇಲ್‌ರಚನೆ. ಅಂದರೆ ಈ ದುಷ್ಟ ಜಾತಿ ವ್ಯವಸ್ಥೆ ತೊಲಗಬೇಕಾದರೆ ಬಂಡವಾಳಶಾಹಿಯ ಹಿಂದಿನ ಆರ್ಥಿಕ ರಚನೆಗಳು ನಿರ್ಮೂಲನವಾಗಬೇಕು. ಅಂದರೆ ನಮ್ಮ ಸಂದರ್ಭದಲ್ಲಿ ಪಾಳೆಯಗಾರಿ ಮತ್ತು ಅರೆ-ಪಾಳೆಯಗಾರಿ ವ್ಯವಸ್ಥೆಯನ್ನು ನಿರ್ಮೂಲನೆಗೊಳಿಸಬೇಕು.

ಇದರರ್ಥ ಒಂದು ಸಮಗ್ರ ಕಾರ್ಷಿಕ ಕ್ರಾಂತಿಯ ಮೂಲಕ ತಂತಾನೆ ಜಾತಿ ವ್ಯವಸ್ಥೆ ಮತ್ತು ಅದರೊಂದಿಗಿನ ಎಲ್ಲಾ ಸಾಮಾಜಿಕ ಪ್ರಜ್ಞೆಗಳೂ ತೊಲಗುತ್ತವೆ ಎಂದೇನಲ್ಲ. ಆದರೆ ಈ ಬಂಡವಾಳಶಾಹೀ-ಪೂರ್ವ ಕಾರ್ಷಿಕ ವ್ಯವಸ್ಥೆಯನ್ನು ಬದಲಿಸದೆ ಕೇವಲ ಹೃದಯ ಪರಿವರ್ತನೆಯ, ವರ್ತನೆಗಳನ್ನು ಬದಲಿಸಿಕೊಳ್ಳಿ ಎಂಬ ಮನವಿಗಳಿಂದ ಮಾತ್ರವೇ ಈ ದುಷ್ಟ ಸಾಮಾಜಿಕ ದಮನವನ್ನು ಕೊನೆಗಾಣಿಸಲು ಸಾಧ್ಯವಿಲ್ಲ ಎಂಬುದೂ ಅಷ್ಟೇ ನಿಜ.

ವಸಾಹತುಶಾಹಿ-ವಿರೋಧಿ ಸ್ವಾತಂತ್ರ್ಯ ಹೋರಾಟದೊಂದಿಗೆ ಒಂದು ವ್ಯಾಪಕ ಕಾರ್ಷಿಕ ಕ್ರಾಂತಿಯನ್ನು ತರುವ ಅವಕಾಶವಿತ್ತು. ಆದರೆ ನಮ್ಮ ರಾಷ್ಟ್ರೀಯ ಆಂದೋಲನದ ಮುಖಂಡತ್ವದ ರಾಜಿ ಮನೋಭಾವದಿಂದಾಗಿ ಇದು ಸಾಧ್ಯವಾಗಲಿಲ್ಲ. ನಮ್ಮ ಸ್ವಾತಂತ್ರ್ಯ ಆಂದೋಲನದೊಳಗಿನ ಎರಡು ಮುಖ್ಯ ಪ್ರವೃತ್ತಿಗಳು ಜಾತಿ ವ್ಯವಸ್ಥೆ ಮುಂದುವರೆಯಲು ಕಾರಣವಾದವು.


ಪುಟ 4 ಕ್ಕೆ

# ಅರ್ಕಾವತಿಗೆ ಹೈಕೋರ್ಟ್ ಅಂಕುಶ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಮಹತ್ವಾಕಾಂಕ್ಷೆಯ ಅರ್ಕಾತಿ ಬಡಾವಣೆ ನಿರ್ಮಾಣಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಹೊರಡಿಸಲಾಗಿದ್ದ ಅಧಿಸೂಚನೆಯನ್ನು ರದ್ದುಗೊಳಿಸುವ ಮಹತ್ವದ ತೀರ್ಪೊಂದನ್ನು ರಾಜ್ಯ ಹೈಕೋರ್ಟ್ ಇತ್ತೀಚೆಗೆ ನೀಡಿದೆ. ಭೂಮಿಯನ್ನು ಕಳೆದುಕೊಂಡ 300 ಕ್ಕೂ ಹೆಚ್ಚು ರೈತರು ಬಿಡಿಎ ವಿರುದ್ಧ ಭೂಸ್ವಾಧೀನಕ್ಕೆ 2004 ರ ಫೆಬ್ರವರಿಯಲ್ಲಿ ಹೊರಡಿಸಲಾದ ಅಂತಿಮ ಅಧಿಸೂಚನೆಯನ್ನು ಪ್ರಶ್ನಿಸಿ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಗೋಪಾಲಗೌಡರು, ಮೂರು ತಿಂಗಳಕಾಲ ವಾದ ಪ್ರತಿವಾದವನ್ನು ಆಲಿಸಿ, ಸಾವಿರಾರು ದಾಖಲೆಗಳನ್ನು ಪರಿಶೀಲಿಸಿ 180 ಪುಟಗಳಷ್ಟು ಸುದೀರ್ಘವಾದ ತೀರ್ಪು ನೀಡಿದರು. ಒಂದು ಎಕ್ರೆ, ಎರಡುಎಕ್ರೆ ಭೂಮಿಯನ್ನು ಹೊಂದಿದ್ದ ಬಡರೈತರು ಬಿಡಿಎ ಆಕ್ರಮಣವನ್ನು ವಿರೋಧಿಸಲಾಗದೆ ಕೊಟ್ಟಷ್ಟನ್ನು ಸ್ವೀಕರಿಸಿ ತಮ್ಮ ಹಣೆಬರಹವನ್ನು ಶಪಿಸಿಕೊಳ್ಳುತ್ತಿದ್ದರು. ಕೊನೆಗೆ ಅವರಲ್ಲಿ ಕೆಲವರು ಧೈರ್ಯ ತಂದುಕೊಂಡು ನ್ಯಾಯಾಲಯದ ಮೊರೆ ಹೋದರು. ರೈತರ ಸಂಕಷ್ಟಗಳ ಅನುಭವವನ್ನು ಹೊಂದಿದ್ದ ನ್ಯಾಯಮೂರ್ತಿಯವರು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಒಂದು ಐತಿಹಾಸಿಕ ತೀರ್ಪನ್ನು ನೀಡಿದರು.

ಸಣ್ಣಪುಟ್ಟ ರೈತರ ಬದುಕನ್ನೇ ಈ ಯೋಜನೆ ಕಿತ್ತುಕೊಂಡಿದೆ ಎಂದು ತಮ್ಮ ತೀರ್ಪಿನಲ್ಲಿ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಮೂರ್ತಿಗಳು ಭೂಮಿಯನ್ನು ಕಳೆದುಕೊಂಡ ರೈತರಿಗೆ ಪುನರ್ವಸತಿ ಕಲ್ಪಿಸದೆ ಅವರನ್ನು ಅವರ ಮನೆಗಳಿಂದ, ಅವರ ಕೃಷಿ ಭೂಮಿಯಿಂದ ಹೊರಹಾಕಿ ಬೀದಿಪಾಲು ಮಾಡಿರುವ ಬಗ್ಗೆ ತೀವ್ರ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ಮಹಾನಗರದ ಹೊರಗೆ ತನ್ನ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸಲು ಬಿಡಿಎಗೆ ಕಾನೂನಿನಲ್ಲಿ ಅವಕಾಶ ಇಲ್ಲವೆಂದೂ ಹಿಂದಿನ ಮುಖ್ಯಮಂತ್ರಿಗಳು (ಎಸ್.ಎಂ.ಕೃಷ್ಣ) ಸಚಿವ ಸಂಪುಟದ ಅಂಗೀಕಾರ ಇಲ್ಲದೆಯೇ ಈ ಬಡಾವಣೆ ನಿರ್ಮಾಣಕ್ಕೆ ಅನುಮತಿ ನೀಡಿದ್ದರು ಎಂಬ ಅಂಶಗಳು ಬಯಲಿಗೆ ಬಂದಿವೆ.

ರಾಷ್ಟ್ರದಲ್ಲೇ ಅತಿದೊಡ್ಡದೆನ್ನಲಾದ ಈ ಬಡಾವಣೆಯಲ್ಲಿ ಒಟ್ಟು 28,600 ನಿವೇಶನಗಳನ್ನು ಒದಗಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿತ್ತು. ಇದಕ್ಕಾಗಿ 16 ಗ್ರಾಮಗಳ ಸುಮಾರು 3339 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಪೂರ್ವಭಾವಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಮಧ್ಯದಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ಅಳಿಯ ಸಿದ್ಧಾರ್ಥ ಮತ್ತು ಡಿ.ಕೆ.ಶಿವಕುಮಾರ್ ತ್ರಿಮೂರ್ತಿಗಳ ಒತ್ತಡಕ್ಕೆ ಮಣಿದು ಸುಮಾರು 600 ಎಕರೆ ಭೂಮಿಯನ್ನು ಡೀನೋಟಿಫೈ ಮಾಡಿ 2750 ಎಕರೆ ಭೂಮಿಯನ್ನು ಸ್ವಾಧೀನಪಡಿಸಲು ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು. ಬಡಾವಣೆಯ ನಿರ್ಮಾಣದ ಅಂದಾಜು ವೆಚ್ಚ ರೂ. 933.47 ಕೋಟಿ. ನಿವೇಶನಗಳಿಗಾಗಿ ಅರ್ಜಿದಾರರ ಸಂಖ್ಯೆ 2,32,000. ಅರ್ಜಿದಾರರಿಂದ ಸಂಗ್ರಹಿಸಿ ಹಣ 981.36 ಕೋಟಿ ರೂ. 'ಸ್ಥಿತಿವಂತರ ಕಲ್ಯಾಣಕ್ಕಾಗಿ ಸರ್ಕಾರ ವಿವೇಚನೆಯಿಲ್ಲದೆ ರೈತರ ಭೂಮಿಯನ್ನು ಕಿತ್ತುಕೊಂಡಿದೆ' ಎಂದು ಸರ್ಕಾರದ ಕ್ರಮವನ್ನು ಟೀಕಿಸಿರುವ ನ್ಯಾಯಮೂರ್ತಿಗಳು ರೈತರಿಗೆ ಜಮೀನು ಹಿಂದಿರಿಗಿಸುವಂತೆ ಆದೇಶಿಸಿದ್ದಾರೆ. ಬೆಂಗಳೂರು, 'ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್' ಪ್ರಕರಣದಲ್ಲಿ ಹೈಕೋರ್ಟಿನಿಂದ ಈಗಾಗಲೇ ಛೀಮಾರಿ ಹಾಕಿಸಿಕೊಂಡ ರಾಜ್ಯ ಸರ್ಕಾರಕ್ಕೆ ಅರ್ಕಾವತಿ ಬಡಾವಣೆ ಕುರಿತಾದ ಈ ತೀರ್ಪು ತೀವ್ರ ಮುಖಭಂಗವನ್ನು ಉಂಟುಮಾಡಿದೆ. ಹಿಂದಿನ ಸರ್ಕಾರ ಜೈಕರ್ ಜರೋಮ್ ಎಂಬ ಭಾರಿ ಪ್ರಾಮಾಣಿಕ ಅಧಿಕಾರಿ ಎಂಬ ಮುಖವಾಡದ ಅಧಿಕಾರಿಯ ಮೂಲಕ ನಿಯಮ ಗಳನ್ನೆಲ್ಲಾ ಗಾಳಿಗೆ ತೂರಿ ಆತುರಾತುರವಾಗಿ ಅಗತ್ಯಕ್ಕಿಂತ ಹೆಚ್ಚು ಭೂಮಿಯನ್ನು ಸ್ವಾಧೀನ ಮಾಡಿ, ಭಾರೀ ದೊಡ್ಡ ಭೂಗಳ್ಳತನ ಮಾಡಿರುವುದು ಈ ತೀರ್ಪಿನಿಂದ ಹೊರಬಂದಂತಾಗಿದೆ. ಸರ್ಕಾರ ಈ ಹಗರಣದಿಂದ ಹೇಗೆ ಹೊರಬರುತ್ತದೆ ಎಂಬುದು ಕುತೂಹಲದ ಪ್ರಶ್ನೆಯಾಗಿದೆ.



ಬೆಂಗಳೂರಿಗೆ ಇಂದು ವಲಸೆ ಬರುತ್ತಿರುವವರ ಸಂಖ್ಯೆ ಸಿಕ್ಕಾಪಟ್ಟೆ ಬೆಳೆಯುತ್ತಿರುವುದರಿಂದ ಇಲ್ಲಿ ಭೂಮಿಯ ಬೆಲೆ ಆಕಾಶಕ್ಕೇರಿದೆ. ಇಂತಹ ಪರಿಸ್ಥಿತಿಯಲ್ಲಿ ಕಡಿಮೆ ಬೆಲೆಗೆ ಸಿಗುವ ಸರ್ಕಾರಿ ನಿವೇಶನಗಳಿಗಾಗಿ ಪ್ರಯತ್ನ ಪಡುವುದು ಸಹಜವಾಗಿದೆ. ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಈ ಬಡಾವಣೆಯ ನಿವೇಶನಗಳಿಗಾಗಿ ಹಾಕಿರುವ ಮಧ್ಯಮವರ್ಗದವರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ. ಸರ್ಕಾರದಲ್ಲಿದ್ದವರು ಮಾಡಿದ ತಪ್ಪಿಗೆ ಇವರು ಶಿಕ್ಷೆ ಅನುಭವಿಸುವಂತಾಗಿದೆ. ಪುಡಾರಿ ರಾಜಕಾರಣಿಗಳ ಹಣದಾಸೆ ಅಮಾಯಕ ರೈತರನ್ನು ಹಾಗೂ ನಿವೇಶನಕ್ಕಾಗಿ ಹಾತೊರೆಯುತ್ತಿರುವ ಮಧ್ಯಮ ವರ್ಗದ ಜನಗಳು ಈ ರೀತಿ ಮೋಸಕ್ಕೆ ಒಳಗಾಗುವುದು ತಪ್ಪುವುದೆಂದು?

**- ನಿತ್ಯಾನಂದಸ್ವಾಮಿ**

# ಮಹಿಳೆಯ ಮೇಲೆ ಹಲ್ಲೆ, ಅತ್ಯಾಚಾರ

## ಅಪರಾಧಿಗಳ ಬಂಧನಕ್ಕೆ ಆಗ್ರಹ

**ಕೂಲಿಕಾರ ಮಹಿಳೆಯ ಮೇಲೆ ಜಮೀನ್ದಾರನು ಅತ್ಯಾಚಾರ ನಡೆಸಿ, ಹಲ್ಲೆ ಮಾಡಿ ಕೈಕಾಲು ಮುರಿದ ಅಮಾನವೀಯ ಪ್ರಕರಣ ಮಂಡ್ಯ ಜಿಲ್ಲೆಯಲ್ಲಿ ನಡೆದಿದೆ. ಈ ಪ್ರಕರಣದಲ್ಲಿ ಅಪರಾಧಿಗಳು ಖುಲಾಸೆಯಾಗುವಂತೆ ಪೊಲೀಸರು, ಸರ್ಕಾರಿ ವೈದ್ಯರು 'ನೋಡಿ'ಕೊಳ್ಳುತ್ತಿದ್ದಾರೆ. ಇದರ ವಿರುದ್ಧ ನ್ಯಾಯ ಸಿಗುವವರೆಗೂ ಸೆಣಸಲು, ಹೋರಾಟ ಆರಂಭಗೊಂಡಿದೆ.**


ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕಿನ ಹುಳ್ಳೇನಹಳ್ಳಿ ಗ್ರಾಮದ ಕೂಲಿಕಾರ ಮಹಿಳೆ ಶಾಂತಮ್ಮ ಅವರ ಮೇಲೆ ಸಾಮೂಹಿಕ ಅತ್ಯಾಚಾರವೆಸಗಿ ಅವಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ಕರಡಹಳ್ಳಿಯ ಜಮೀನ್ದಾರ ಜವರೇಗೌಡರ ಮಗ ಹರೀಶ ಮತ್ತು ಇತರರನ್ನು ತಕ್ಷಣ ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದೂ, ಮಂಡ್ಯ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಳೆದ ಒಂದುವರೆ ತಿಂಗಳುಗಳಿಂದ ಚಿಕಿತ್ಸೆ ಪಡೆಯುತ್ತಿರುವ ಶಾಂತಮ್ಮಳ ಚಿಕಿತ್ಸೆ ಮತ್ತು ಕುಟುಂಬದ ನಿರ್ವಹಣೆಗೆ ಅಗತ್ಯ ಆರ್ಥಿಕ ನೆರವು ನೀಡಬೇಕೆಂದು ಒತ್ತಾಯಿಸಿ ಏಪ್ರಿಲ್ 18,2005 ರಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳ ಜಂಟಿ ಆಶ್ರಯದಲ್ಲಿ ಮಂಡ್ಯ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಮುಷ್ಕರ ಪ್ರದರ್ಶನ ನಡೆಸುವ ಮೂಲಕ ಸರ್ಕಾರಕ್ಕೆ ಮನವಿಯೊಂದನ್ನು ಸಲ್ಲಿಸಲಾಯಿತು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿ, ಜಿಲ್ಲಾ ಮುಖಂಡರಾದ ಪುಟ್ಟಮಾದು, ಮಂಡ್ಯ ತಾಲೂಕು ಅಧ್ಯಕ್ಷರಾದ ಗಾಯತ್ರಿ, ತಾಲ್ಲೂಕು ಕಾರ್ಯದರ್ಶಿ ಎಬಿನ್ಯೆಜರ್, ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಮುಖಂಡರಾದ ಕುಮಾರಿ ಸಿ., ಮಂಡ್ಯ ತಾಲ್ಲೂಕು ಉಪಾಧ್ಯಕ್ಷರಾದ ಮುರುವಾಯಿ, ಮಳವಳ್ಳಿ ತಾಲ್ಲೂಕ್ ಅಧ್ಯಕ್ಷರಾದ ದೇವಿ, ಎಸ್.ಎಫ್.ಐ ಜಿಲ್ಲಾ ಮುಖಂಡರಾದ ಯಶವಂತ್ ಮೊದಲಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



**ಪ್ರಕರಣದ ವಿವರ :** ಹುಳ್ಳೇನಹಳ್ಳಿಯ ಮರೀಗೌಡರ ಹೆಂಡತಿ ಶಾಂತಮ್ಮಬಡ ಕೂಲಿಕಾರ ಮಹಿಳೆ. ಪಕ್ಕದ ಕರಡಹಳ್ಳಿಯ ಜಮೀನ್ದಾರ ಜವರೇಗೌಡರ ಭೂಮಿಗೆ ಕೂಲಿ ಆಳುಗಳನ್ನು ಕರೆದುಕೊಂಡು ಹೋಗಿ ಅವರ ಜತೆಯಲ್ಲಿ ತಾನೂ ಕೆಲಸ ಮಾಡಿಕೊಂಡು ಬರುತ್ತಿದ್ದವಳು. ಅಂದು ಸಂಜೆ, ಅಂದರೆ ಮಾರ್ಚ್ 6ರ ಸಂಜೆ ಬಾಳೆ ತೋಟಕ್ಕೆ ನೀರು ಕಟ್ಟುತ್ತಿರುವಾಗ ಶಾಂತಮ್ಮ ಇದ್ದಲ್ಲಿಗೆ ಬಂದ ಜವರೇಗೌಡರ ಮಗ ಹರೀಶ ರೂ.500ರ ನೋಟೊಂದನ್ನು ತೋರಿಸಿ ಲಜ್ಜೆಗೆಟ್ಟವನಾಗಿ, ತನ್ನನ್ನು ತೃಪ್ತಿಪಡಿಸುವಂತೆ ಒತ್ತಾಯಿಸಿದ್ದಾನೆ. ಶಾಂತಮ್ಮ ಪ್ರತಿಭಟಿಸಿ, ಹಣವನ್ನು ತಿರಸ್ಕರಿಸಿ ಮನೆಗೆ ವಾಪಸ್ ಬಂದಿದ್ದಾಳೆ.

ಶಾಂತಮ್ಮಳಿಂದ ಮುಖಭಂಗಕ್ಕೆ ಒಳಗಾದ ಕಾಮಾಂಧ ಹರೀಶ ಸೇಡು ತೀರಿಸಿಕೊಳ್ಳಲು ಹೊಂಚು ಹಾಕುತ್ತಿದ್ದಾಗ, ಮರುದಿನ ಬೆಳಿಗ್ಗೆ ಮನೆಯಲ್ಲಿ ಸಾಕಿದ್ದ ಆಡುಗಳಿಗಾಗಿ ಪಕ್ಕದ ಗದ್ದೆಯಲ್ಲಿ ಹುಲ್ಲು ಕೀಳುತ್ತಿದ್ದ ಶಾಂತಮ್ಮಳನ್ನು ಹರೀಶ ನೋಡಿದ್ದಾನೆ. ನೇರವಾಗಿ ಅವಳಿದ್ದಲ್ಲಿಗೆ ಹೋಗಿ ಅವಳ ಬಲ ತೋಳನ್ನು ಹಿಡಿದು ಎಳೆದಿದ್ದಾನೆ. ಶಾಂತಮ್ಮ ಕೊಸರಿಕೊಳ್ಳಲು ಪ್ರಯತ್ನಿಸಿದ್ದಾಳೆ. ಹರೀಶನ ಬಿಗಿ ಹಿಡಿತದಿಂದ ಬಿಡಿಸಿಕೊಳ್ಳುವ ಪ್ರಯತ್ನದಲ್ಲಿ ಅವಳ ಬಲತೋಳು ಮುರಿಯುತ್ತದೆ. ಶಾಂತಮ್ಮ ನೋವಿನಿಂದ ಚೀರಿಕೊಳ್ಳುತ್ತಾಳೆ. ಪರಿಸ್ಥಿತಿ ಕೈಮೀರಿ ಹೋಗುತ್ತಿರುವುದನ್ನು ಗಮನಿಸಿದ ಹರೀಶ, "ತೆಂಗಿನಕಾಯಿ ಕಳ್ಳಿಯನ್ನು ಹಿಡಿದಿದ್ದೇನೆ, ಬನ್ರೋ" ಎಂದು ಕೂಗಿ ತಮ್ಮ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದ ಆಳುಗಳನ್ನು ಕೂಗಿ ಕರೆದಿದ್ದಾನೆ. ಧಾವಿಸಿಬಂದ ಸುಧನ್, ಶೀನ, ಫಣಿ ಮತ್ತು ನಾಗ ಎಂಬವರು ಯಜಮಾನನ ಆಜ್ಞೆಯಂತೆ ಒದ್ದಾಡುತ್ತಿದ್ದ ಶಾಂತಮ್ಮಳನ್ನು ಎಳೆದೊಯ್ದು ಮರಕ್ಕೆ ಕಟ್ಟಿಹಾಕುತ್ತಾರೆ. ಇವರೆಲ್ಲರು ಸೇರಿ ಕೈಗಳಿಂದ, ಕೋಲುಗಳಿಂದ ಮಾಡಿದ ಹಲ್ಲೆಗೆ ಅವಳ ಕಾಲುಗಳು ಮುರಿಯುತ್ತವೆ. ಕೈಗಳ ಬೆರಳುಗಳು ಜಜ್ಜಿಹೋಗಿರುತ್ತವೆ. ಅಷ್ಟೊತ್ತಿಗೆ ಧರ್ಮ ಎಂಬ ಅಧರ್ಮಿಯೊಬ್ಬನು ಅಲ್ಲಿಗೆ ಬರುತ್ತಾನೆ. "ಕಳ್ಳಿಯನ್ನು ಹಿಡಿದಿದ್ದೇವೆ; ಏನಾದರೂ ಮಾಡಿಕೊ" ಎಂದು ಹರೀಶ್ ಕೊಟ್ಟ ಸೂಚನೆಯಂತೆ ಆತ ಬಲವಂತದಿಂದ ಅವಳ ಮೇಲೆ ಅತ್ಯಾಚಾರ ಮಾಡುತ್ತಾನೆ. ಇದರಿಂದ ಇನ್ನುಳಿದವರಿಗೂ ಧೈರ್ಯ ಬಂದು, ಹರೀಶ್ ಹಾಗೂ ಉಳಿದವರು ಒಬ್ಬೊಬ್ಬರಾಗಿ ತಮ್ಮ ಕಾಮತೃಷೆಯನ್ನು ತೀರಿಸಿಕೊಳ್ಳುತ್ತಾರೆ. ಯಾರ ಮುಂದೆ ಬಾಯಿ ಬಿಟ್ಟರೆ ಸುಟ್ಟುಹಾಕುವುದಾಗಿ ಬೆದರಿಸುತ್ತಾನೆ. ಕಟ್ಟಿದ ಹಗ್ಗಗಳನ್ನು ಬಿಚ್ಚಿದಾಗ ಶಾಂತಮ್ಮ ಪ್ರಜ್ಞೆತಪ್ಪಿ ಕುಸಿದುಬೀಳುತ್ತಾಳೆ.

ಶಾಂತಮ್ಮಳ ಗಂಡ ಹಾಗೂ ಅವಳ ಅತ್ತೆಯನ್ನು ಕರೆಯಿಸಿ 'ಮನೆಯ ಅಟ್ಟದ ಮೇಲಿಂದ ಬಿದ್ದು ಕೈಕಾಲು ಮುರಿದುಕೊಂಡಿದ್ದಾಳೆ' ಎಂದು ಆಸ್ಪತ್ರೆಯಲ್ಲಿ ಹೇಳಿಕೆ ನೀಡಬೇಕೆಂದೂ ಇಲ್ಲದಿದ್ದರೆ ನಿಮಗೂ ಇದೇ ರೀತಿ ಮಾಡಲಾಗುವುದೆಂದು ಬೆದರಿಸಿ ಶಾಂತಮ್ಮಳನ್ನು ಆಸ್ಪತ್ರೆಗೆ ಸಾಗಿಸಲು



ಹೇಳುತ್ತಾರೆ. ಸ್ಥಳೀಯ ವೈದ್ಯಾಧಿಕಾರಿ ಇವರ ಹೇಳಿಕೆಗೆ ಸಂದೇಹ ವ್ಯಕ್ತಪಡಿಸಿ ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಶಿಫಾರಸು ಮಾಡುತ್ತಾನೆ. ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಾದ ಶಾಂತಮ್ಮ ಕೆಲವು ದಿನಗಳ ನಂತರ, ಚಿಕಿತ್ಸೆ ನೀಡುತ್ತಿದ್ದ ವೈದ್ಯ ಡಾ. ಪುಟ್ಟಸ್ವಾಮಿಗೌಡರಿಗೆ ತಾನು ಅಟ್ಟದ ಮೇಲಿಂದ ಬಿದ್ದುದಲ್ಲವೆಂದೂ, ತನ್ನನ್ನು ಹೊಡೆದು ಅತ್ಯಾಚಾರ ಮಾಡಲಾಗಿದೆ ಎಂದು ತಿಳಿಸಿದರು. ಅಪರಾಧಿಗಳಿಂದ ಅಷ್ಟರೊಳಗೆ ಪ್ರಭಾವಿತನಾದ ವೈದ್ಯಾಧಿಕಾರಿ ಶಾಂತಮ್ಮಳ ಮನವಿಗೆ ಕಿವಿಗೊಡುವುದಿಲ್ಲ.

ಸುಮಾರು ಒಂದು ತಿಂಗಳಿಂದ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಾ, ತನಗಾದ ಅನ್ಯಾಯದಿಂದ ನರಳುತ್ತಿದ್ದ ಶಾಂತಮ್ಮ ಆಕಸ್ಮಿಕವಾಗಿ ಪತ್ರಕರ್ತರೊಬ್ಬರ ಕಣ್ಣಿಗೆ ಬಿದ್ದಾಗ ಹಲ್ಲೆ ಹಾಗೂ ಅತ್ಯಾಚಾರದ ಪ್ರಕರಣ ಪತ್ರಿಕೆಗಳಲ್ಲಿ ಸುದ್ದಿಯಾಗುತ್ತದೆ. ಜನವಾದಿ ಮಹಿಳಾ ಸಂಘಟನೆ ಹಾಗೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಮುಖಂಡರು ಜಿಲ್ಲಾ ಆಸ್ಪತ್ರೆಗೆ ಭೇಟಿ ಕೊಟ್ಟು ಶಾಂತಮ್ಮಳಿಂದ ಎಲ್ಲ ವಿವರಗಳು ಕೇಳಿಕೊಂಡಿದ್ದಾರೆ. ಎರಡೂ ಸಂಘಟನೆ ಗಳ

ಪುಟ 11 ಕ್ಕೆ

# ವಿಷಪೂರಿತ ಸಾರಾಯಿ ಕುಡಿದು ಸಾವು - ನಿಜವಾದ ತಪ್ಪಿತಸ್ತರಿಗೆ ಶಿಕ್ಷೆ ಇಲ್ಲವೆ?

**ವಿಷಪೂರಿತ ಸಾರಾಯಿ ಕುಡಿದು ಸಾಯುವ ದುರಂತ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಆಗ ಸಮಾಧಾನಕ್ಕೆಂದು ತನಿಖೆ, ಶಿಕ್ಷೆಯ ಸರ್ಕಾರಿ ಆದೇಶಗಳು ಹೊರಬೀಳುತ್ತವೆ. ಸಂತ್ರಸ್ತರಿಗೆ ಒಂದಿಷ್ಟು ಪರಿಹಾರ ಘೋಷಿಸಲಾಗುತ್ತದೆ. ನಂತರ ಮರೆಯಾಗುತ್ತವೆ, ಎಂದಿನಂತೆ ಯಥಾಸ್ಥಿತಿ. ಇಂತಹ ಜನರ ಜೀವನಗಳನ್ನು ಬಲಿತೆಗೆದುಕೊಳ್ಳುವ ಹಂತಕರಿಗೆ ಶಿಕ್ಷೆ ಇಲ್ಲವೆ? ಯಾಕಿಲ್ಲ? ಇತ್ತೀಚೆಗೆ ನೆಲಮಂಗಲದಲ್ಲಿ ಸಂಭವಿಸಿದ ದುರ್ಘಟನೆ ಒಳಹೊರಗುಗಳ ಸತ್ಯಪರೀಕ್ಷೆ.....**

ವಿಷಪೂರಿತ ಸಾರಾಯಿ ಸೇವನೆಯಿಂದ ದಕ್ಷಿಣ ಭಾರತದ ರಾಜ್ಯಗಳಲ್ಲಿ ಸಾವು ಸರ್ವಸಾಮಾನ್ಯವಾಗಿದೆ. ಈವರೆಗೆ ದಕ್ಷಿಣ ಭಾರತದ ರಾಜ್ಯಗಳಲ್ಲಿ ನಡೆದ ವಿಷಪೂರಿತ ಸಾರಾಯಿ ಸೇವನೆ ಸಾವಿಗೆ ಕಾರಣವಾದ ನಿಜವಾದ ತಪ್ಪಿತಸ್ಥರಿಗೆ ಶಿಕ್ಷೆ ಆದ ನಿದರ್ಶನಗಳೇ ಇಲ್ಲ. ಈ ಸಾವುಗಳು ಕೊಲೆಗೆ ಸಮಾನ. ತಪ್ಪಿತಸ್ತರಿಗೆ ಕಾನೂನು ಪ್ರಕಾರ ಜೀವಾವಧಿ ಅಥವಾ ಮರಣದಂಡನೆ ಶಿಕ್ಷೆ ಆಗಬೇಕು. ಆದರೆ ಶಿಕ್ಷೆಯಾಗಿರುವುದು ಕೇವಲ ಚಿಲ್ಲರೆ ಮಾರಾಟಗಾರರಿಗೆ. ಅದರಲ್ಲೂ ವಿಷಪೂರಿತ ಸಾರಾಯಿ ಎಂದು ತಿಳಿಯದೆ ಮಾರಾಟ ಮಾಡಿದವರಿಗೆ ಮಾತ್ರ. ಇದರಲ್ಲಿ ಹೆಚ್ಚಿನ ಮಾರಾಟ ಅಧಿಕೃತ ಸಾರಾಯಿ ಗುತ್ತಿಗೆದಾರರಿಂದಲೇ ನಡೆದಿದೆ.

**ಏಕೆ ಈ ಸಾವಿಗೆ ಕಾರಣರಾದವರಿಗೆ ಶಿಕ್ಷೆ ಆಗುತ್ತಿಲ್ಲ?**

ವಿಷಪೂರಿತ ಸಾರಾಯಿ ಸೇವನೆ ಸಾವಾದಗಲೆಲ್ಲ ಕೇಳಿ ಬರುವ ಸಾಮಾನ್ಯ ಮಾತು ಕಳ್ಳಭಟ್ಟಿ ದುರಂತ ಸಾವು ಎಂದು. ಆದರೆ ವಾಸ್ತವವಾಗಿ ಕಳ್ಳಭಟ್ಟಿ ಸಾರಾಯಿ ಸೇವನೆಯಿಂದ ಸಾವಾದ ನಿದರ್ಶನಗಳು ತೀರಾ ಕಡಿಮೆ. ಸಾರಾಯಿ ಸೇವನೆಯಿಂದ ಆಗುವ ಸಾವುಗಳಿಗೆ ಕಾರಣ ಕಲಬೆರಕೆ ಸ್ಪಿರಿಟ್ (ಮಧ್ಯಸಾರ). ಇತ್ತೀಚಿಗೆ ಬೆಂಗಳೂರಿನ ನೆಲಮಂಗಲದ ಚಿಕ್ಕಬಿದರೆ ಕಲ್ಲು ಗ್ರಾಮದಲ್ಲಿ ಆದ ಸಾವು ಕೂಡಾ ಸ್ಪಿರಿಟ್ ಕಲಬೆರಕೆಯಿಂದ ಹೊರತು ಕಳ್ಳಭಟ್ಟಿ ಸಾರಾಯಿ ಸೇವನೆಯಿಂದ ಅಲ್ಲ. ನೆಲಮಂಗಲದಲ್ಲಿ ಆದ ಸಾವು ಅಧಿಕೃತ ಸಾರಾಯಿ ಪೂರೈಕೆದಾರರಿಂದ ಕೊಂಡುಕೊಂಡ ಸಾರಾಯಿಯಿಂದಲೇ. ಬೆಂಗಳೂರಿನ ಅಧಿಕೃತ ಸಾರಾಯಿ ಗುತ್ತಿಗೆದಾರರು ಅಬಕಾರಿ ವಲಯದಲ್ಲಿ ದೊಡ್ಡ ಕುಳ. ಹಾಲಿ ಹಣಕಾಸು ಸಚಿವರು ಹಾಗೂ ಅಬಕಾರಿ ಸಚಿವರ ಬಲಗೈ ಬಂಟರು. ಇತ್ತೀಚಿನ ಪತ್ರಿಕಾ ವರದಿಗಳ ಪ್ರಕಾರ ಈ ಸಾರಾಯಿ ಗುತ್ತಿಗೆದಾರರು ಹಾಲಿ ಅಬಕಾರಿ ಮಂತ್ರಿಗಳ ಅಡುಗೆ ಮನೆಯವರೆಗೆ ಪ್ರವೇಶಕ್ಕೆ ಅನುಮತಿ ಇರುವವರು. ಈ ಅಧಿಕೃತ ಸಾರಾಯಿ ಗುತ್ತಿಗೆದಾರರಿಗೆ ತುಮಕೂರಿನ ಕುಣಿಗಲ್ ಬಳಿ ಸ್ವಂತ ಸ್ಪಿರಿಟ್ ತಯಾರಿಸುವ ಕಾರ್ಖಾನೆ ಇದೆ. ನೆಲಮಂಗಲದ ದುರಂತದಲ್ಲಿ ಸಾವಿಗೀಡಾದವರು ಕುಡಿದದ್ದು ಅಧಿಕೃತ ಗುತ್ತಿಗೆದಾರರ ಮೊಹರುವುಳ್ಳ ಪ್ಯಾಕೇಟ್ ಸಾರಾಯಿ ಅನ್ನೇ. ದುರಂತದ 4 ದಿನಗಳ ಬಳಿಕ ನೆಲಮಂಗಲದ ಬಳಿ ಹೊಂಡವೊಂದರಲ್ಲಿ ಸಾವಿರಾರು ಸಾರಾಯಿ ಪ್ಯಾಕೆಟ್‌ಗಳು ಪತ್ತೆಯಾಗಿದೆ. ಈ ಪ್ಯಾಕೆಟ್‌ಗಳ ಮೇಲೆ ಅಧಿಕೃತ ಸಾರಾಯಿ ಗುತ್ತಿಗೆದಾರರ ಹೆಸರು ಇದೆ. ಆದರೆ ವಿಚಿತ್ರವೆಂದರೆ ಈ ಸಾರಾಯಿ ಪತ್ತೆಯಾದ ಕೂಡಲೇ ಪೊಲೀಸರು ಹಾಗೂ ಅಬಕಾರಿ ಇಲಾಖೆಯವರ ಬಾಯಿಂದ ತಕ್ಷಣವೇ ಬಂದ ಮಾತೆಂದರೆ 'ಇದು ನಕಲಿ ಸಾರಾಯಿ'. ಯಾವುದೇ ಪರೀಕ್ಷೆಗೆ ಒಳಪಡಿಸದೆ, ಯಾವುದೇ ತನಿಖೆ ನಡೆಸದೆ ನೇರವಾಗಿ ಅಬಕಾರಿ ಗಟ್ಟಿಕುಳ, ಆಳುವ ವರ್ಗಗಳ ಬಲಗೈ ಬಂಟರನ್ನು ರಕ್ಷಿಸುವ ಸಲುವಾಗಿ ಪೊಲೀಸರ ಹಾಗೂ ಅಬಕಾರಿ ಇಲಾಖೆಯವರು ನೇರವಾಗಿ ಈ ಮಾತು ಆಡಿರುತ್ತಾರೆ.

ಈ ದುರಂತಕ್ಕೆ ಕಾರಣರಾದವರಲ್ಲಿ ಪೊಲೀಸರು ಈವರೆಗೆ ಬಂಧಿಸಿರುವುದರಲ್ಲಿ ಎಲ್ಲರೂ ಚಿಲ್ಲರೆ ಸಾರಾಯಿ ಮಾರಾಟಗಾರರು, ಪೊಲೀಸರು ಹುಡುಕುತ್ತಿರುವ ಇನ್ನೊಬ್ಬ ವ್ಯಕ್ತಿ ಕೂಡಾ ಈ ದುರಂತಕ್ಕೆ ಮೂಲ ಕಾರಣಕರ್ತನಲ್ಲ ಎಂದು ಸ್ಥಳೀಯ ಗ್ರಾಮಸ್ಥರು ಹೇಳುತ್ತಿದ್ದಾರೆ. ಈ ದುರಂತಕ್ಕೆ ಕಾರಣವಾದದ್ದು ಕಲಬೆರಕೆ ಸ್ಪಿರಿಟ್. ಮಿಥೈಲ್ ಮತ್ತು ಇಥೈಲ್ ಸ್ಪಿರಿಟ್‌ಗಳ ಅದಲು-ಬದಲಾಗುವಿಕೆಯೇ ಸಾರಾಯಿ ಸೇವನೆ ದುರಂತ ಸಾವುಗಳಿಗೆ ಕಾರಣ. ನೆಲಮಂಗಲದ ದುರಂತಕ್ಕೆ ಕಾರಣವಾದ ಈ ಸ್ಪಿರಿಟ್ ಎಲ್ಲಿಂದ ಬಂದಿತು? ಅಧಿಕೃತ ಸಾರಾಯಿ ಗುತ್ತಿಗೆದಾರರಿಂದಲೇ? ಎಂಬ ವಿಷಯಗಳ ಪತ್ತೆಗೆ ಪೊಲೀಸರು ಹಾಗೂ ಸರ್ಕಾರ ಮುಂದಾಗುತ್ತಿಲ್ಲ.

ಲಾರಿ ಚಾಲಕನೊಬ್ಬ ಹೇಳಿದ ವಿಷಯವೆಂದರೆ ಕಳೆದ ಕೆಲವು ವರ್ಷಗಳ ಮುಂಚೆ ತಮಿಳುನಾಡಿನಲ್ಲಿ ವಿಷಪೂರಿತ ಸಾರಾಯಿ ಸೇವನೆ ಸಾವು ಪದೇಪದೆ ಸಂಭವಿಸುತ್ತಿತ್ತು. ಹಿಂದೆ ತಮಿಳುನಾಡಿಗೆ ಕರ್ನಾಟಕದ ಮೇಲೆ ಹೇಳಿದ ಗಟ್ಟಿಕುಳ, ಸರ್ಕಾರದ ಬಲಗೈ ಬಂಟ ಅಬಕಾರಿ ಗುತ್ತಿಗೆದಾರರು ಸ್ಪಿರಿಟ್ ಸರಬರಾಜು ಮಾಡುತ್ತಿದ್ದರು. ಕರ್ನಾಟಕದಿಂದ ಸ್ಪಿರಿಟ್ ಸರಬರಾಜು ಆಗುತ್ತಿದ್ದದ್ದು ನಿಂತ ಮೇಲೆ ತಮಿಳುನಾಡಿನಲ್ಲಿ ಸಾರಾಯಿ ಸೇವನೆಯಿಂದ ಸಾವು ಸಂಭವಿಸಿದ ನಿದರ್ಶನಗಳಿಲ್ಲವಂತೆ. ಇದೊಂದು ಪ್ರಚಾರ ಪಡೆಯದ ಸತ್ಯಸಂಗತಿ. ಇತ್ತೀಚೆಗೆ ತಮಿಳುನಾಡು ಸರ್ಕಾರ ಮಿಥೈಲ್ ಆಲ್ಕೋಹಾಲ್ ಮೇಲೆ ನಿಷೇಧಾ ಸಹ ಹೇರಿದೆ.

ವಿಷಪೂರಿತ ಸಾರಾಯಿ ಸೇವನೆ ಸಾವುಗಳು ಸಂಭವಿಸುವುದು ಹಬ್ಬ ಹಾಗೂ ಮದುವೆ ಸಂದರ್ಭಗಳಲ್ಲಿ. ಬೇಡಿಕೆ ಹೆಚ್ಚಾದಾಗ ಅಧಿಕೃತ ಸಾರಾಯಿ ಗುತ್ತಿಗೆದಾರರು ಕೈಗಾರಿಕಾ ಬಳಕೆಗೆ ಇರುವ ಸ್ಪಿರಿಟ್ ಅನ್ನು ನೀರು ಬೆರೆಸಿ ಸಾರಾಯಿ ಮಾರಾಟಗಾರರಿಗೆ ಒದಗಿಸುತ್ತಾರೆ. ನೀರು



ಬೆರೆಸುವ ಪ್ರಮಾಣ ಹೆಚ್ಚು ಕಡಿಮೆ ಆಗಿ ಸಾವು ಸಂಭವಿಸುತ್ತದೆ. ಆದರೆ ಯಾವಾಗಲು ಈ ಸಾವಿಗೆ ಕಳ್ಳಭಟ್ಟಿ, ಸಾರಾಯಿ ಬೇಯಿಸುವವರನ್ನು ಕಾರಣ ಮಾಡಲಾಗುತ್ತಿದೆ. ಅಧಿಕೃತ ಸಾರಾಯಿ ಗುತ್ತಿಗೆದಾರರನ್ನು, ಸ್ಪಿರಿಟ್ ಕಳ್ಳ ಸಾಗಾಣಿಕೆದಾರರನ್ನು ಶಿಕ್ಷಿಸಿದ ಪ್ರಸಂಗಗಳೇ ಇಲ್ಲ.

80 ರ ದಶಕದಲ್ಲಿ ಬೆಂಗಳೂರಿನಲ್ಲಿ ನಡೆದ ವಿಷಪೂರಿತ ಸಾರಾಯಿ ಸೇವನೆ ದುರಂತದಲ್ಲಿ ಸಾವಿರಾರು ಜನರು ಮೃತಪಟ್ಟಿದ್ದರು. ಈದುರಂತದ ರೂವಾರಿಯನ್ನು ಕಣ್ಣಾರೆ ಕಾಣುವ ಪ್ರಸಂಗವೊಂದು ಒದಗಿತ್ತು. ಮದುವೆ ಸಮಾರಂಭದಲ್ಲಿ ವಿರಾಜಮಾನವಾಗಿದ್ದ ವ್ಯಕ್ತಿಯೊಬ್ಬನಿಗೆ ಎಲ್ಲಾ ಆಮಂತ್ರಿತರು ಸಲಾಂ ಹೊಡೆಯುತ್ತಿದ್ದರು. ಕುತೂಹಲದಿಂದ ಈತ ಯಾರೆಂದು ವಿಚಾರಿಸಿದಾಗ ಗೊತ್ತಾಗಿದ್ದು ಈತನೇ 80 ರ ದಶಕದ ಬೆಂಗಳೂರಿನ ಸಾರಾಯಿ ದುರಂತ ಸಾವಿಗೆ ಕಾರಣಕರ್ತನಾದ ಷಾ ಸುಲ್ತಾನ್. ಈತ ಅಂದಿನ ಕಾಂಗ್ರೆಸ್ ಮುಖ್ಯಮಂತ್ರಿಗಳ, ಕಾಂಗ್ರೆಸ್ ಲೋಕಸಭಾ ಸದಸ್ಯರ ಆಪ್ತಮಿತ್ರ. ಕುಟುಂಬ ಸ್ನೇಹಿತ. ಸಾವಿರಾರು ಜನರ ಸಾವಿಗೆ ಕಾರಣನಾದ ವ್ಯಕ್ತಿ ತನ್ನ ರಾಜಕೀಯ ಸಂಬಂಧಗಳಿಂದ ರಾಜಾರೋಷವಾಗಿ ಬದುಕುತ್ತಿದ್ದಾನೆ. ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆಗೆ ಒಳಗಾಗಬೇಕಾದ ವ್ಯಕ್ತಿ ಕೋಟ್ಯಾಂತರ ರೂಪಾಯಿ ಆಸ್ತಿ ಹೊಂದಿದ್ದಾನೆ. ಈತನ ಆಸ್ತಿ ಮುಟ್ಟುಗೋಲು ಹಾಕಬೇಕಾದ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ಬದಲಾಗಿ ಬೆಂಗಳೂರಿನ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿ ಈತನ ಬೃಹತ್ ವಾಣಿಜ್ಯ ಸಂಕೀರ್ಣ ಎದ್ದುನಿಂತಿದೆ. ಈ ಸಾರಾಯಿ ದುರಂತಕ್ಕೆ ಕಾರಣರಾದ ಇನ್ನೊಬ್ಬ ವ್ಯಕ್ತಿ(ಮಹಿಳೆ) ಇಂದು ಬೆಂಗಳೂರು ಮಹಾನಗರ ಪಾಲಿಕೆಯ ಕಾರ್ಪೋರೇಟರ್ ಹಾಗೂ ಇಂದಿನ ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷದ ಸದಸ್ಯೆ.

ಸರಕಾರಿ ಸಾರಾಯಿ ಗುತ್ತಿಗೆದಾರರೊಬ್ಬರ ಆಪ್ತಸ್ನೇಹಿತನೊಬ್ಬ ಇತ್ತೀಚೆಗೆ ನೆಲಮಂಗಲದ ದುರಂತದ ಬಳಿಕ ಹೇಳಿದ ಗುಟ್ಟು ಏನೆಂದರೆ ಅಧಿಕೃತ ಸಾರಾಯಿ ಮಾರಾಟಗಾರರು ಕಳ್ಳಭಟ್ಟಿ ದಂಧೆ ಬೃಹತ್ ರೀತಿಯಲ್ಲಿ ನಡೆಯಲು ಎಂದಿಗೂ ಬಿಡುವುದಿಲ್ಲ. ಅಧಿಕೃತ ಸಾರಾಯಿ ಗುತ್ತಿಗೆದಾರರ ಬಳಿ ಸದಾ 300-400 ಮಂದಿಯ ಗೂಂಡಾ ಪಡೆಯೊಂದಿರುತ್ತದೆ. ಸದಾ 40-50 ಜೀಪ್‌ಗಳು ಸಿದ್ಧವಾಗಿರುತ್ತವೆ. ಕಳ್ಳಬಟ್ಟಿ ದಂಧೆ ಮಾಡುವವರ ಮೇಲೆ ಸಾರಾಯಿ ಗುತ್ತಿಗೆದಾರರ ಈ ಗೂಂಡಾ ಪಡೆ ಸದಾ ದಾಳಿ ಮಾಡುತ್ತದೆ. ಹೀಗಿರುವಾಗ ಬೃಹತ್ ರೀತಿಯಲ್ಲಿ ಕಳ್ಳಭಟ್ಟಿ ದಂಧೆ ನಡೆಯುವುದು ಹಾಗೂ ಈ ಮೂಲಕ ನೂರಾರು ಜನರು ಸಾಯುವುದು ಸಾಧ್ಯವಿಲ್ಲ. ವಿಷಪೂರಿತ ಸಾರಾಯಿ ಸೇವನೆ ಸಾವಿಗೆ ಅಧಿಕೃತ ಸಾರಾಯಿ ಗುತ್ತಿಗೆದಾರರೇ ಕಾರಣ.

ಕಳೆದ ಕೆಲವು ವರ್ಷಗಳ ಮುಂಚೆ ಕೇರಳದಲ್ಲಿ ಇದೇ ರೀತಿ ವಿಷಪೂರಿತ ಸಾರಾಯಿ ಸೇವನೆ ಸಾವು ನಡೆದಿತ್ತು. ಹಾಗೂ ಈಸಾವಿಗೆ ಸಹಾ ಕಲಬೆರಕೆ ಸ್ಪಿರಿಟ್ ಕಾರಣ ಎಂದು ಅಂದಿನ ಆಳುವ ಎಡರಂಗ ಸರ್ಕಾರ ಪತ್ತೆಹಚ್ಚಿತು. ಈ ಸ್ಪಿರಿಟ್ ದಂಧೆ ನಡೆಸುವವರು ಅಂದು ಕಾಂಗ್ರೆಸ್ ಸರ್ಕಾರದ ಆಡಳಿತವಿದ್ದ ಕರ್ನಾಟಕ ರಾಜ್ಯದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಅಡಗಿದ್ದ ವಿಷಯ ಈ ಹಿಂದೆ ಐಕ್ಯರಂಗದಲ್ಲಿ ಪ್ರಕಟವಾಗಿದೆ.

ರಾಜ್ಯದಲ್ಲಿ ಇರುವ ಹಲವು ಪ್ರಬಲ ಲಾಬಿಗಳಲ್ಲಿ ಅಬಕಾರಿ ಲಾಬಿ ಕೂಡಾ ಒಂದು ಬಲಿಷ್ಟ ಲಾಬಿ. ಎಲ್ಲಾ ಬೂರ್ಜ್ವಾ ರಾಜಕೀಯ ಪಕ್ಷಗಳ ಸಮಾವೇಶಗಳಿಗೆ ಸಮಾರಂಭಗಳಿಗೆ ಚಪ್ಪರ ಹಾಗೂ ಊಟದ ವ್ಯವಸ್ಥೆ ಮಾಡುವುದು ಈ ಅಬಕಾರಿ ಲಾಬಿಗಳೇ. ಇಂದಿಗೂ ಅಧಿಕೃತ ಸಾರಾಯಿ ಗುತ್ತಿಗೆದಾರರು ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ಬಾಕಿ ಉಳಿಸಿಕೊಂಡಿದ್ದಾರೆ ಹಾಗೂ ಈ ಬಾಕಿಗೆ ಅನೇಕ ರಾಷ್ಟ್ರೀಕೃತ ಬ್ಯಾಂಕುಗಳು ಗ್ಯಾರಂಟಿ ನೀಡಿವೆ. ಆದರೆ ಈ ಹಣ ಯಾವತ್ತೂ ವಸೂಲಾದ ಪ್ರಸಂಗಗಳೇ ಇಲ್ಲ. ಪ್ರಬಲ ಅಬಕಾರಿ ಗಟ್ಟಿಕುಳಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಪ್ರಬಲ ರಾಜಕೀಯ ಇಚ್ಛಾ ಶಕ್ತಿ ಇಂದಿನ ಆಳುವ ಪಕ್ಷಗಳಿಗಿಲ್ಲ.

**ಮೆಲ್ಕಿಯೋರ್. ಆರ್.ಡಿ.**

# ವರ್ಗಶೋಷಣೆಯ ವಿರುದ್ಧ ಹೋರಾಟಗಳು...........

ಪುಟ 2 ರಿಂದ

ಮೊದಲನೆಯದು ನಮ್ಮ ಹಲವು ಮುಖಂಡರನ್ನು ಆವರಿಸಿದ್ದ ಪುನರುತ್ಥಾನವಾದೀ ತತ್ವಗಳು. ಮೇಲ್ಜಾತಿಗಳಿಂದ ಬಂದ ಈ ಮುಖಂಡರುಗಳು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಸ್ಫೂರ್ತಿ ಪಡೆಯಲು ಪ್ರಯತ್ನಿಸಿದ್ದು ಭಾರತದ ತಥಾಕಥಿತ 'ಭವ್ಯ ಸನಾತನ ಇತಿಹಾಸದಿಂದ'. ಈ ಪ್ರಕ್ರಿಯೆಯಲ್ಲಿ ಅವರು ಆ ಕಾಲದ ಸಾಮಾಜಿಕ ಸಂಸ್ಥೆಗಳನ್ನು ಸಮರ್ಥಿಸಿಕೊಂಡರು. ಜಾತಿ ವ್ಯವಸ್ಥೆ ಇದರ ಒಂದು ಭಾಗವಾಗಿತ್ತು. ತಿಲಕ್‌ರವರು ಈ ಪ್ರವೃತ್ತಿಯ ಉತ್ತಮ ಉದಾಹರಣೆ. ಇನ್ನೊಂದು ಪ್ರವೃತ್ತಿಯೆಂದರೆ ಜಾತಿ ದಮನದ ಮೂಲದ ಬಗ್ಗೆ ಸರಿಯಾದ ಅರಿವು ಇದ್ದರೂ ಭೂಮಾಲಕರು ಮತ್ತು ಪಾಳೆಯಗಾರಿ ಹಿತಾಸಕ್ತಿಗಳನ್ನು ಕುರಿತಂತೆ ಕಾಂಗ್ರೆಸ್ ತೋರಿಸಿದ ಚಂಚಲತೆ. ಜಾತಿಶೋಷಣೆಯ ಮೂಲಾಧಾರವಾದ ಪಾಳೆಯಗಾರಿ ಹಾಗೂ ಅರೆ ಪಾಳೆಯಗಾರೀ ಕಾರ್ಷಿಕ ಸಂಬಂಧಗಳನ್ನು ಒಂದು ಕಾರ್ಷಿಕ ಕ್ರಾಂತಿಯ ಮೂಲಕ ಅಳಿಸಿಹಾಕುವ ಬದಲು ಕಾಂಗ್ರೆಸ್ ಮುಖಂಡತ್ವ ಭೂಮಾಲಕರೊಂದಿಗೆ ರಾಜಿ ಮಾಡಿಕೊಂಡು ಸ್ವತಂತ್ರ ಭಾರತದಲ್ಲಿ ಅವರೊಡನೆ ಅಧಿಕಾರ ಹಂಚಿಕೊಂಡಿತು. ಭಾರತ ಕಮ್ಯುನಿಸ್ಟ್ ಪಕ್ಷ ಮಾತ್ರವೇ ಬ್ರಿಟಿಷ್ ಸಾಮ್ರಾಜ್ಯಶಾಹಿಯ ವಿರುದ್ಧ ಹೋರಾಟವನ್ನು ಮತ್ತು ಒಂದು ಸಮಗ್ರ ಕಾರ್ಷಿಕ ಕ್ರಾಂತಿಯನ್ನು ಬೆಸೆಯಲು ಪ್ರಯತ್ನಿಸಿತು. 1930 ರಲ್ಲಿ 'ಕಾರ್ಯಾಚರಣೆಯ ವೇದಿಕೆ' ಯೆಂಬ ದಸ್ತಾವೇಜಿನಿಂದ ಹಿಡಿದು 1968 ರಲ್ಲಿ ರಾಷ್ಟ್ರೀಯ ಸಮಗ್ರತಾ ಮಂಡಳಿಗೆ ಸಲ್ಲಿಸಿದ ಮನವಿಪತ್ರದವರೆಗೂ ಕಮ್ಯುನಿಸ್ಟ್ ಆಂದೋಲನ ಸತತವಾಗಿ ಜಾತಿ ಶೋಷಣೆಯನ್ನು ಅಳಿಸಿ ಸಾಮಾಜಿಕ ವಿಮೋಚನೆ ಸಾಧ್ಯವಾಗಬೇಕಾದರೆ ಅದು ಕಾರ್ಷಿಕ ಸಂಬಂಧಗಳಲ್ಲಿ ಭಾರಿ ಬದಲಾವಣೆಗಳಿಂದ ಮಾತ್ರ ಸಾಧ್ಯ ಎಂದು ಪ್ರತಿಪಾದಿಸುತ್ತಾ ಬಂದಿತು.

ಇಲ್ಲಿ ಇನ್ನೊಂದು ವಿಚಾರಧಾರೆಯ ವಿಶ್ಲೇಷಣೆಯೂ ನಡೆಯಬೇಕಾಗಿದೆ. ದೇಶದಲ್ಲಿ ಬಲಿಷ್ಟ ಜಾತಿ-ವಿರೋಧಿ ಆಂದೋಲನಗಳು ನಡೆದಿವೆ. ಅವು ಸಾಕಷ್ಟು ರಾಜಕೀಯ ಪ್ರಭಾವವನ್ನು ಪಡೆದಿದ್ದವು. ಜ್ಯೋತಿಬಾ ಪುಲೆ ಇದರಲ್ಲಿ ಎದ್ದು ಕಾಣುವ ವ್ಯಕ್ತಿತ್ವ. ಅದರ ಆಂದೋಲನ ಸನಾತನ ಮತ್ತು ಪಾಳೆಯಗಾರಿ ಮೇರ್‌ರಚನೆಯ ಮೇಲೆ ಯಾವುದೇ ರಾಜಿಯಿಲ್ಲದೆ ನಡೆಸಿದ್ದ ಸೈದ್ಧಾಂತಿಕ ಧಾಳಿಯಾಗಿತ್ತು. ಆದರೆ ಈ ಧಾಳಿಯನ್ನು ಈ ಮೇಲ್‌ರಚನೆಗೆ ಆಧಾರವಾಗಿದ್ದ ಪಾಳೆಯಗಾರೀ ಭೂಸಂಬಂಧಗಳಿಗೆ ವಿಸ್ತರಿಸಲಿಲ್ಲ.

ಅಂಬೇಡ್ಕರ್‌ರವರ ಅನುಭವವೂ ಅದೇ. ದಲಿತರ ಪರವಾಗಿ ಅವಿಶ್ರಾಂತ ಹೋರಾಟ ನಡೆಸಿದ ಈ ಅತ್ಯುನ್ನತ ವ್ಯಕ್ತಿ ಮೇಲ್ಜಾತಿಗಳ ಗೋಸುಂಬೆತನವನ್ನು ಬಯಲಿಗೆಳೆದರು. ಕಾಂಗ್ರೆಸ್ಸನ್ನು ಮತ್ತು ಅದರ ನೀತಿಗಳನ್ನು ಖಡಾಖಂಡಿತವಾಗಿ ಖಂಡಿಸಿದರು. ಆದರೆ ಅಂತಿಮವಾಗಿ ಹಿಂದೂ ಸಮಾಜದಲ್ಲಿನ →

ಕ್ರಿಕೆಟ್ ವೀಕ್ಷಣೆಯ ಸೌಜನ್ಯದ ಭೇಟಿ ನೀಡಿದ ಮುಷರ್ರಫ್, ಭೇಟಿ ಭಾರತ-ಪಾಕ್ ಸಂಬಂಧಗಳಲ್ಲಿ ವಾತಾವರಣ ಸೃಷ್ಟಿಸಲಿದೆಯೇ?



# ಮುಷರಫ್ ಭೇಟಿ: ತಡೆ-ತಡೆಗಳ ನಿವಾರಣೆಯತ್ತ ಹೆಜ್ಜೆಗಳು

ಭಾರತದ ಪ್ರಧಾನಿ ಮನಮೋಹನ್ ಸಿಂಗ್‌ರವರು ಪಾಕಿಸ್ತಾನದ ಅಧ್ಯಕ್ಷರಾದ ಪರ್ವೇಜ್ ಮುಷರಫ್‌ರವರಿಗೆ ಎರಡೂ ದೇಶಗಳ ನಡುವಿನ ಒಂದು ದಿನದ ಕ್ರಿಕೆಟ್ ಪಂದ್ಯ ವೀಕ್ಷಣೆಗೆ ನೀಡಿದ ಸೌಜನ್ಯದ ಆಹ್ವಾನದ ಮೂಲಕ ಆರಂಭಗೊಂಡಿರುವ ಭಾರತ ಪಾಕ್ ನಡುವಿನ ಮಾತುಕತೆಗಳು ಎರಡೂ ದೇಶಗಳಿಗೂ ಪ್ರಯೋಜನಕಾರಿಯಾದ ಅತ್ಯಂತ ಮಹತ್ವದ ರಾಜತಾಂತ್ರಿಕ ಒಪ್ಪಂದಗಳಲ್ಲಿ ಕೊನೆಯಾಗಿದೆ. ಈ ಎರಡು ದಿನಗಳ ಭಾರತ ಭೇಟಿಯ ಕೊನೆಯಲ್ಲಿ ಎರಡೂ ದೇಶಗಳು ನೀಡಿರುವ 17 ಅಂಶಗಳ ಹೇಳಿಕೆಯು ಪಾಕ್ ಮತ್ತು ಭಾರತ ನಡುವಿನ ಸಂಬಂಧಗಳಲ್ಲಿ ಒಂದು ಔನತ್ಯವನ್ನು ದಾಖಲಿಸಿದೆ. ಮೊತ್ತ ಮೊದಲನೆಯದಾಗಿ ಈ ಹೇಳಿಕೆಯು 'ಶಾಂತಿ ಪ್ರಕ್ರಿಯೆಯು ಈಗ ತಲೆಕೆಳಗು ಮಾಡಲಾಗುವಂತಹದ್ದಲ್ಲ' ಎಂದು ದೃಢಪಡಿಸಿದೆ. ಎರಡೂ ದೇಶಗಳ ಜನತೆಯ ಪ್ರಬಲವಾದ ಶಾಂತಿಯ ಹಂಬಲವನ್ನು ಸಹ ಈ ಹೇಳಿಕೆಯು ಗುರುತಿಸಿದೆ. ಅಷ್ಟೇ ಅಲ್ಲ ಈ ಹೇಳಿಕೆಯು ಮಾತುಕತೆಯನ್ನು ಅದರ ಗುರಿಯತ್ತ ಕೊಂಡೊಯ್ಯುವುದರಲ್ಲಿ ಎರಡೂ ದೇಶಗಳ ಮುಖಂಡರ ಮೇಲಿರುವ ಮಹತ್ವದ ಹೊಣೆಗಾರಿಕೆಯನ್ನು ಮತ್ತು ಈಗಾಗಲೇ ಸತ್ವಭರಿತವಾದ ಮಾತುಕತೆ ನಡೆದಿದೆ ಎಂಬುದನ್ನು ಗುರುತಿಸಿದೆ.

ಎರಡನೆಯದಾಗಿ, ಎರಡೂ ದೇಶಗಳಿಗೆ ತ್ರಾಸದಾಯಕವಾದ ಜಮ್ಮು-ಕಾಶ್ಮೀರದ ಪ್ರಶ್ನೆಯ ಬಗೆಗೆ ಚರ್ಚೆಯಾಗಿರುವುದನ್ನು ಹಾಗೂ ಸಮಸ್ಯೆಗೆ ಅಂತಿಮ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಇದೇ ರೀತಿಯ ಪ್ರಾಮಾಣಿಕವಾದ ಮತ್ತು ಸದುದ್ದೇಶದ - ಭವಿಷ್ಯ ಮುಖಿಯಾದ ಚರ್ಚೆಯನ್ನು ಮುಂದುವರೆಸುವ ಮುಖಂಡರ ಹಂಬಲವನ್ನು ಈ ಹೇಳಿಕೆಯು ಪ್ರಕಟಿಸಿದೆ. ಇದೇ ಈ ಧೋರಣೆಯನ್ನೇ ಸಿಪಿಐ(ಎಂ) ಪಕ್ಷ ಬಹು ಕಾಲದಿಂದಲೂ ಪ್ರತಿಪಾದಿಸುತ್ತಿರುವುದು. ಒಂದು ಸಂತೋಷದ ವಿಷಯವೆಂದರೆ ಇತರ ಹಲವು ವಿಭಾಗಗಳಲ್ಲಿ ಪರಸ್ಪರ ಸಂಬಂಧ ಉತ್ತಮಪಡಿಸುತ್ತಲೇ, ಜಮ್ಮು ಕಾಶ್ಮೀರ ಮಾತ್ರವಲ್ಲದೇ ಸಿರ್ ಕ್ರೀಕ್ ಮತ್ತುಸಿಯಾಚಿನ್ ನಂತಹ ವಿವಾದಗ್ರಸ್ಥ ವಿಚಾರಗಳ ಕುರಿತು ಸಹ ಮಾತುಕತೆಯನ್ನು ಮುಂದುವರೆಸುವ ಧೋರಣೆ ಅನುಸರಿಸುತ್ತಿರುವುದು. ಈ ನೀತಿಯು ವಾಜಪೇಯಿ ಸರ್ಕಾರ ಅನುಸರಿಸಿದ ಧೋರಣೆಗೆ ಪೂರ್ಣವಾಗಿ ವ್ಯತಿರಿಕ್ತವಾಗಿದೆ. ವಾಜಪೇಯಿ ಸರ್ಕಾರದ ಧೋರಣೆಯಲ್ಲಿ ಸ್ಥಿರತೆಯಿರಲಿಲ್ಲ. ತಕ್ಷಣದ ಸಂದರ್ಭದ ಅಗತ್ಯದಿಂದ ಪ್ರೇರಿತವಾದಂತೆ, ಮಂಡಿಯೂರುವಂತೆ, ಎಲ್ಲಕ್ಕಿಂತ ಮುಖ್ಯವಾಗಿ ಅದರ ಕೋಮುವಾದದ ಧಗೆಯೆಬ್ಬಿಸಬೇಕಾದ ತನ್ನ ಆಂತರಿಕ ರಾಜಕೀಯ ಅಗತ್ಯಕ್ಕೆ ಅನುಗುಣವಾಗಿರುತ್ತಿತ್ತು. ಹಿಂದೆ ಎರಡೂ ಕಡೆಯಿಂದ ಸ್ವತಂತ್ರವಾಗಿ ಬಂದ ಮಾತುಕತೆಯ ಆಹ್ವಾನ ಮತ್ತು ಮುತುವರ್ಜಿಗಳು ಮತ್ತು ಯಾವುದೇ ರೀತಿಯ ಸಮರ್ಪಕ ಸಿದ್ಧತೆಯನ್ನು ಮಾಡಿಕೊಂಡಿರದಿದ್ದ 'ಆಗ್ರ'ದಂತಹ ಶೃಂಗಸಭೆ, ಪಾಕಿಸ್ತಾನವು ಗಡಿಯಾಚೆಗಿನ ಭಯೋತ್ಪಾದನೆಗೆ ಬೆಂಬಲ ನೀಡುವುದನ್ನು ನಿಲ್ಲಿಸುವವರೆಗೆ ಯಾವುದೇ ಮಾತುಕತೆ ಸಾಧ್ಯವಿಲ್ಲವೆಂಬ ದುಡುಕಿನ ಘೋಷಣೆ ಎಲ್ಲವೂ ಇದಕ್ಕೆ ಸಾಕ್ಷಿ.

ಜಂಟಿ ಹೇಳಿಕೆಯ ಮೂರನೇ ಮಹತ್ವದ ಅಂಶವೆಂದರೆ 'ಭಯೋತ್ಪಾದನೆಯು ಶಾಂತಿ ಪ್ರಕ್ರಿಯೆಯನ್ನು ಅಡ್ಡಿಪಡಿಸಲು ಅವಕಾಶ ನೀಡುವುದಿಲ್ಲ'ವೆಂಬ ಇಬ್ಬರೂ ನಾಯಕರ ಪ್ರತಿಜ್ಞೆ. ಪಾಕಿಸ್ತಾನವು ಈ ಪ್ರತಿಜ್ಞೆಯನ್ನು ಎಷ್ಟು



ಪ್ರಾಮಾಣಿಕವಾಗಿ ಜಾರಿ ಮಾಡುತ್ತದೆಯೆಂಬುದಕ್ಕೆ ಕಾಲವೇ ಉತ್ತರ ಹೇಳಬೇಕಿದೆ. ಆದರೆ ಇಂತಹ ಅನುಮಾನಗಳು ಎರಡೂ ದೇಶಗಳ ಸಂಬಂಧ ವೃದ್ಧಿಗೆ ಅಡ್ಡಿಯನ್ನುಂಟು ಮಾಡಲು ಅವಕಾಶ ನೀಡುವುದು ಸಾಧ್ಯವಿಲ್ಲ.

ನಾಲ್ಕನೆಯದಾಗಿ ಹೊಸ ಪ್ರವಾಸಿ ಮಾರ್ಗಗಳು, ವೀಸಾ ನಿರ್ಬಂಧಗಳನ್ನು ಸರಳಗೊಳಿಸುವುದು, ಕರಾಚಿ ಮತ್ತು ಮುಂಬೈಗಳಲ್ಲಿ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸುವುದು ಮುಂತಾದ ಮತ್ತಷ್ಟು ವಿಶ್ವಾಸ ವೃದ್ಧಿ ಕ್ರಮಗಳನ್ನು ಹೆಸರಿಸಲಾಗಿದೆ. ಶ್ರೀನಗರ ಮತ್ತು ಮುಜಫರಾಬಾದ್‌ಗಳ ನಡುವಿನ ಬಸ್ ಸಂಚಾರಕ್ಕೆ ಎರಡೂ ವಿಭಾಗಗಳ ಜನರ ಸಂಭ್ರಮದ ಭಾವನಾತ್ಮಕ ಸ್ವಾಗತ ಎರಡೂ ದೇಶಗಳ ರಾಜಕೀಯ ಮುಖಂಡತ್ವದ ಮೇಲೆ ಗಾಢವಾದ ಪ್ರಭಾವ ಬೀರುವುದು ಸ್ಪಷ್ಟವಾಗಿದೆ.

ಅಂತಿಮವಾಗಿ ಪಾಕಿಸ್ತಾನ ಮತ್ತು ಭಾರತಗಳ ನಡುವೆ ಆರ್ಥಿಕ ಮತ್ತು ವಾಣಿಜ್ಯ ಸಂಬಂಧವನ್ನು ಉತ್ತಮಪಡಿಸುವಲ್ಲಿ ಈ ಜಂಟಿ ಹೇಳಿಕೆಯು ಒಂದು ಹೆಜ್ಜೆಯಾಗಿದೆ. ಈ ನಿಟ್ಟಿನಲ್ಲಿ ತಮಗಿರುವ ಬೃಹತ್ ಸಾಮರ್ಥ್ಯವನ್ನು ಗುರುತಿಸಿಕೊಂಡಿರುವ ಎರಡೂ ದೇಶಗಳು ಜಂಟಿ ಆರ್ಥಿಕ ಆಯೋಗ ಹಾಗೂ ಜಂಟಿ ವಾಣಿಜ್ಯ ಮಂಡಳಿಗಳನ್ನು ಮರಳಿ ಕ್ರಿಯಾಶೀಲಗೊಳಿಸಲು ನಿರ್ಧರಿಸಿವೆ. ದೇಶಗಳ ನಡುವಿನ ವಾಸ್ತವ ಗಡಿ ರೇಖೆಯ ಬಳಿ ಇನ್ನು ಮುಂದೆ ಸರಕು ಸಾಗಾಣಿಕೆ ವಾಹನಗಳು ಸಂಚರಿಸಲು ಅನುವು ಮಾಡಿಕೊಡಲಾಗಿದೆ. ತೈಲೋತ್ಪನ್ನಗಳ ಕೊಳವೆ ಮಾರ್ಗದ ಕುರಿತು ಚರ್ಚಿಸಲು ಎರಡೂ ದೇಶಗಳ ಪೆಟ್ರೋಲಿಯಂ ಸಚಿವರುಗಳು ಮೇ ತಿಂಗಳಿನಲ್ಲಿ ಸಭೆ ಸೇರಲಿದ್ದಾರೆ. ತನ್ನ ಭೂ ಪ್ರದೇಶದಲ್ಲಿ ಇರಾನ್ - ಭಾರತಗಳ ನಡುವೆ ಕೊಳವೆ ಮಾರ್ಗ ಹಾದು ಹೋಗಲು ಪಾಕಿಸ್ತಾನವು ತನ್ನ ಬೆಂಬಲ ಮತ್ತು ಸಹಕಾರವನ್ನು ಘೋಷಿಸಿದೆ.

ಈ ಭೇಟಿಯು ಜಂಟಿ ಹೇಳಿಕೆಯನ್ನು ಮೀರಿದಂತಹ ಮಹತ್ವದ ಯಶಸ್ಸನ್ನು ಸಾಧಿಸಿದೆ ಎಂಬುದನ್ನು ಗಮನಿಸಬೇಕಿದೆ. ಇತ್ತೀಚಿನ ದಿನಗಳಲ್ಲಿ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಮಾತುಕತೆಗಳ ಸಂದರ್ಭದಲ್ಲಿ ಇರುತ್ತಿದ್ದ ವಾತಾವರಣಕ್ಕಿಂತ ಭಿನ್ನವಾಗಿ ಈ ಮಾತುಕತೆಯು ಸಮಾಜದ ವಿವಿಧ ವಲಯಗಳಲ್ಲಿ ಒಂದು ಬಗೆಯ ಆಶಾದಾಯಕ ಭಾವನೆಗಳನ್ನು ಹೊಮ್ಮಿಸಿದೆ.

ಅಧ್ಯಕ್ಷ ಮುಷರಫ್‌ರವರು ಇಬ್ಬರು ಬಾಲ್ಯ ಸ್ನೇಹಿತರು ಕಾಶ್ಮೀರದಲ್ಲಿ ಭೇಟಿಯಾಗಿ ಪ್ರೀತಿಯ ಸೆಳೆತಕ್ಕೆ ಒಳಗಾಗುವ ಪ್ರೇಮಕತೆಯನ್ನೊಳಗೊಂಡ 60ರ ದಶಕದ ಬಾಲಿವುಡ್ ಸಿನಿಮಾ 'ಫಿರ್ ವೊಹಿ ದಿಲ್ ಲಯ' ಬಗೆಗೆ ಪ್ರಸ್ತಾಪಿಸಿ ತಾವು ಈ ಬಾರಿ ಹೊಸ ಹೃದಯದೊಂದಿಗೆ ಬಂದಿರುವುದಾಗಿ ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಈ 'ಹೃದಯದ ಬದಲಾವಣೆ'ಯ ಬಗ್ಗೆ ವಿವರಿಸುವ ಹಲವು ಊಹಾ ಪೋಹಗಳೇಳುವ ಸಾಧ್ಯತೆ ಇದೆ. ಅದೇನೇ ಇರಲಿ ಎರಡೂ ಕಡೆಯಲ್ಲಿ ನಾಯಕತ್ವವು ಶಾಂತಿ ಪ್ರಕ್ರಿಯೆಯನ್ನು ಮುಂದಕ್ಕೊಯ್ಯಲು ದೃಢವಾಗಿರುವಂತೆ ಕಂಡುಬರುತ್ತಿರುವುದು ಅತ್ಯಂತ ಪ್ರಮುಖವಾದುದಾಗಿದೆ. ಎರಡೂ ದೇಶಗಳ ಜನತೆಯ ಹಿತಾಸಕ್ತಿಗಳ ಆಧಾರದಲ್ಲಿ ಈ ಅವಕಾಶವು ಕೈತಪ್ಪದಂತೆ ಶಾಂತಿ ಪ್ರಕ್ರಿಯೆಯನ್ನು ಕ್ರೋಢೀಕರಿಸಬೇಕಿದೆ. ಈ ನಿಟ್ಟಿನಲ್ಲಿ ಕಳೆದ ವರ್ಷದಲ್ಲಿ ಬೆಳವಣಿಗೆ ಕಂಡಿರುವ ಎರಡೂ ದೇಶಗಳ ಜನರ ನಡುವಿನ ಸಂಪರ್ಕವನ್ನು ಮುಂದಿನ ದಿನಗಳಲ್ಲಿ ಮತ್ತಷ್ಟು ತೀವ್ರಗೊಳಿಸಬೇಕಿದೆ. ಈ ಕ್ರಮ ಮಾತ್ರವೇ ಎರಡೂ ಸರ್ಕಾರಗಳೂ ಈ ವಿಚಾರದಲ್ಲಿ ದೃಢವಾಗಿರುವಂತೆ ಒತ್ತಡ ಹೇರುತ್ತದೆ.

ಎಲ್ಲವೂ ಆದ ಮೇಲೆ ಇಲ್ಲಿ ಒಂದು ಎಚ್ಚರಿಕೆಯ ಮಾತನ್ನು ಹೇಳಲೇ ಬೇಕಿದೆ. ಸುಮಾರು ಅರ್ಧ ಶತಮಾನಗಳ ಸುದೀರ್ಘ ಕಾಲದ ದ್ವೇಷಮಯ ಮತ್ತು ಕಹಿಪೂರಿತವಾದ ಭಾರತ - ಪಾಕ್ ಸಂಬಂಧಗಳ ಹಿನ್ನೆಲೆಯಲ್ಲಿ ಈ ಎರಡೂ ದೇಶಗಳ ನಡುವೆ ಇರುವ ತೊಡಕುಗಳು ರಾತ್ರೋರಾತ್ರಿ ಬಗೆಹರಿಯುತ್ತವೆ ಎಂದು ನಿರೀಕ್ಷಿಸುವುದು ಸಾಧ್ಯವಿಲ್ಲ.

**ಈ ಶಾಂತಿ ಪ್ರಕ್ರಿಯೆ ಸುದೀರ್ಘವಾದದ್ದೂ ಮತ್ತು ಪ್ರಾಯಾಸಕರವಾದದ್ದು ಆಗಿರುತ್ತದೆ. ಅದೇನಿದ್ದರೂ ಎರಡೂ ಕಡೆಯಲ್ಲಿ ಸರ್ಕಾರಗಳು ಮತ್ತು ಜನತೆ ಈ ದಾರಿಯಲ್ಲಿ ಎದುರಾಗುವ ಅಡೆ ತಡೆ ತೊಡಕುಗಳ ನಿವಾರಣೆಗೆ ಸಿದ್ಧರಿರಬೇಕಾಗುತ್ತದೆ. ಒಂದೆಡೆ ನಮ್ಮ ದೇಶದ ರಕ್ಷಣೆಯ ಕಟ್ಟೆಚ್ಚರದ ಸ್ಥಿತಿಯಲ್ಲಿ ಒಂದು ಕ್ಷಣವೂ ವಿಚಲಿತರಾಗದೆ ಈ ಮೇಲಿನ ಧೋರಣೆಯನ್ನು ಕೇಂದ್ರ ಯುಪಿಎ ಸರ್ಕಾರವು ಅಳವಡಿಸಿಕೊಳ್ಳಬೇಕಿದೆ.**

---

→

ಅನ್ಯಾಯಗಳಿಂದ ಪಾರಾಗಲು ಬೌದ್ಧ ಧರ್ಮವನ್ನು ಅವಲಂಬಿಸಿ ಎಂದು ತಮ್ಮ ಅನುಯಾಯಿಗಳಿಗೆ ಹೇಳಬೇಕಾಗಿ ಬಂತು. ಆದರೆ ಅಸಮಾನ ಭೂಸಂಬಂಧಗಳ ವಾಸ್ತವ ಪರಿಸ್ಥಿತಿ ಅದರಿಂದಲೂ ಬದಲಾಗಲಿಲ್ಲ. ಜಾತಿ ಶೋಷಣೆಯನ್ನು ನಿರ್ಮೂಲ ಮಾಡಲು ಪ್ರಸಕ್ತ ಸಾಮಾಜಿಕ-ಆರ್ಥಿಕ ವ್ಯವಸ್ಥೆಯನ್ನು ಧ್ವಂಸ ಮಾಡುವ ನಿರ್ಣಾಯಕ ಹೆಜ್ಜೆಯ ಬದಲು ಸಮಾನತೆಯ ಘೋಷಣೆ, ಸ್ಥಾನಗಳಲ್ಲಿ, ಉದ್ಯೋಗಗಳಲ್ಲಿ ಮೀಸಲಾತಿ ಇಷ್ಟಕ್ಕೇ ಚಳುವಳಿ ಸೀಮಿತಗೊಂಡಿತು. ಅಂಬೇಡ್ಕರ್‌ನಂತಹ ಭವ್ಯ ವ್ಯಕ್ತಿತ್ವದ ಮುಖಂಡರಿದ್ದರೂ, ಒಂದು ಬಲಿಷ್ಠ ಆಂದೋಲನವನ್ನು ಕಟ್ಟಿದರೂ ಅದರ ಗುರಿ ಸಾಧನೆಯಾಗಲಿಲ್ಲ, ಏಕೆಂದರೆ ಆ ಆಂದೋಲನ ಶೋಷಣೆಯ ಮೂಲ ಸ್ರೋತವಾದ ಪಾಳೆಯಗಾರಿ ಮತ್ತು ಅರೆಪಾಳೆಯಗಾರಿ ಭೂಸಂಬಂಧಗಳ ಮೇಲೆ ಗುರಿಯಿಡಲಿಲ್ಲ. ಪೆರಿಯಾರ್, ಇ.ವಿ.ರಾಮಸ್ವಾಮಿ ನಾಯಕರ್‌ರವರ ದ್ರಾವಿಡ ಆಂದೋಲನದ ಅನುಭವವೂ ಇದೇ ಹೀಗೆ ಸಾಮಾಜಿಕ ಸುಧಾರಣಾ ಆಂದೋಲನಗಳು ಅತ್ಯುನ್ನತ ವ್ಯಕ್ತಿಗಳ ನೇತೃತ್ವದಲ್ಲಿ ನಡೆದರೂ ಅವು ಕಾರ್ಷಿಕ ಕ್ರಾಂತಿಯ ಕೆಲಸಗಳನ್ನು ಉಪೇಕ್ಷಿಸಿದ್ದರಿಂದಾಗಿ ಅವುಗಳ ಗುರಿ ಈಡೇರಲಿಲ್ಲ ಎಂಬುದನ್ನು ನಾವು ಕಾಣುತ್ತೇವೆ. ನಮ್ಮ ಮುಂದಿರುವ ಸವಾಲು ಜಾತಿ ದಮನದ ವಿರುದ್ಧ ಹೋರಾಟ ಹಾಗೂ ವರ್ಗ ಶೋಷಣೆ ವಿರುದ್ಧ ಹೋರಾಟವನ್ನು ಪ್ರಸಕ್ತ ಸಾಮಾಜಿಕ - ಆರ್ಥಿಕ ವ್ಯವಸ್ಥೆಯನ್ನು ಬದಲಿಸುವ ಹಾಗೂ ಕಾರ್ಷಿಕ ಕ್ರಾಂತಿಯನ್ನು ಹರಿಯಿಬಿಡುವ ಒಂದು ವ್ಯಾಪಕ ವರ್ಗ ಹೋರಾಟದಲ್ಲಿ ಬೆಸೆಯುವುದು ನಮ್ಮ ಮುಂದಿರುವ ಕರ್ತವ್ಯ. ಇದು ನಮ್ಮ ಮುಂದಿರುವ ಸವಾಲು. ಹೊಸ ಆರ್ಥಿಕ ನೀತಿಗಳ ವಿರುದ್ಧ, ಕೋಮುವಾದದ ವಿರುದ್ಧ ಜನಗಳನ್ನು ಅಣಿನೆರೆಸುವುದರೊಂದಿಗೆ ಸಾರ್ವತ್ರಿಕ ದಮನದ ವಿರುದ್ಧ ಹೋರಾಟಗಳಲ್ಲಿ ದಮನಕ್ಕೊಳಗಾದವರನ್ನು ಅಣಿನೆರೆಸುವಲ್ಲಿ ಸಕ್ರಿಯರಾಗಬೇಕು. ಈ ರೀತಿಯ ಹೋರಾಟವನ್ನು ಬೆಸೆಯಲು ಕಮ್ಯುನಿಸ್ಟರು ಶ್ರಮಿಸುತ್ತಿದ್ದಾರೆ ಎಂಬ ಕಾರಣದಿಂದಾಗಿಯೇ ವಿವಿಧ ಜಾತಿ ಮುಖಂಡರುಗಳು ಕಮ್ಯುನಿಸ್ಟರ ಮೇಲೆ ವಿಷ ಕಾರುತ್ತಿದ್ದಾರೆ. ಏಕೆಂದರೆ ಈ ರೀತಿಯ ಎರಡು ಹೋರಾಟಗಳು ಬೆಸೆದಾಗ ಅವರಿಗೆ ಶೋಷಿತ ಜಾತಿಗಳ ಹೆಸರಿನಲ್ಲಿ ರಾಜಕೀಯ ಚೌಕಾಶಿ ನಡೆಸಲು ಹೊಲಸು ಕಸರತ್ತು ನಡೆಸಲು ಅವಕಾಶವುಳಿಯುವುದಿಲ್ಲ.

ಆದ್ದರಿಂದ ದಲಿತರು ಮತ್ತು ಹಿಂದುಳಿದ ಜಾತಿಗಳಿಗೆ ಮೀಸಲಾತಿಯನ್ನು ಬೆಂಬಲಿಸುತ್ತಲೇ ಇದು ಅಂತಿಮ ಪರಿಹಾರವಲ್ಲ ಎಂದು ನಾವು ಯಾವುದೇ ಹಿಂಜರಿಕೆಯಿಲ್ಲದೆ ಒತ್ತಿ ಹೇಳಬೇಕು. ದಮನಕ್ಕೊಳಗಾದವರ ಪರಿಸ್ಥಿತಿಯನ್ನು ಉತ್ತಮಗೊಳಿಸಲು ತೀವ್ರವಾದ ಆರ್ಥಿಕ ಸುಧಾರಣೆಗಳು ಅಗತ್ಯ ಎಂದು ಎಲ್ಲಾ ಜಾತಿ ಮುಖಂಡರೂ ಬಾಯಲ್ಲಿ ಹೇಳಿದರೂ ಒಂದು ಸಮಗ್ರ ಕಾರ್ಷಿಕ ಕ್ರಾಂತಿಗಾಗಿ ಹೋರಾಟ ನಡೆಯದೆ ಈ ವಿಭಾಗಗಳ ಅರ್ಥಪೂರ್ಣ ವಿಮೋಚನೆಯೇನೂ ಆಗುವುದಿಲ್ಲ ಎಂಬುದೀಗ ಸ್ಪಷ್ಟವಾಗಿದೆ.

# ಅಂಗನವಾಡಿ ನೌಕರರ 3ನೇ ರಾಜ್ಯ ಸಮ್ಮೇಳನ

**ಹಲವಾರು ಎಡರು-ತೊಡರುಗಳನ್ನು ಎದುರಿಸಿ ಹಂತಹಂತವಾಗಿ ಬೆಳೆಯುತ್ತಿರುವ ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆ ರಾಜ್ಯದಲ್ಲಿ ಅಸಂಘಟಿತ ಚಳುವಳಿಯಲ್ಲಿ ತನ್ನದೇ ಛಾಪು ಮೂಡಿಸಿ, ಮುನ್ನಡೆಯುತ್ತಿದೆ. ಇದೇ ಏಪ್ರಿಲ್ 16 ರಿಂದ 18 ರವರೆಗೆ ಗುಲ್ಬರ್ಗಾದಲ್ಲಿ ನಡೆದ ರಾಜ್ಯ ಸಮ್ಮೇಳನವು ಸಂಘಟನೆಯ ಹೊಸ ವಿಸ್ತಾರಕ್ಕೆ ಹಬ್ಬಲು ಸಂಕಲ್ಪಿಸಿದೆ. ಅದರ ವರದಿಯಿಲ್ಲಿದೆ.**

ವರದಿ : **ಎಸ್.ವರಲಕ್ಷ್ಮಿ - ಯಮುನಾ ಗಾಂವ್ಕರ್**

ಸಮಸ್ತ ಮಹಿಳೆಯರ ಮಕ್ಕಳಿಗೆ ಪೋಷಣೆಯ ಜವಾಬ್ದಾರಿಯುತ ಕೇಂದ್ರವಾಗಿ ಅಂಗನವಾಡಿಗಳು ಕೆಲಸ ನಿರ್ವಹಿಸುತ್ತಿವೆ. ಶಾಲೆಗೆ ಹೋಗಲಾರದ ಹೆಣ್ಣು ಮಕ್ಕಳನ್ನು ಶಾಲೆಯ ಕಲಿಕೆಯತ್ತ ಪ್ರಾಥಮಿಕವಾಗಿ ಆಕರ್ಷಿಸಿದ್ದು ಈ ಕೇಂದ್ರಗಳೇ. ಎಲ್ಲರಿಗೂ ಶಿಕ್ಷಣ ನೀಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುವಾಗ ಈ ಸಂವಿಧಾನಾತ್ಮಕ ಆಶಯಕ್ಕೆ ಬೆನ್ನೆಲುಬಾಗಿ ನಿಂತವರೇ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರು. ಆದರೆ ಐಸಿಡಿಎಸ್ ಪ್ರಾರಂಭವಾಗಿ 30ನೇ ವರ್ಷಾಚರಣೆ ಸಂದರ್ಭದಲ್ಲಿ ಸಮಾಜಕ್ಕೆ ಹಿತಕಾರಿಯಾದ ಈ ಯೋಜನೆಯನ್ನು ತಳಮಟ್ಟದಲ್ಲಿ ಜಾರಿಗೊಳಿಸುತ್ತಿರುವ ಅಂಗನವಾಡಿ ನೌಕರರ ಕುರಿತು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಣ್ಣೆತ್ತಿ ನೋಡದಿರುವುದು ಖಂಡನೀಯ. ಸುಪ್ರಿಂ ಕೋರ್ಟ್ ತೀರ್ಪಿನ ಪ್ರಕಾರವೇ ಇಲ್ಲಿ ಮಾಲಿಕ ಮತ್ತು ಕೆಲಸಗಾರ ಸಂಬಂಧ ಇದ್ದರೂ ಅಂಗನವಾಡಿಗಳನ್ನು ವಿಸ್ತರಿಸಿ, ಬಲಿಷ್ಠ ಪಡಿಸಬೇಕೆಂದಿದ್ದರೂ, ದೇಶದಲ್ಲಿ ಹಲವಾರು ಅಧ್ಯಯನದ ವರದಿಗಳು ಅಂಗನವಾಡಿ ಕೇಂದ್ರಗಳ ಮಹತ್ವವನ್ನು ಮನಸಾರಿ ಒಪ್ಪಿಕೊಂಡಾಗ್ಯೂ ಅಂಗನವಾಡಿ ನೌಕರರಿಗೆ ಖಾಯಾಮಾತಿಯ ವಿಷಯ ದೂರವೇ ಉಳಿದಿದೆ. ಸೇವಾ ನಿಯಮಾವಳಿ ಇಲ್ಲದೇ ಇರುವುದರಿಂದ ಶೋಷಣೆಗೊಳಗಾಗಿದ್ದಾರೆ. ಇವೆಲ್ಲದರ ವಿರುದ್ಧ ದೇಶವ್ಯಾಪಿ ಆಂದೋಲನ ನಡೆಯುತ್ತಿದೆ. ಕರ್ನಾಟಕದಲ್ಲಿ ಕೂಡ ಈಗಿರುವ ಚಳುವಳಿಯು ತೀವ್ರಗೊಂಡು ಪ್ರಬುದ್ಧಗೊಳ್ಳುತ್ತಿದೆ ಎಂದು ಅಖಿಲಭಾರತ ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿಯರ ಫೆಡರೇಶನ್‌ನ ಪ್ರಧಾನ ಕಾರ್ಯದರ್ಶಿ ಡಾ.ಕೆ.ಹೇಮಲತಾ ಅಭಿಪ್ರಾಯಪಟ್ಟರು.

ಅವರು ಏಪ್ರಿಲ್ 16ರಂದು ಗುಲ್ಬರ್ಗಾದಲ್ಲಿ ಪ್ರಾರಂಭಗೊಂಡ ಅಂಗನವಾಡಿ ನೌಕರರ 3ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಮುಂದುವರಿದು ಮಾತನಾಡಿದ ಅವರು, ಅವರು ಸಂಯೋಜಿತ ಅಂಗನವಾಡಿ ಸಂಘಟನೆಗೆ ಸಮ್ಮೇಳನಗಳು ಹೋರಾಟಗಳ ಭಾಗ. ವಿಶಾಲವಾದ ಚಳುವಳಿ ಕಟ್ಟುವ, ದಿಕ್ಕುದೆಸೆ ರೂಪಿಸುವ ಕೇಂದ್ರ ದೇಶದಲ್ಲಿ ಅತ್ಯಂತ ದೊಡ್ಡ ಅಂಗನವಾಡಿ ಸಂಘಟನೆಯಾಗಿ ನಮ್ಮ ಫೆಡರೇಶನ್ ನೌಕರರ ಹತ್ತಾರು ಸಮಸ್ಯೆಗಳ ಪರಿಹಾರಕ್ಕಾಗಿ ಅವಿರತ ಹೋರಾಟ ನಡೆಸುತ್ತಿದೆ. ಕರ್ನಾಟಕದಲ್ಲಿ ಇತ್ತೀಚೆಗೆ ಪಂಚಾಯಿತಿಗೆ ಒಪ್ಪಿಸಿದ ಆದೇಶದ ವಿರುದ್ಧ ನಡೆದ ಯಶಸ್ವೀ ಹೋರಾಟ ಸಂಘಟನೆಯ ವಿಸ್ತರಣೆ ಸಹಾಯಕವಾಗಬೇಕು.

## ವಿಶಾಲವಾದ ಚಳುವಳಿ, ದೃಢವಾದ ಸಂ

ಕೆಲವು ಬೇರೆ ಯೂನಿಯನ್‌ಗಳು ಹೇಳುತ್ತಿವೆ, ಸುಪ್ರೀಂಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿದೆ, ಹೋರಾಟದಿಂದೇನೂ ಆಗುವುದಿಲ್ಲ ಎಂದು ಅಪಪ್ರಚಾರ ಮಾಡುತ್ತಿವೆ. ಮುಂದುವರಿದು ಮಹಿಳೆಯರ ಕಲ್ಯಾಣಕ್ಕಾಗಿ ಮಾತನಾಡುವವರಿಗೆ ದುಡಿಮೆಯಲ್ಲಿ ಬೆಂದು ಹೋದ ಅಂಗನವಾಡಿ ನೌಕರರು ಕಾಣಲಿಲ್ಲ. ನಿವೃತ್ತಿ ನಂತರ ಬರಿಗೈಯಲ್ಲಿ ಮನೆಗೆ ಕಳಿಸುವ ಸರ್ಕಾರ, ಅಂಗನವಾಡಿ ನೌಕರರು ಗೌರವದಿಂದಿರಲು ಗ್ಯಾರಂಟಿ ಕೊಡುತ್ತದಾ? ಎಂದು ಟೀಕಿಸಿದರು. ಕರ್ನಾಟಕದಲ್ಲಿ ದುರ್ಬಲವಾಗಿರುವ ಅಸಂಘಟಿತ ವಲಯದ ಚಳುವಳಿಯನ್ನು ಬಲಗೊಳಿಸಿ, ರಾಜಕೀಯವಾದ ಸಂಘರ್ಷ ನಡೆಸಬೇಕಾಗಿದೆ ಎಂದರು.

**ಖಾಸಗೀಕರಣ ವಿರುದ್ಧ ಧ್ವನಿ ಮೊಳಗಲಿ - ಜೆ.ಸುರೇಶ**

ಸರ್ಕಾರಗಳು ಐಎಂಎಫ್ ಮತ್ತು ವಿಶ್ವಬ್ಯಾಂಕ್‌ನ ಒತ್ತಡಕ್ಕೆ ಮಣಿದು ಖಾಸಗೀಕರಣ ಪ್ರಕ್ರಿಯೆ ತೀವ್ರಗೊಳಿಸುತ್ತಿರುವ ಸಂದರ್ಭದಲ್ಲಿ ನೌಕರರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ತೀವ್ರ ನಿರುದ್ಯೋಗ ತಲೆದೋರುತ್ತಿದೆ. ಹಾಗಾಗಿ ಖಾಸಗೀಕರಣದ ವಿರುದ್ಧದ ಧ್ವನಿ ಪ್ರಬಲವಾಗಲಿ ಎಂದು ರಾಯಚೂರು ವಿಭಾಗದ ಎಐಐಇಎ ಪ್ರಧಾನ ಕಾರ್ಯದರ್ಶಿ ಕಾಂ.ಜೆ.ಸುರೇಶ ಅತಿಥಿಗಳಾಗಿ ಮಾತನಾಡಿದರು.

**ಕೋಮುವಾದಿಗಳ ಪುಂಡಾಟಿಕೆ: ಹೆಚ್ಚುತ್ತಿರುವ ಆತಂಕ**

**- ಕಾಂ.ಮಾರುತಿ ಮಾನ್ಪಡೆ**

ಸಮಾಜದ ಒಗ್ಗಟ್ಟಿಗೆ ಬೆಂಕಿ ಹಚ್ಚುವ, ವಿಧ್ವಂಸಕಾರಿ ವಿಷಬೀಜ ಬಿತ್ತುವ ಕೋಮುವಾದಿಗಳು ದುಡಿವ ವರ್ಗದ ಶತ್ರುಗಳು. ಎನ್‌ಡಿಎ ಪ್ರಧಾನ ಪಾತ್ರದಾರಿ ಬಿಜೆಪಿ ಮತ್ತು ಅದರ ಪರಿವಾರ ಓಟಿಗಾಗಿ ಜಾತಿ ಜಾತಿಗಳ ನಡುವೆ ಭೇದ ಸೃಷ್ಟಿಸಿ, ಜನಪರ ಹೋರಾಟವನ್ನು ಮರೆಸುತ್ತಿದೆ. ಈ ಕುರಿತು ಪ್ರಬಲ ಚಳುವಳಿ ಕಟ್ಟಬೇಕು ಎಂದು ಅತಿಥಿಗಳಾದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಕಾಂ.ಮಾರುತಿ ಮಾನ್ಪಡೆ ಆತಂಕ ವ್ಯಕ್ತಪಡಿಸಿದರು.

**ಅಂಗನವಾಡಿ ನೌಕರರಿಗೆ ಪಿಂಚಣಿ ಸಿಗಲಿ - ಎಸ್.ವರಲಕ್ಷ್ಮಿ**

ಐಸಿಡಿಎಸ್‌ನಲ್ಲಿ ಕೆಲಸ ಮಾಡಿ ವೃದ್ಧಾಪ್ಯ ಸಮೀಪಿಸುತ್ತಲೇ ಖಾಲಿ ಕೈಯಲ್ಲಿ ಅಂಗನವಾಡಿ ನೌಕರರು ಮನೆಗೆ ತೆರಳಬೇಕಾಗುತ್ತದೆ. ಇಷ್ಟು ದಿನದ ದುಡಿತಕ್ಕೆ ಯಾವ ಕಿಮ್ಮತ್ತು ಇಲ್ಲ. ಖಾಯಮಾತಿ, ಸೇವಾ ಭದ್ರತೆ ಕುರಿತು ಸರ್ಕಾರ ಮಾತೆತ್ತುತ್ತಿಲ್ಲ. ಹಾಗಾಗಿ ಅಂಗನವಾಡಿ ನೌಕರರಿಗೆ ಭವಿಷ್ಯನಿಧಿ, ಪಿಂಚಣಿ, ನ್ಯಾಯಯುತ ಸೇವಾ ಸೌಲಭ್ಯಗಳು ತಕ್ಷಣ ಸಿಗುವಂತಾಗಬೇಕೆಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ಎಸ್.ವರಲಕ್ಷ್ಮಿ ಹೇಳಿದರು. ಈ ಬೇಡಿಕೆ ಈಡೇರಿಕೆಗಾಗಿ ಮೇ ತಿಂಗಳಲ್ಲಿ ರಾಜ್ಯಾದ್ಯಂತ ಜಾಥಾ ನಡೆಸುವುದಾಗಿ ಹೇಳಿದರು.

**ಚಳುವಳಿ ಮತ್ತು ಸಂಘಟನೆ ವಿಸ್ತಾರಗೊಳ್ಳಲಿ - ಶಾಂತಾ ಎನ್.ಘಂಟಿ**

ಸಮ್ಮೇಳನದ ಉದ್ಘಾಟನಾ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ರಾಜ್ಯ ಸಮಿತಿ ಅಧ್ಯಕ್ಷೆ ಕಾಂ.ಶಾಂತಾ ಎನ್.ಘಂಟಿ, ಮುಂದಿನ ಸಮ್ಮೇಳನದೊಳಗಾಗಿ ರಾಜ್ಯದ ಪ್ರತಿಯೊಂದು ತಾಲೂಕಿಗೂ ಚಳುವಳಿ ಹಬ್ಬುತ್ತದೆ, ನಮ್ಮನ್ನು ದೌರ್ಜನ್ಯಕ್ಕೀಡುಮಾಡಿದವರಿಗೆ, ಸರ್ಕಾರದ ತಪ್ಪು ನೀತಿಗಳಿಗೆ ಪಾಠ ಕಲಿಸುತ್ತೇವೆ. ಹಳ್ಳಿ ಹಳ್ಳಿಗಳಲ್ಲಿರುವ ಅಂಗನವಾಡಿ ನೌಕರರು. ಇತರೇ ಜನವಿಭಾಗವನ್ನು ಸಂಘಟಿಸಿ ನಮ್ಮ ಖಾಯಮಾತಿಗಾಗಿ ನಡೆವ ಹೋರಾಟದಲ್ಲಿ ಅವರನ್ನು ಅಣಿನೆರೆಸುತ್ತೇವೆಂದು ಹೇಳಿದರು.

> **ನೂತನ ಪದಾಧಿಕಾರಿಗಳು**
>
> ಅಧ್ಯಕ್ಷರು : **ಶಾಂತಾ ಎನ್.ಘಂಟಿ**
>
> ಪ್ರಧಾನ ಕಾರ್ಯದರ್ಶಿ: **ಎಸ್.ವರಲಕ್ಷ್ಮಿ**
>
> ಖಜಾಂಚಿ: **ಕಮಲಾ**
>
> ಒಟ್ಟು 18 ಜನ ಪದಾಧಿಕಾರಿಗಳು ಮತ್ತು 30 ಜನ ರಾಜ್ಯ ಸಮಿತಿ ಮತ್ತು 107 ರಾಜ್ಯ ಮಂಡಳಿಯನ್ನು ಆಯ್ಕೆ ಮಾಡಲಾಯಿತು.

ಬಹಿರಂಗ ಸಭೆಗೆ ಸ್ವಾಗತ ಬಯಸಿದವರು ಗುಲ್ಬರ್ಗಾ ಸಿಐಟಿಯು ಜಿಲ್ಲಾ ಸಂಚಾಲಕರಾದ ಕಾಂ.ವಾಜೇಂದ್ರ ಕುಲಕರ್ಣಿ, ಸಂಘದ ಜಿಲ್ಲಾ ಅಧ್ಯಕ್ಷರಾದ ಕಾಂ.ಗೌರಮ್ಮ ಬಿ ಪಾಟೀಲ್‌ರವರು ನಿರ್ವಹಿಸಿದರು. ಬಹಿರಂಗ ಸಭೆಯ ಪೂರ್ವ ಗುಲ್ಬರ್ಗಾ ನಗರದಾದ್ಯಂತ ಸುಡು ಬಿಸಿಲ ಬೇಗೆಯಲ್ಲೂ, ಕೆಂಪು ಸಮವಸ್ತ್ರ ಧರಿಸಿದ ಸಹಸ್ರಾರು ಅಂಗನವಾಡಿ ನೌಕರರಿಂದ ಬೃಹತ್ ರ್ಯಾಲಿ ಜನಮನದ ಮೇಲೆ ಬೇಡಿಕೆಯ ಛಾಯೆ ಮೂಡಿಸಿತು.

ಬಹಿರಂಗ ಸಭೆಯ ನಂತರ ಕಾಂ.ಶಾಂತಾ ಘಂಟೆಯವರು ಸಿಐಟಿಯು ಧ್ವಜಾರೋಹಣಾ ನೆರವೇರಿಸಿದರು.

ಸಮ್ಮೇಳನದಲ್ಲಿ ಒಟ್ಟು 187 ಪ್ರತಿನಿಧಿಗಳು, 38 ವೀಕ್ಷಕರು, 7 ಜನ ಪದಾಧಿಕಾರಿಗಳನ್ನು ಒಳಗೊಂಡು 233 ಪ್ರತಿನಿಧಿಗಳು ಭಾಗವಹಿಸಿದ್ದರು. ಪ್ರಧಾನ ಕಾರ್ಯದರ್ಶಿಗಳು ಮಂಡಿಸಿದ ಲಿಖಿತ ಕರಡು ವರದಿಯ ಮೇಲೆ ಒಟ್ಟು 39 ಜನ ಮಾತನಾಡಿದರು. ಪ್ರಧಾನ ಕಾರ್ಯದರ್ಶಿಗಳು ತಮ್ಮ ಉತ್ತರದಲ್ಲಿ ಹೇಳಿದಂತೆ, ಈ ಸಮ್ಮೇಳನದಲ್ಲಿ ಸಂಘಟನಾತ್ಮಕವಾಗಿ, ಕಳಕಳಿಯಿಂದ, ಜವಾಬ್ದಾರಿಯಿಂದ ಪ್ರತಿನಿಧಿಗಳು ಮಾತನಾಡಿದ್ದಾರೆ. ರಾಜ್ಯದ ಎಲ್ಲಾ ತಾಲೂಕುಗಳಲ್ಲಿ ಸಂಘಟನೆ ಒಯ್ಯಲುದ ಸದಸ್ಯತ್ವ ಹೆಚ್ಚಿಸಲು, ಹೋರಾಟ ವಿಸ್ತರಿಸಲು, ಸೈದ್ಧಾಂತಿಕ ತರಬೇತಿ ನೀಡಲು, ಸರ್ಕಾರದ ಜನಪ್ರತಿನಿಧಿಗಳ ದೌರ್ಜನ್ಯ, ಕಿರುಕುಳವನ್ನು ಎದುರಿಸುವ ಬಲಿಷ್ಠ ಚಳುವಳಿ ರೂಪಿಸಲು, ಕನಿಷ್ಠ 10 ಜನ ಪೂರ್ಣಾವಧಿ ಕಾರ್ಯಕರ್ತರನ್ನು ಹೊಂದಲು, ಆರ್ಥಿಕವಾಗಿ ಸಬಲರಾಗುವ ಸಂಘಟನಾತ್ಮಕ ತೀರ್ಮಾನವನ್ನು ಸಮ್ಮೇಳನದಲ್ಲಿ ಕೈಗೊಂಡರು. ಹೋರಾಟದ ಹಾಡುಗಳು, ರಾಜ್ಯ - ರಾಷ್ಟ್ರೀಯ ಮುಖಂಡರ ಪತ್ರಿಕಾಗೋಷ್ಠಿ ಈ ಮಧ್ಯೆ ನಡೆಯುತ್ತಿತ್ತು. ಗುಲ್ಬರ್ಗಾ ನಗರದ ಮುಖ್ಯ ಕೇಂದ್ರಗಳಲ್ಲಿ ಪ್ರಚಾರದ ಬ್ಯಾನರ್, ಬಾವುಟ, ಗೋಡೆಬರಹ ಗಮನ ಸೆಳೆದಿತ್ತು.

ದಿನಾಂಕ.18ರಂದು ಮಧ್ಯಾಹ್ನ ಸ್ಫೂರ್ತಿಯುತ ಘೋಷಣೆ ಹಾಗೂ ಗೆಲುವು ನಮ್ಮದು ಹಾಡಿನೊಂದಿಗೆ ಧ್ವಜ ಇಳಿಸುವ ಮೂಲಕ 3 ದಿನಗಳ ಸಮ್ಮೇಳನಕ್ಕೆ ತೆರೆ ಬಿದ್ದಿತು.

**ರಾಜ್ಯ ಸಮ್ಮೇಳನದ ಮುಖ್ಯ ತೀರ್ಮಾನಗಳು: ಏಪ್ರಿಲ್ 26 ದೆಹಲಿಯಲ್ಲಿ ಬೃಹತ್ ಸಮಾವೇಶ**

ಅಂಗನವಾಡಿ ನೌಕರರನ್ನು ಖಾಯಂ ಮಾಡಬೇಕು, ಸಿ ಅಂಡ್ ಡಿ ಗ್ರೂಪ್ ನೌಕರರಾಗಿ ಪರಿಗಣಿಸಬೇಕು. ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯನ್ನು ಬೇರ್ಪಡಿಸಿ, ಆರೋಗ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆಯಿಂದ ಈಗಾಗಲೇ ಅಂಗನವಾಡಿ ನೌಕರರು ಮಾಡುತ್ತಿರುವ ಕೆಲಸಗಳನ್ನು ಖಾಯಂ ಆಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ವರ್ಗಾಯಿಸಿ ಈಗಿರುವ ನಾಲ್ಕುವರೆ ಗಂಟೆ ಎಂಟು ಗಂಟೆಗಳ ಕಾಲ ಕೆಲಸ ಮಾಡಿಸಿ, ಕನಿಷ್ಠ ಕೂಲಿ ಕೊಡಬೇಕೆಂದೂ ಒತ್ತಾಯಿಸಿ, ಅಂಗನವಾಡಿ ಕೇಂದ್ರ ಮೌಲ್ಯವನ್ನು ಹೆಚ್ಚಿಸಲು 1ನೇ ತರಗತಿ ಸೇರುವ ಮಗುವಿಗೆ ಅಂಗನವಾಡಿ ಕೇಂದ್ರದಿಂದ ವರ್ಗಾವಣೆ ಪತ್ರ ಕೊಡುವಂತೆ ಸರ್ಕಾರಿ ಆದೇಶ ಹೊರಡಿಸಬೇಕೆಂದೂ ಒತ್ತಾಯಿಸಿ ದೇಶದಾದ್ಯಂತ ಸುಮಾರು 50 ಲಕ್ಷಕ್ಕೂ ಹೆಚ್ಚು ಈಗಾಗಲೇ ಸಂಗ್ರಹಿಸಿರುವ ಸಹಿಗಳನ್ನು ಏಪ್ರಿಲ್ 26ರಂದು ನವದೆಹಲಿಯಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖಾ ಸಚಿವರಿಗೆ ಕೊಟ್ಟು ಒತ್ತಾಯಿಸುವುದಕ್ಕಾಗಿ ಬೃಹತ್ ಸಮಾವೇಶ ನಡೆಯುತ್ತಿದೆ. ಈ ಸಮಾವೇಶವನ್ನು ಯಶಸ್ವಿ ಮಾಡಲು ಎಲ್ಲಾ ತಾಲೂಕಿನ ಪ್ರತಿನಿಧಿಗಳು ಪಾಲ್ಗೊಳ್ಳುವುದು.

**ನಿವೃತ್ತಿ ಸೌಲಭ್ಯಕ್ಕಾಗಿ ಒತ್ತಾಯಿಸಿ ಮೇ 25ರಂದು ಅಂಗನವಾಡಿ ಕೇಂದ್ರಗಳ ಬಂದ್:**

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿಯಲ್ಲಿ 1975ರಿಂದಲೂ ಅಂಗನವಾಡಿ ನೌಕರರು ರಾಜ್ಯದಲ್ಲಿ ಸುಮಾರು 80 ಸಾವಿರಕ್ಕೂ ಹೆಚ್ಚು ಜನರು ದುಡಿಯುತ್ತಿದ್ದಾರೆ. ಇವರು ಯಾವಾಗ



...ಸಭೆಯಲ್ಲಿ ಮಾತನಾಡುತ್ತಿರುವ ಡಾ. ಹೇಮಲತಾ, ...ಲ್ಲಿ ವರಲಕ್ಷ್ಮಿ, ಶಾಂತಾ, ...

ನಿವೃತ್ತಿಯಾಗಬೇಕೆಂದೂ ಸರ್ಕಾರ ಇದುವರೆಗೂ ತೀರ್ಮಾನಿಸಿಲ್ಲ. ಈಗಾಗಲೇ ವಯಸ್ಸಾಗಿರುವವರನ್ನು ಕೆಲಸದಿಂದ ತೆಗೆಯಲು ಸ್ಥಳೀಯ ಅಧಿಕಾರಿಗಳು ಕಿರುಕುಳಗಳನ್ನು ನೀಡುತ್ತಿರುದು ಸರ್ವೆ ಸಾಮಾನ್ಯವಾಗಿದೆ. ಹಾಗಾಗಿ ನಿವೃತ್ತಿ ಸೌಲಭ್ಯದ ಬೇಡಿಕೆಯನ್ನು ಹಲವಾರು ವರ್ಷಗಳಿಂದ ಕೇಳುತ್ತಿದ್ದರೂ ಸರ್ಕಾರ ಅತ್ತ ಕಡೆ ಗಮನ ಕೊಡದಿರುವುದನ್ನು ವಿರೋಧಿಸಿ ಈಗಾಗಲೇ ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಹಿಮಾಚಲ ಪ್ರದೇಶ ಮತ್ತು ತಮಿಳುನಾಡಿನಲ್ಲಿ ನಿವೃತ್ತಿ ವೇತನ ನೀಡಲಾಗುತ್ತಿದೆ. ಅದೇ ಪ್ರಕಾರ ಕರ್ನಾಟಕ ರಾಜ್ಯ

# ...ಟನೆಯಾಗಿ ಚಿಮ್ಮುವುದರತ್ತ

ಡಾ.ಹೇಮಲತಾ



ಸರ್ಕಾರವೂ ಕೊಡಬೇಕೆಂದೂ ಒತ್ತಾಯಿಸಿ ಮೇ 25ರಂದು ಅಂಗನವಾಡಿ ಕೇಂದ್ರಗಳನ್ನು ಬಂದ್ ಸಿಐಟಿಯು ನಡೆಸುತ್ತಿರುವ ಎಲ್ಲಾ ಪಂಚಾಯಿತಿಗಳೆದರು ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಸಮ್ಮೇಳನ ನಿರ್ಧರಿಸಿದೆ.

**ಮುಂದಿನ ಕರ್ತವ್ಯಗಳು:**

1. ಅಂಗನವಾಡಿ ನೌಕರರ ಅಖಿಲಭಾರತ ಸಮ್ಮೇಳನವನ್ನು ಅತ್ಯಂತ ಯಶಸ್ವಿಗೊಳಿಸುವುದು.
2. ಪ್ರಜಾಸತ್ತಾತ್ಮಕವಾದ ಎಲ್ಲಾ ಚಳುವಳಿಗಳಲ್ಲೂ ಪಾಲ್ಗೊಳ್ಳುವುದು.
3. ಸಿಐಟಿಯುವಿನ ಎಲ್ಲಾ ಕರೆಗಳನ್ನು ಜಾರಿಗೊಳಿಸುವುದು.
4. ಸಂಘದ ಸದಸ್ಯತ್ವವನ್ನು ಮುಂದಿನ ಸಮ್ಮೇಳನದ ವೇಳೆಗೆ 20 ಸಾವಿರವನ್ನು ಮಾಡಿಸುವುದು.
5. ಪ್ರತಿ ವರ್ಷ ಸಂಘಟನಾ ಕಾರ್ಯಾಗಾರ ಮತ್ತು ತರಬೇತಿ ಶಿಬಿರಗಳನ್ನು ನಡೆಸುವುದು.
6. ಎಲ್ಲಾ ಜಿಲ್ಲೆಗಳಲ್ಲಿ ಜನವಾದಿ ಮಹಿಳಾ ಸಂಘಟನೆ ಮತ್ತು ಸಿಐಟಿಯು ಸಂಘಟನೆಗಳನ್ನು ಬಲಪಡಿಸುವುದು.
7. ಸಂಘದ ಎಲ್ಲಾ ಸದಸ್ಯರನ್ನು ಜನವಾದಿ ಮಹಿಳಾ ಸಂಘಟನೆಗೆ ಸದಸ್ಯರನ್ನಾಗಿ ನೊಂದಾಯಿಸುವುದು.
8. ಸ್ತ್ರೀಶಕ್ತಿ ಗುಂಪಿನ ಮಹಿಳೆಯರನ್ನು ತಾಲೂಕು ಮಟ್ಟದ ಒಕ್ಕೂಟಗಳನ್ನು ಮಾಡುವ ಮುಖಾಂತರ ರಾಜ್ಯಮಟ್ಟದ ಒಕ್ಕೂಟವನ್ನು ಸ್ಥಾಪಿಸುವುದು.
9. ತಮ್ಮ ಹಳ್ಳಿಗಳಲ್ಲಿ ರೈತ - ಕೃಷಿ ಕೂಲಿಕಾರರ ಹಕ್ಕುಗಳಿಗಾಗಿ ಹೋರಾಟಗಳನ್ನು ರೂಪಿಸುವುದು.
10. ಮುಂದಿನ ಸಮ್ಮೇಳನದ ವೇಳೆಗೆ 125 ತಾಲೂಕುಗಳಿಗೆ ಸಂಘಟನೆಯನ್ನು ವಿಸ್ತರಿಸುವುದು.
11. 10 ಜನ ಪೂರ್ಣಕಾಲದ ಕಾರ್ಯಕರ್ತರನ್ನು ನೇಮಿಸಲು ಸಾಧ್ಯವಾಗುವಂತೆ ಸಂಘಟನೆಯ ಆರ್ಥಿಕ ಸ್ಥಿತಿಯನ್ನು ಬಲಪಡಿಸುವುದು.

## ಅಧಿವೇಶನದಲ್ಲಿ ಮೂಡಿ ಬಂದ ಅಭಿಪ್ರಾಯಗಳು

ಸಿಐಟಿಯು ಹೇಳ್ತದೆ ದುಡೀರಿ; ದುಡ್ ಕೇಳ್ರಿ ಅಂತ. ಸಹಾಯಕಿಯರ ಬಗ್ಗೆ ಯಾರೂ ತಾತ್ಸಾರ ಮಾಡಬೇಡ್ರಿ.

**- ರಾಮದುರ್ಗದ ಹೆಲ್ಪರ್ ಜಯಮ್ಮ**

ನಾವು ಸಣ್ ಗೌರವಧನ ಪಡೀತಿದ್ದೇವೆ, ಭಿಕ್ಷೆ ಅಲ್ರಿ, ಹಸಿವಾದ್ರ 1 ರೂ. ಯಾರೂ ಕೊಡಲ್ಲ, ಕೋಡ್ಬೋದಿಲ್ಲ, ಸೀರೆ ಬೇಕಾದ್ರೆ ದುಡ್ಡಿಲ್ಲ, ಆದ್ರೆ ಸಿಐಟಿಯು ಸಂಘ ನಮಗೆ ಎಲ್ಲಾ ಕೊಡ್ಸಿದೆ.

**- ಹಗರಿಬೊಮ್ಮನಹಳ್ಳಿಯ ಪ್ರತಿನಿಧಿ**

ಸಿಐಟಿಯು ಕಮ್ಯುನಿಸ್ಟ್ ಅಂತ ನಂಗೆ ಗೊತ್ತಿಲ್ಲ. ಆದ್ರೆ ಅನ್ನ ತಿಂತಿರೋದು ಆದ್ರಿಂದಲೇ. ಜನಪ್ರತಿನಿಧಿಗಳ ಎಲ್ಲಾ ಕಿರುಕುಳದ ಮಧ್ಯೆ ನಮ್ಮ ಜಿಲ್ಲೆಯಲ್ಲಿ ರ್‍ಯಾಲಿ ನಡೆಸಿದ್ವಿ. ಚಿಕ್ಕನಾಯಕನಹಳ್ಳಿಲಿ ಕೆಂಪು ಬಂತು..... ಕೆಂಪು ಬಂತು..... ಎಲ್ಲಾ ಕೆಂಪಾಗಿದ್ದವು ಅಂತ ಊರಲ್ಲಿ ಆಶ್ಚರ್ಯದಿಂದ ಜನ ಮಾತಾಡುವ ಹಾಗೇ ಮಾಡಿದ್ದು, ಸಂಘಟನೆ ಬೆಳೆಯೋದರ ಸೂಚನೆ. ಸಿಐಟಿಯು ನಿಮಗ್ಯಾಕೆ ಅನ್ನುವವರಿಗೆ ಉತ್ತರ ಇದೇ.

**-ಚಿಕ್ಕನಾಯಕನ ಹಳ್ಳಿಯ ಪ್ರತಿನಿಧಿ**

ನನ್ನ ಅಂಗನವಾಡೀಲಿ ಶಾಲೆ ಬಿಟ್ಟ ತಕ್ಷಣ ಮಗುವಿನ ಪಾಲಕನೋರ್ವ ಬಂದು ಗಲಾಟೆ ಮಾಡಿ ಅವಾಚ್ಯವಾಗಿ ಬೈದಾಡಿದ. ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ನಂತರ ಸಂಘಟನೆಯ ಪದಾಧಿಕಾರಿಗಳೆಲ್ಲ ಬಂದು ನನಗೆ ರಕ್ಷಣೆ ಕೊಟ್ರು, ಪೋಲೀಸ್ ಸ್ಟೇಷನ್‌ಗೆ ಅಪರಾಧಿನ ಕರೆಸಿ ಬುದ್ಧಿ ಹೇಳಿದೆವು . ಅಂಗನವಾಡಿ ಸಂಘ ನಮಗೆ ಧೈರ್ಯ ಕೊಡುತ್ತಿದೆ.

**-ಉತ್ತರಕನ್ನಡದ ಶಾಂತಿ ಶೇಟ್**

ಈಗ ನಮ್ಗೆ 29 ರಿಜಿಸ್ಟರ್ ಬರೀ ಬೇಕು. ಎಲ್ಲಾ ಕೆಲಸ ಮಾಡಿದ್ರೂ ಕಿರುಕುಳ ತಪ್ಪಿಲ್ಲ.

**- ತುಮಕೂರಿನ ರಾಜಲಕ್ಷ್ಮಿ**

ನಮ್ಮ ಸಂಘಕ್ಕೆ ಪೂರ್ಣಾವಧಿ ಕಾರ್ಯಕರ್ತರು ಬೇಕು. ನಾವೇ ತಯಾರಾಗ್ತೀವಿ.

**- ನಂಜನಗೂಡಿನ ಸಂಗಾತಿ**

ನಾವು ಸ್ತ್ರೀ ಶಕ್ತಿ ಸಂಘ ಮಾಡುವುದನ್ನು ನಿಲ್ಲಿಸಬೇಕು ಅಂತ ಒಮ್ಮೊಮ್ಮೆ ಸಿಟ್ಟು ಬರುತ್ತದೆ. ಆದ್ರೇ ಸ್ತ್ರೀ ಶಕ್ತಿ ಸಂಘ ಮಾಡುವುದನ್ನು ಬಿಡಲ್ಲ; ಗಟ್ಟಿಗೊಳಿಸ್ತಿವೆ ಅದನ್ನು ಜನವಾದಿ ಮಹಿಳಾ ಸಂಘವಾಗಿ ಮಾಡಿ ರಾಜಕೀಯ ತಿಳುವಳಿಕೆ ಕೊಡ್ತೀವಿ.

**- ಕೋಲಾರದ ಸಂಗಾತಿ**

ನಾವು ಬೇರೆ ಸಂಘದಿಂದ ಸಿಐಟಿಯುಗೆ ಬಂದ್ವಿ. ಇಷ್ಟೇಲ್ಲಾ ಹೋರಾಟ, ಚರ್ಚೆ ನಡೆಸೋದು, ಸಮಿತಿ ನಿರ್ವಹಿಸೋದು, ಬೇಡಿಕೆ ಈಡೇರಿಸಿಕೊಳ್ಳೋದು ಇವುಗಳನ್ನು ಸಿಐಟಿಯು ನಮಗೆ ಕಲಿಸ್ತಿದೆ.

**- ಹೊಸ ಸಂಗಾತಿ**

ಸಿಪಿಐ(ಎಂ) ನಮ್ಮದು. ನಮ್ಮ ಉಡಿಗೆ ಹಾಕ್ರಿ ನಾವು ಬೆಳೆಸ್ತೀವಿ. ನಮಗೆ ತಿಳುವಳಿಕೆ ಕೊಡಿ, ನಮಗೆ ಬೇರೆ ರಾಜಕೀಯದವರು ಗೌರವ ಕೊಡಲ್ಲ, ಪಕ್ಷ ನಮಗೆ ಸಹಾಯ ಮಾಡ್ತಿದೆ ಅಂತಾದ್ರೇ ನಾವ್ಯಾಕೆ ಪಕ್ಷ ಕಟ್ಟಬಾರದು. ನಮಗ್ಯಾಕೆ ಪಕ್ಷ ಕಟ್ಟುವ ಕೆಲಸದಲ್ಲಿ ಜವಾಬ್ದಾರಿ ಕೊಡಲ್ಲ?

**- ಗುಲ್ಬರ್ಗಾದ ಸಂಗಾತಿ**

ನಾವು ಸದಸ್ಯತ್ವದಲ್ಲಿ ತಪ್ಪಿದ್ದೇವೆ. ಹೋರಾಟ ನೋಡಿ ಜನ ಹೆದರ್‍ತಾರೆ. ಸದಸ್ಯತ್ವ ನೋಡಿ ಜನ ನಗುವಂತಾಗಬಾರದು. ಮುಂದಿನ ಸಲ ರಾಜ್ಯದಲ್ಲಿ ನಮ್ಮ ಸದಸ್ಯತ್ವ ಎರಡು ಪಟ್ಟು ಹೆಚ್ಚಾಗಬೇಕು. ಹೀಗೆಲ್ಲ ವಿಮರ್ಶೆ-ಸ್ವವಿಮರ್ಶೆ-ಕಾಳಜಿ-ರಾಜಕೀಯ ಪ್ರಜ್ಞೆಯ ಹೊಳಹು, ತಾವು ಅನುಭವಿಸುತ್ತಿರುವ ನೋವು 3 ದಿನಗಳಲ್ಲಿ ಸ್ಫೋಟಗೊಂಡಿತ್ತು.

## ಸರ್ವಾನುಮತದಿಂದ ಅಧಿವೇಶನವು ಕೈಗೊಂಡ ತೀರ್ಮಾನಗಳು

1. ಅಂಗನವಾಡಿ ನೌಕರರನ್ನು ದರ್ಜೆ 3 ಮತ್ತು 4ರಲ್ಲಿ ಖಾಯಂಗೊಳಿಸಬೇಕು. ಐಸಿಡಿಎಸ್ ಅನ್ನು ಮೇಲ್ದರ್ಜೆಗೇರಿಸಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಭಾಗವಾಗಿಸಬೇಕು. ಖಾಯಂಗೊಳಿಸುವವರೆಗೆ ದರ್ಜೆ 3 ಮತ್ತು 4ರ ಸರ್ಕಾರಿ ನೌಕರರಿಗೆ ನೀಡುವ ವೇತನ ನೀಡಬೇಕು. ಈ ಕುರಿತ ನಿರ್ಣಯವನ್ನು ಕೋಲಾರದ ಲಕ್ಷ್ಮಿದೇವಮ್ಮ ಮಂಡಿಸಿದರು. ಹಾಸನದ ಶಾಂತಲಕ್ಷ್ಮಿ ಅನುಮೋದಿಸಿದರು.
2. ಬೆಂಗಳೂರಿನಲ್ಲಿ ನವೆಂಬರ್ 2005ರಲ್ಲಿ ನಡೆಯುವ ಅಖಿಲ ಭಾರತ ಸಮ್ಮೇಳನ ಯಶಸ್ವಿಗೊಳಿಸಲು, ಅಂಗನವಾಡಿ ನೌಕರರ ಚಳುವಳಿಯ ಇತಿಹಾಸದಲ್ಲಿ ಸ್ಮರಣಾರ್ಹವಾಗುವಂತೆ ಮಾಡಲು ರಾಜ್ಯದ ಅಂಗನವಾಡಿ ನೌಕರರು ತನು-ಮನ-ಧನದೊಂದಿಗೆ ಸಹಕರಿಸಲು ಕರೆ ಕೊಟ್ಟ ನಿರ್ಣಯವನ್ನು ಯಮುನಾ ಗಾಂವ್ಕರ್ ಮಂಡಿಸಿದರು, ತುಮಕೂರಿನ ಹೆ.ಎ.ಪುಷ್ಪಾ ಅನುಮೋದಿಸಿದರು.
3. ಏಕತೆಯನ್ನು ಒಡೆಯುವ ಕೋಮುವಾದದ ವಿರುದ್ಧ ದಕ್ಷಿಣಕನ್ನಡದ ವಿದ್ಯಾವತಿ ನಿರ್ಣಯ ಮಂಡಿಸಿದರು, ನಂಜನಗೂಡಿನ ಶಕುಂತಲಾ ಅನುಮೋದಿಸಿದರು.
4. ಅಂಗನವಾಡಿ ನೌಕರರ ಸ್ಥಳೀಯ ಎಲ್ಲಾ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ, ಗುಲ್ಬರ್ಗಾದ ರಜಿಯಾ ಬೇಗಂ ನಿರ್ಣಯ ಮಂಡಿಸಿದರು, ಬೆಳಗಾಂನ ಅನ್ನಪೂರ್ಣ ದೇವಾಂಗ ಮಠ ಅನುಮೋದಿಸಿದರು.
5. ಸಿಐಟಿಯು ಜಿಲ್ಲಾ ಸಮಿತಿಗೆ 5ರೂ. ವಂತಿಗೆ ನೀಡುವ ಕುರಿತು ಅಲ್ಲಾಭಕಾಶ್ ನಿರ್ಣಯ ಮಂಡಿಸಿದರು. ರಾಯಚೂರಿನ ವರಲಕ್ಷ್ಮಿ ಅನುಮೋದಿಸಿದರು.
6. ಮೇ ತಿಂಗಳಲ್ಲಿ ನಡೆವ ಸಿಐಟಿಯು ಜಾಥಾ ಯಶಸ್ವಿಗೊಳಿಸಲು ಮಂಟನಗೌಡ ನಿರ್ಣಯ ಮಂಡಿಸಿದರು. ಉತ್ತರಕನ್ನಡದ ಶಾಲಿನಿ ಕಲ್ಮನೆ ಅನುಮೋದಿಸಿದರು.
7. ಸುಮಂಗಲಿ ಸೇವಾಶ್ರಮದಡಿಯಲ್ಲಿ ನಡೆಯುವ 130 ಅಂಗನವಾಡಿ ಕೇಂದ್ರಗಳನ್ನು ಸರ್ಕಾರ ವಹಿಸಿಕೊಳ್ಳಲು ಆಗ್ರಹಿಸಿ ಬೀದರಿನ ಕಾಂ.ಶ್ರೀದೇವಿ ಚುಡೆ ನಿಣಯ ಮಂಡಿಸಿದರು. ಶಾಂತಮ್ಮ ಅನುಮೋದಿಸಿದರು.
8. ಏಪ್ರಿಲ್ 26ರ ದೆಹಲಿ ಚಲೋ ಯಶಸ್ವಿಗೊಳಿಸಲು ಬೆಂಗಳೂರಿನ ಜಯಲಕ್ಷ್ಮಿ ನಿರ್ಣಯ ಮಂಡಿಸಿದರು. ಗುಲ್ಬರ್ಗಾದ ಸೌಭಾಗ್ಯಮ್ಮ ಅನುಮೋದಿಸಿದರು.
9. ಅಂಗನವಾಡಿ ಕೇಂದ್ರದ ಮೂಲಕ ಮುಂದಿನ ಶಿಕ್ಷಣಕ್ಕೆ ತೆರಳುವ ಮಕ್ಕಳಿಗೆ ಟಿಸಿಯನ್ನು ಅಂಗನವಾಡಿ ಕೇಂದ್ರದಲ್ಲಿ ನೀಡಲು ಒತ್ತಾಯಿಸಿ ನಿರ್ಣಯವನ್ನು ಮಂಡ್ಯದ ಕಮಲಾ.ಡಿ.ಎಂ. ಮಂಡಿಸಿದರು. ಬೆಂಗಳೂರಿನ ಲಕ್ಷ್ಮಿ ಅನುಮೋದಿಸಿದರು.
10. ಅಂಗನವಾಡಿ ನೌಕರರಿಗೆ ಬಿಪಿಎಲ್ ಕಾರ್ಡ್ ನೀಡಲು ಒತ್ತಾಯಿಸಿ, ಬಳ್ಳಾರಿಯ ಮಂಗಳಾ ನಿರ್ಣಯ ಮಂಡಿಸಿದರು. ಶಾಂತ ಯಲಬುರ್ಗಾ ಅನುಮೋದಿಸಿದರು.

### ಬಾಳಸಂಗಾತಿಗಳಿಗೊಂದು ಆತಿಥ್ಯ

ಸಂಘಟನೆ, ಹೋರಾಟ, ಗುಂಪು ಚರ್ಚೆ ಇತ್ಯಾದಿಗಳ ಗಂಭೀರತೆ ಮಧ್ಯೆ ಒಂದು ಚಿಕ್ಕ ಸಂತೋಷ ಕೂಟ ನಡೆಯಿತು. ಏಪ್ರಿಲ್ 17ರ ಸಂಜೆಯ ಅಧಿವೇಶನದಲ್ಲಿ ಅಂಗನವಾಡಿ ನೌಕರರ ಸಂಘದ ಹಾಸನದ ಕಾರ್ಯದರ್ಶಿ ಕಾಂ.ಸುನೀತಾ, ಪ್ರಜಾಸತ್ತಾತ್ಮಕ ಯುವ ಜನ ಫೆಡರೇಶನ್ ಡಿವೈಎಫ್‌ಐನ ಮುಖಂಡ ಕಾಂ.ಧರ್ಮೇಶ್ ಇತ್ತೀಚೆಗೆ ವಿವಾಹವಾದರು. ಅವರಿಗೆ ರಾಜ್ಯ ಸಮ್ಮೇಳನ ತನ್ನ ಆತಿಥ್ಯ ನೀಡಿದ್ದು ಪ್ರತಿನಿಧಿಗಳಿಗೆ ವಿಶಿಷ್ಟ ಅನುಭವ ನೀಡಿತು. ಮದುವೆಯ ಹೊಸ ಕಲ್ಪನೆಯನ್ನು ತೆರೆದಿಟ್ಟಿತು. ಕಾರ್ಯಕ್ರಮ ನಿರೂಪಿಸಿದ ಅಲ್ಲಾ ಭಕ್ಷ ಸಂಗಾತಿಗಳೀರ್ವರನ್ನು ವೇದಿಕೆಗೆ ಕರೆಯುತ್ತಿದ್ದಂತೆ ನಂಜನಗೂಡಿನ ಸುನಂದ 'ದನಿ ಇರದ ಬಾಳಿನಲ್ಲಿ ಬೆಳಕಾದೆ ನೀನು' ಎಂದು ಸುಶ್ರಾವ್ಯವಾಗಿ ಹಾಡಿದರು. ರಾಜ್ಯಾಧ್ಯಕ್ಷೆ ಶಾಂತಾ ಎನ್. ಘಂಟೆ ಬಾಳಸಂಗಾತಿಗಳಿಗೆ ಹೂಹಾರ ವಿನಿಮಯ ಮಾಡಿಸಿದರು. ಪ್ರಾರಂಭದಲ್ಲಿ ಶುಭಕೋರಿ ಮಾತನಾಡಿದ ಸಾಂಸ್ಕೃತಿಕ ಚಳುವಳಿಯ ಸಾಹಿತಿ ಆರ್.ಕೆ.ಹುಡುಗಿ, ಪ್ರಾಂತ ರೈತ ಸಂಘದ ಕಾಂ.ಮಾರುತಿ ಮಾನ್ಪಡೆ, ಅಂಗನವಾಡಿ ನೌಕರರ ಸಂಘದ ಕಾಂ.ಯಮುನಾ ಗಾಂವ್ಕರ್, ಶುಭಕೋರಿ ಮಾತನಾಡುತ್ತಾ ಮದುವೆಗಿರುವ ಪ್ರಗತಿಪರ ಹಿನ್ನೆಲೆ, ಹೋರಾಟಗಾರರ ಬಾಳು ವಿವರಿಸಿದರು. ಕ್ರಾಂತಿಕಾರಿಗಳಿಗೆ ಮದುವೆ ವೈಯುಕ್ತಿಕ ಕಾರ್ಯಕ್ರಮವಲ್ಲ, ಸಾಮಾಜಿಕ ಬದಲಾವಣೆಗಾಗಿ, ಸಮಾಜದಲ್ಲಿರುವ ಜಾತೀಯತೆ, ಕಂದಾಚಾರ ತೊಲಗಿಸುವ ಅಸ್ತ್ರವಾಗಿ, ಚಳುವಳಿಗೆ ಜೀವ ತುಂಬುವ, ಇನ್ನಷ್ಟು ಕ್ರಿಯಾಶೀಲವನ್ನಾಗಿಸುವ ಸಾಧನವಾಗಬೇಕು. ಮದುವೆಯ ಯಶಸ್ಸಿಗೆ ಗಂಡು-ಹೆಣ್ಣು ಮಾತ್ರ ಹೊಣೆಯಲ್ಲ. ಅದು ಸಮಾಜದ ಜವಾಬ್ದಾರಿ ಕೂಡ. ಉಳ್ಳವರಿಗೆ ಮದುವೆ ಒಣಪ್ರತಿಷ್ಠೆ, ತಮ್ಮ ಅಹಂ ಪ್ರದರ್ಶಿಸುವ, ರಸಾಸ್ವಾದದ ಒಂದು ಗಳಿಗೆ ಮಾತ್ರ. ಗ್ರಾಹಕ ಸರಕು ಸಂಸ್ಕೃತಿಯನ್ನು ಧಿಕ್ಕರಿಸಿ, ಕ್ರಾಂತಿಕಾರಿ ಪರಂಪರೆಯ ಮದುವೆಗಳು ಸಮಾಜವನ್ನು ಹೊಸದಾದಿಯತ್ತ ಪರಿವರ್ತನೆಯೆಡೆಗೆ ಕೊಂಡೊಯ್ಯುತ್ತವೆ ಎಂದರು ಹೇಳಿದರು. ಸಂಘದ ಪ್ರಧಾನ ಕಾರ್ಯದರ್ಶಿ ಸಂಘಟನೆ ಪರವಾಗಿ ಸಹಾಯ ನೀಡಿದರು.

18ನೇ ಮಹಾಧಿವೇಶನ
ಸಿಪಿಐ(ಎಂ)
6-11 ಏಪ್ರಿಲ್ 2005, ದೆಹಲಿ

# ಕೆಲವು ಕಾರ್ಯನೀತಿಯ ಕುರಿತು

**ಸಿಪಿಐ(ಎಂ) ಪಕ್ಷದ 18ನೇ ಮಹಾಧಿವೇಶನದಲ್ಲಿ ಚರ್ಚಿತವಾದ ರಾಜಕೀಯ-ಸಂಘಟನಾ ವರದಿಯಲ್ಲಿ ಇನ್ನೊಂದು ಪ್ರಮುಖ ಭಾಗ, ಕೆಲವು ಕಾರ್ಯನೀತಿಗಳ ಕುರಿತ ವರದಿಯಾಗಿದೆ. ದೇಶದಲ್ಲಿ ಇಂದು ವರ್ಗ ಹೋರಾಟವನ್ನು ಮುಂದೊಯ್ಯಬೇಕಾದಲ್ಲಿ ಪ್ರಸಕ್ತವಾಗಿ ಎದುರಿಸುತ್ತಿರುವ ಹಲವು ಪ್ರಶ್ನೆಗಳ ಬಗ್ಗೆ ನೀತಿ-ನಿಲುವನ್ನು ಈ ಭಾಗ-2 ಒಳಗೊಂಡಿದೆ. ಅದರ ಸಂಕ್ಷಿಪ್ತ ಸಾರವನ್ನು ಇಲ್ಲಿ ನೀಡಲಾಗಿದೆ.**

ಪ್ರಸಕ್ತ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಜಾಗತೀಕರಣಕ್ಕೆ ಸಂಬಂಧಿಸಿದಂತೆ ಸಿಪಿಐ(ಎಂ) ಪಕ್ಷದ ಧೋರಣೆಯ ಮೇಲೆ ಪ್ರಭಾವ ಬೀರುವಂತಹ ಅನೇಕ ತಾತ್ವಿಕ ವಿಷಯಗಳು ಇತ್ತೀಚಿನ ವರ್ಷಗಳಲ್ಲಿ ಎದ್ದುಬಂದಿವೆ.

ಈ ಹಿನ್ನಲೆಯಲ್ಲಿ ಪಕ್ಷದ 18ನೇ ಮಹಾಧಿವೇಶನದಲ್ಲಿ ಮಂಡಿಸಲಾದ ಕರಡು ರಾಜಕೀಯ ಸಂಘಟನಾ ವರದಿಯು (Pol-org ವರದಿ) ಭಾಗ-2 ರಲ್ಲಿ "ಕೆಲವು ಧೋರಣೆಯ ಕುರಿತು" ಅಂಶವನ್ನು ಒಳಗೊಂಡು ಈ ಕುರಿತು ಸುದೀರ್ಘವಾಗಿ ಚರ್ಚಿಸಿದ ಮಹಾಧಿವೇಶನವು, ಅನೇಕ ತಿದ್ದುಪಡಿಗಳನ್ನು ಸೂಚಿಸಿ ಅವುಗಳನ್ನು ಒಳಗೊಂಡಂತೆ ರಾಜಕೀಯ-ಸಂಘಟನಾ ವರದಿಯ ಈ ಭಾಗವನ್ನು ಅಂಗೀಕರಿಸಿ-ಅಂತಿಮಗೊಳಿಸಲು ಕೇಂದ್ರ ಸಮಿತಿಗೆ ಅಧಿಕಾರ ನೀಡಿದೆ.

ಪಕ್ಷದ 14ನೇ ಮಹಾಧಿವೇಶನ ಅಂಗೀಕರಿಸಿದ್ದ "ಕೆಲವು ಕಾರ್ಯನೀತಿ(Policy) ವಿಷಯಗಳ ಕುರಿತ ದಸ್ತಾವೇಜ"ನ್ನು ಸಮಕಾಲೀನಗೊಳಿಸುವ ಕರ್ತವ್ಯವನ್ನು 17ನೇ ಮಹಾಧಿವೇಶನವು ಮುಂದುವರಿಸಿತ್ತು. ಈ ಕರ್ತವ್ಯವನ್ನು ಒಂದು ವರ್ಷದೊಳಗಾಗಿ ಪೂರ್ಣಗೊಳಿಸಲು 18ನೇ ಮಹಾಧಿವೇಶನವು ನಿರ್ಣಯಿಸಿದೆ. ಈ ನಿಟ್ಟಿನಲ್ಲಿ ದಸ್ತಾವೇಜನ್ನು ಸಮಕಾಲೀನಗೊಳಿಸುವ ಪೂರ್ವದಲ್ಲಿ ತುರ್ತಾಗಿ ಎದ್ದುಬಂದಿರುವ ವಿಷಯಗಳ ಕುರಿತು ಚರ್ಚೆಗೆ ಅನುವುಗೊಳಿಸಲು ಈ ವರದಿಯನ್ನು ಮಂಡಿಸಲಾಗಿತ್ತು.

ಪ್ರಸ್ತುತ ಜಾಗತಿಕ ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಬಿಕ್ಕಟ್ಟಿನ ಪರಿಣಾಮವಾದ ಜಾಗತೀಕರಣ, ರಾಷ್ಟ್ರಪ್ರಭುತ್ವದ ಚೌಕಟ್ಟನ್ನು ಇಲ್ಲವಾಗಿಸುವ ಅದರ ಉದ್ದೇಶ, ಆ ಮೂಲಕ ಬಂಡವಾಳದ ಸುಗಮ ಹರಿದಾಡುವಿಕೆಗೆ ಅವಕಾಶ ಕಲ್ಪಿಸುವಿಕೆ, ಹಿಂದುಳಿದ ರಾಷ್ಟ್ರಗಳ ಆರ್ಥಿಕತೆಯನ್ನು ಬಹುರಾಷ್ಟ್ರೀಯ ಬಂಡವಾಳದ ಲಾಭಕ್ಕಾಗಿ ಪುನರ್ ಜೋಡಿಸುವಿಕೆ, ತೃತೀಯ ಜಗತ್ತಿನ ರಾಷ್ಟ್ರಗಳನ್ನು ಆರ್ಥಿಕ ನವವಸಾಹತುವಿಗೆ ಒಳಪಡಿಸುವ ಅದರ ಉದ್ದೇಶಗಳನ್ನು ವಿವರಿಸಿರುವ ವರದಿಯು, ಜಾಗತೀಕರಣದ ಒಟ್ಟಾರೆ ಪ್ರಕ್ರಿಯೆ ಹೇಗೆ ಬಹುದಿನ ಬಾಳಿಕೆ ಬಾರದು ಎಂಬುದನ್ನು ವಿವರಿಸಿದೆ. ಜಾಗತೀಕರಣ ಪ್ರಕ್ರಿಯೆ ನಡೆದಿದ್ದಂತೆ ಘಟಿಸಿದ ಹಿಂದಿನ ಸೋವಿಯತ್ ಒಕ್ಕೂಟದ ವಿಘಟನೆ, ಅಮೇರಿಕಾ ನೇತೃತ್ವದ ಸಾಮ್ರಾಜ್ಯಶಾಹಿದಾಳಿ, ಅಮೇರಿಕಾ ನಾಯಕತ್ವದಡಿಯ 'ನೂತನ ಜಾಗತೀಕ ವ್ಯವಸ್ಥೆ'ಯ ಅನಾವರಣ, ಬಹುಧೃವೀ ಕೇಂದ್ರದೆಡೆಗೆ ನಡೆದಿದ್ದ, ಶೀತಲ ಸಮರೋತ್ತರ ಅಂತರರಾಷ್ಟ್ರೀಯ ಪರಿಸ್ಥಿತಿಯನ್ನು ದಿಕ್ಕುತಪ್ಪಿಸಿ ಏಕಧೃವೀ ಶಕ್ತಿ ಕೇಂದ್ರದೆಡೆಗೆ ತನ್ನ ಅಧಿಪತ್ಯದಲ್ಲಿ ವಿಶ್ವವನ್ನು ನಡೆಸಿದ ಅಮೇರಿಕಾ ದಾಳಿಯನ್ನು ವರದಿ ವಿವರಿಸಿದೆ.

ಇಂತಹ ಸನ್ನಿವೇಶದಲ್ಲಿ ವಾಸ್ತವಕ್ಕೆ ವಿಮುಖರಾಗದೆ ಪ್ರಸ್ತುತ ಜಾಗತಿಕ ವಾಸ್ತವತೆಗೆ ಮುಖಾಮುಖಿಯಾಗಿ ಕೆಲಸ ಮಾಡುವುದು, ಸಮಾಜವಾದದ ಪರವಾಗಿ ಬಲಾಬಲಗಳ ಬದಲಾವಣೆಗೆ ಅಗತ್ಯ ಸಮಾಜವಾದದ ಪರ್ಯಾಯವನ್ನು ಸ್ಥಾಪಿಸಲು ಅಗತ್ಯವಿರುವ ಭೌತಿಕ ಶಕ್ತಿಯನ್ನು ರೂಪಿಸಲು ಇದು ಅಗತ್ಯ ಎಂದಿರುವ ವರದಿಯು ಅಂತರರಾಷ್ಟ್ರೀಯ ಬಂಡವಾಳ ಹರಿದುಬರುತ್ತಿರುವುದು, ಸಾರ್ವಜನಿಕ ವಲಯ, ಸಿಪಿಐ(ಎಂ) ನೇತೃತ್ವದ ರಾಜ್ಯ ಸರ್ಕಾರಗಳು, ಪ್ರಭುತ್ವದ ಹಿಂದೆಸರಿಯುವಿಕೆ - ಜನಪ್ರಿಯ ಮಧ್ಯಪ್ರವೇಶದ ವ್ಯಾಪ್ತಿ, ಸ್ವಯಂ ಸೇವಾ ಸಂಸ್ಥೆಗಳ ಕುರಿತು ಮತ್ತು ಸ್ವಸಹಾಯ ಗುಂಪುಗಳ ಕುರಿತು ನಿಲುಮೆಯನ್ನು ವರದಿ ಚರ್ಚಿಸಿದೆ.

**ಅಂತರರಾಷ್ಟ್ರೀಯ ಬಂಡವಾಳ ಹರಿದುಬರುವಿಕೆ**

ಅಂತರರಾಷ್ಟ್ರೀಯ ಬಂಡವಾಳ ಹರಿದುಬರುತ್ತಿರುವ ವಾಸ್ತವಿಕತೆಗೆ ವಿಮುಖರಾಗದೆ ಅಗತ್ಯವಿರುವ ಸಾಮಾಜಿಕ ಮತ್ತು ರಾಜಕೀಯ ಶಕ್ತಿಯನ್ನು ಅಣಿನೆರೆಸುತ್ತಾ ಅದರ ಮೇಲೆ ನಿಯಂತ್ರಣ ಸಾಧಿಸಲು ನಿಬಂಧನೆಗಳನ್ನು ವಿಧಿಸಲು ಕಮ್ಯೂನಿಸ್ಟರು ಶಕ್ತರಾಗಬೇಕು. ಜಾಗತೀಕರಣವು ರಾಷ್ಟ್ರದ ಆರ್ಥಿಕ ಸಾರ್ವಭೌಮತೆಯನ್ನು ಕಡೆಗಣಿಸಲು ನಡೆಸುವ ಯತ್ನವನ್ನು ಪ್ರತಿರೋಧಿಸಬೇಕು. ಈ ಪ್ರತಿರೋಧವನ್ನು ತೀವ್ರಗೊಳಿಸಲು ಸಾಧ್ಯವಾದಲ್ಲಿ, ಅದು ವರ್ಗ ಸಂಘರ್ಷವನ್ನು ಮೊನಚುಗೊಳಿಸಿ, ಕ್ರಾಂತಿಕಾರಿ ಶಕ್ತಿಗಳ ಪರವಾಗಿ ವರ್ಗಶಕ್ತಿಗಳ ಬಲಾಬಲವನ್ನು ಬದಲಿಸಲು ಕೊಡುಗೆ ನೀಡಲಿದೆ.

ಜನತಾ ಪ್ರಜಾಪ್ರಭುತ್ವ ಕ್ರಾಂತಿ ಪೂರ್ಣಗೊಂಡ ನಂತರ ಸ್ಥಾಪನೆಯಾಗುವ 'ಜನತಾ ಪ್ರಜಾಪ್ರಭುತ್ವ ಪ್ರಭುತ್ವ'ದ ಹಂತದಲ್ಲಿ ಅಂತರರಾಷ್ಟ್ರೀಯ ಬಂಡವಾಳ ಹರಿದು ಬರುವಿಕೆಯ ಮೇಲೆ ಸಂಪೂರ್ಣ ಹತೋಟಿ ಸಾಧಿಸುವರೆಗೆ ಅನೇಕ ಮಧ್ಯಂತರ ಘೋಷಣೆ ಹಾಗೂ ದೃಷ್ಟಿಕೋನಗಳನ್ನು ರೂಢಿಸಿಕೊಳ್ಳಬೇಕಾಗುತ್ತದೆ.

ಇಂತಹ ಸನ್ನಿವೇಶದಲ್ಲಿ ವಿದೇಶಿ ಬಂಡವಾಳವನ್ನು ಈ ನಿಬಂಧನೆಗಳೊಂದಿಗೆ ನಿಯಂತ್ರಿಸಬೇಕಿದೆ 1. ನಮ್ಮ ಆರ್ಥಿಕತೆಯಲ್ಲಿನ ಉತ್ಪಾದನಾ ಸಾಮರ್ಥ್ಯವನ್ನು ಅದು ಹೆಚ್ಚಿಸಬೇಕು 2. ತಂತ್ರಜ್ಞಾನದ ಆಧಾರದಲ್ಲಿ ಭಾರತದ ಆರ್ಥಿಕತೆಯನ್ನು ಉತ್ತಮಪಡಿಸಬೇಕು 3. ಅದು ಉದ್ಯೋಗ ಸೃಷ್ಟಿಸಬೇಕು.

**ಸಾರ್ವಜನಿಕ ವಲಯ :**

ಪ್ರಸಕ್ತ ಜಾಗತೀಕರಣದ ಯುಗದಲ್ಲಿ ಭಾರತದ ಆರ್ಥಿಕ ಸಾರ್ವಭೌಮತ್ವವನ್ನು ರಕ್ಷಿಸುವ ನಿಟ್ಟಿನಲ್ಲಿ ಸಿಪಿಐ(ಎಂ) ಸಾರ್ವಜನಿಕ ವಲಯದ ರಕ್ಷಣೆಗೆ ನಿಂತಿದೆ. ಉದ್ಯೋಗದಲ್ಲಿ ಮೀಸಲಾತಿಯನ್ನು ಒಳಗೊಂಡಂತೆ ಸಾರ್ವಜನಿಕ ವಲಯವು ಭಾರತದ ಸನ್ನಿವೇಶದಲ್ಲಿ ಪ್ರಮುಖ ಸಾಮಾಜಿಕ ಪಾತ್ರವನ್ನು ನಿಭಾಯಿಸುತ್ತಿದೆ.

ಆದರೆ ಸಾರ್ವಜನಿಕ ವಲಯ ಒಂದೇ ತೆರನಾಗಿಲ್ಲ ಮಾತ್ರವಲ್ಲದೆ ಅನೇಕ ಸಮಸ್ಯೆಗಳಿಂದ ಕೂಡಿದೆ. ಉದ್ದಿಮೆ ಮತ್ತು ಕಾರ್ಮಿಕರನ್ನು ರಕ್ಷಿಸಲು ಅನೇಕ ರೋಗಗ್ರಸ್ತ ಖಾಸಗಿ ಉದ್ದಿಮೆಗಳನ್ನು ಪ್ರಭುತ್ವ ವಶಪಡಿಸಿಕೊಂಡ ಪರಿಣಾಮ ಅನೇಕ ಸಾರ್ವಜನಿಕ ವಲಯಗಳು ಸೃಷ್ಟಿಯಾದವು ಎಂಬುದನ್ನು ಮನಗಾಣಬೇಕು.

ಈ ನಿಟ್ಟಿನಲ್ಲಿ ಸಾರ್ವಜನಿಕ ವಲಯವನ್ನು ವಿವಿಧ ಗುಂಪುಗಳಾಗಿ ನೋಡಬೇಕು. 1. ಲಾಭದಾಯಕ ಬೃಹತ್ ಉದ್ದಿಮೆ- ನವರತ್ನಗಳು 2. ಮಧ್ಯಮ ಗಾತ್ರದ ಲಾಭದಾಯಕ ಉದ್ದಿಮೆಗಳು ಮತ್ತು 3. ಸುಧಾರಿಸಲಾಗದ ಅಥವಾ ತೀವ್ರತರನಾದ ನಷ್ಟ ಅನುಭವಿಸುತ್ತಿರುವ ಉದ್ದಿಮೆಗಳು ಮುಂತಾದುದಾಗಿ ನೋಡಬೇಕು.

ಮೊದಲ ಎರಡು ಗುಂಪುಗಳಂತೂ ಸಾರ್ವಜನಿಕ ವಲಯದಲ್ಲಿರಬೇಕು. ಅವುಗಳ ಖಾಸಗೀಕರಣವನ್ನು ರಾಜಿರಹಿತವಾಗಿ ಪ್ರತಿರೋಧಿಸಬೇಕು. ಸಾರ್ವಜನಿಕ ಸೇವೆಗಳಂತು- ಸಾರ್ವಜನಿಕ ವಲಯದಲ್ಲಿರಬೇಕು, ಆಧುನೀಕರಣ, ಪ್ರಜಾ ಪ್ರಭುತ್ವೀಕರಣ, ಆಡಳಿತಶಾಹಿ ನಿಯಂತ್ರಣದಿಂದ ಮುಕ್ತಿ, ಭ್ರಷ್ಟಾಚಾರದಿಂದ ಮುಕ್ತಿಗೊಳಿಸಿ, ಉತ್ತರದಾಯಿತ್ವಕ್ಕೆ ಒಳಪಡಿಸಬೇಕು. ಆರ್ಥಿಕತೆಯಲ್ಲಿ ಉತ್ತಮ ಹಂತ ತಲುಪಲು, ಆಡಳಿತದಲ್ಲಿ ಕಾರ್ಮಿಕರ ಭಾಗವಹಿಸುವಿಕೆ ಮೂಲಕ ಉತ್ತಮಪಡಿಸಬೇಕು. ಮೂರನೇ ಗುಂಪಿಗೆ ಸಂಬಂಧಿಸಿದಂತೆ ಪುನರುಜ್ಜೀವಗೊಳಿಸಲು ಆದ್ಯತೆ, ಯಾವುದೇ ತೀರ್ಮಾನಕ್ಕೂ ಮುನ್ನ ಕಾರ್ಮಿಕರು- ಆಡಳಿತ ಮತ್ತು ಸರ್ಕಾರದ ನಡುವಿನ ತ್ರಿಪಕ್ಷೀಯ ಮಾತುಕತೆ ಕಡ್ಡಾಯವಿರಬೇಕು. ರಾಜ್ಯ ಸರ್ಕಾರ ನಡೆಸುವ ರಾಜ್ಯ ಸಾರ್ವಜನಿಕ ವಲಯಕ್ಕೂ ಇದು ಕಡ್ಡಾಯ.

**ಸಿಪಿಐ(ಎಂ) ನೇತೃತ್ವದ ರಾಜ್ಯ ಸರ್ಕಾರಗಳು :**

ಉತ್ತಮ ಬದುಕಿಗಾಗಿನ ಮತ್ತು ಸಾಮಾಜಿಕ ಬದಲಾವಣೆಗಾಗಿನ ಭಾರತ ಜನತೆಯ ಹೋರಾಟದ ಪ್ರತೀಕವಾಗಿ ಸಿಪಿಐ(ಎಂ) ನೇತೃತ್ವದ ರಾಜ್ಯ ಸರ್ಕಾರಗಳಿವೆ. ಪಶ್ಚಿಮ ಬಂಗಾಳ, ತ್ರಿಪುರಾದಲ್ಲಿನ ಸರ್ಕಾರಗಳನ್ನು, ಕೇರಳದಲ್ಲಿ ಮುಂಚೂಣಿ ಪರಿಸ್ಥಿತಿಯನ್ನು ರಕ್ಷಿಸುವುದು ಪ್ರತಿಯೊಬ್ಬ ಕಮ್ಯೂನಿಸ್ಟ್ ಹಾಗೂ ಸಾಮ್ರಾಜ್ಯಶಾಹಿ ಜಾಗತೀಕರಣದ ವಿರೋಧಿಯ ಪ್ರಥಮ ಕರ್ತವ್ಯ.

ಆದಾಗ್ಯೂ ಭಾರತದ ಸಂವಿಧಾನದಡಿ ಪ್ರಮುಖ ಆರ್ಥಿಕ - ಕೈಗಾರಿಕಾ ನೀತಿಗಳನ್ನು ರೂಪಿಸಿ-ಜಾರಿಗೊಳಿಸುವ ಕೆಲಸವನ್ನು ಕೇಂದ್ರ ಸರ್ಕಾರವೇ ಮಾಡುತ್ತದೆ ಎಂಬುದನ್ನು ಗಮನದಲ್ಲಿರಿಸಬೇಕು. ರಾಜ್ಯ ಸರ್ಕಾರಗಳಿಗೆ ಪರ್ಯಾಯ ನೀತಿಗಳನ್ನು ಜಾರಿಗೊಳಿಸುವ ಸ್ವಾಯತ್ತತೆ ಇಲ್ಲ. ಇಂತಹ ಸನ್ನಿವೇಶದಲ್ಲಿ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಪ್ರತಿರೋಧಿಸುತ್ತಾ - ಸಾಮ್ರಾಜ್ಯಶಾಹಿ ಪುಸಲಾಯಿಸುವಿಕೆಗೆ ಬಲಿಯಾಗದೆ ಜನತೆಯ ಹಿತಾಸಕ್ತಿಗಳನ್ನು ರಕ್ಷಿಸಬೇಕೆಂದು ಜನತೆ ಬಯಸುತ್ತಾರೆ.

ಈ ಹಿನ್ನಲೆಯಲ್ಲಿ ಈ ಸರ್ಕಾರಗಳು ಅಭಿವೃದ್ಧಿ ಯೋಜನೆಗಳಿಗೆ ನೆರವು ಪಡೆಯಬಹುದು, ಆದರೆ ಅಂತಹ ನೆರವು ಯಾವುದೇ ಶರತ್ತುಗಳನ್ನೊಳಗೊಳ್ಳಬಾರದು. ಸಂರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮದಂತಹ ನೀತಿ ಬದಲಾವಣೆಗಳಿಗೆ ಒತ್ತಾಯಿಸಬಾರದು. ಆರ್ಥಿಕ ತೀರ್ಮಾನಗಳನ್ನು ಮಾಡುವ ರಾಜ್ಯ ಸರ್ಕಾರಗಳ ಸ್ವಾಯತ್ತತೆಗೆ ಚ್ಯುತಿ ತರದಂತಹ, ಜನತೆಗೆ ಪರಿಹಾರ ನೀಡುವ ಹಾಗೂ ಆರ್ಥಿಕ ಉತ್ತಮಗೊಳ್ಳುವಿಕೆಗೆ ಕಾರಣವಾಗುವಂತಿರಬೇಕು.

**ಪ್ರಭುತ್ವದ ಹಿಂದೆ ಸರಿಯುವಿಕೆ- ಜನಪ್ರಿಯ ಮಧ್ಯಪ್ರವೇಶದ ವ್ಯಾಪ್ತಿ :**

ಲಾಭಕ್ಕಾಗಿ ಎಲ್ಲಾ ವಲಯಗಳನ್ನು ಖಾಸಗೀಕರಿಸುವ, ಪ್ರಭುತ್ವವು ತನ್ನ ಸಾಮಾಜಿಕ ಹೊಣೆಗಾರಿಕೆಯಿಂದ ಹಿಂದೆ ಸರಿಯುವ ಕೆಲಸವು ಜಾಗತೀಕರಣ ಯುಗದಲ್ಲಿ ತೀವ್ರವಾಗಿ ನಡೆದಿದೆ. ಇವುಗಳಲ್ಲಿ ಪ್ರಮುಖವಾದವು ಶಿಕ್ಷಣ ಮತ್ತು ಸಾರ್ವಜನಿಕ ಆರೋಗ್ಯದ ವಲಯಗಳು. ಅಂತಹ ಖಾಸಗೀಕರಣ- ವಾಣಿಜ್ಯೀಕರಣವನ್ನು ವಿರೋಧಿಸುವಾಗಲೇ ಅದಕ್ಕಾಗಿ ಜನತೆಯನ್ನು ಅಣಿನೆರೆಸುವಾಗಲೆ, ಜನತೆಯ ಹಿತಾಸಕ್ತಿಗಳನ್ನು ರಕ್ಷಿಸಲು ಅವುಗಳ ಮೇಲೆ ನಿಯಂತ್ರಣ ಸಾಧಿಸಲು ಸಹಾ ಜೊತೆ-ಜೊತೆಯಲ್ಲಿಯೇ ಕೆಲಸ ಮಾಡಬೇಕು. ಅಂತಹ ಮಧ್ಯಪ್ರವೇಶವು ಸಹಾ ಖಾಸಗೀಕರಣದ ವಿರುದ್ಧ ಜನತೆಯನ್ನು ಅಣಿನೆರೆಸಲಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಉಚಿತ ಸೇವೆಯ ಕೋಟಾಗೆ ಒತ್ತಾಯಿಸಬೇಕು.

ಇಂತಹ ಒಂದು ಮಧ್ಯಪ್ರವೇಶದ ಅವಕಾಶ ಸಾಕ್ಷರತೆ ರಂಗದಲ್ಲಿ ಲಭ್ಯವಾಯಿತು. ಅಂತಹ ನಮ್ಮ ಮಧ್ಯಪ್ರವೇಶವು ಜನವಿಜ್ಞಾನ ಚಳುವಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಿತು. ಜನವಿಜ್ಞಾನ ಚಳುವಳಿ ಕುರಿತ 1995 ರ ಕೇಂದ್ರಸಮಿತಿ ದಸ್ತಾವೇಜು ಸರಿಯಾಗಿ ಗುರುತಿಸಿದೆ. ಅಂತಹ ಹೊಸ ಸಂಘಟನೆಗಳನ್ನು ರಚಿಸುವಾಗ, ಅದಕ್ಕೆ ಹಣಕಾಸು ನೆರವು ಪಡೆಯುವಾಗ ಪಕ್ಷದ ಸಂಬಂಧಿತ ಸಮಿತಿಗಳ ಅನುಮತಿ ಅಗತ್ಯ, ವಿದೇಶಿ ಧನ ಸಹಾಯವನ್ನು ಅವು ಪಡೆಯಬಾರದು. ಹೊಸ ವಿಚಾರದ ಯಾವುದೇ ಸಾಹಿತ್ಯ ಹೊರತರುವಾಗ, ಪಕ್ಷದ ನಿಲುವುಗಳಿಗೆ ವ್ಯತಿರಿಕ್ತವಾದ ವಿಚಾರ ಪ್ರಕಟಿಸುವಾಗ ಸಂಬಂಧಿತ ಕೇಂದ್ರ-ರಾಜ್ಯ ಫ್ರಾಕ್ಷನ್‌ಗಳ ಅನುಮತಿ ಅಗತ್ಯ.

**ಸ್ವಯಂಸೇವಾ ಸಂಸ್ಥೆಗಳು : ಎನ್.ಜಿ.ಓ**

ಸ್ವಯಂಸೇವಾ ಸಂಸ್ಥೆಗಳು ಜಾಗತೀಕರಣಕ್ಕೆ ಪರ್ಯಾಯ ಎಂದರೆ 'ಜನತೆಯ ಹಿಡಿತ' ಎಂಬ ವಾದ ಹರಿಬಿಡುತ್ತಿವೆ. ಅದು ಬಂಡವಾಳಶಾಹಿಯು ಅಲ್ಲ ಅಥವಾ ಸಮಾಜವಾದಿ ನಿಯಂತ್ರಣವು ಅಲ್ಲ ಎಂಬುದನ್ನು ಅವು ಪ್ರತಿಪಾದಿಸುತ್ತಿವೆ. ಇದನ್ನು ಸೈದ್ಧಾಂತಿಕವಾಗಿ ನಾವು ಪ್ರತಿರೋಧಿಸಬೇಕು. ಸಮಾಜವಾದವೇ ಪರ್ಯಾಯ ಎಂಬುದನ್ನು ಪ್ರತಿಬಿಂಬಿಸಬೇಕು. ಡಬ್ಲ್ಯುಎಸ್‌ಎಫ್‌ನಲ್ಲಿ ಭಾಗವಹಿಸುವಾಗ ಈ ಧೋರಣೆಯೊಂದಿಗೆ ಕಾರ್ಯನಿರ್ವಹಿಸಬೇಕು.

ವಿದೇಶಿ ಹಣ ಪಡೆಯುವ ಎನ್‌ಜಿಓಗಳ ಜೊತೆ ನಾವು ಭಾಗಿಯಾಗಬಾರದು. ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಜನತೆಯ ನೈಜ ಸಮಸ್ಯೆ ಎತ್ತಿ ಕಾರ್ಯವಹಿಸುವವರ ಜೊತೆ ಪಕ್ಷದ ವಿಮರ್ಶೆ ಆಧಾರದಲ್ಲಿ ಸಹಕರಿಸಬಹುದು. ಮೇಲಿನ ಸಮಿತಿಯ ಒಪ್ಪಿಗೆ ಮೇರೆಗೆ ಸಂಬಂಧಿತ ಪಕ್ಷದ ಸಮಿತಿಯ ತೀರ್ಮಾನದ ಮೇಲೆ ಮಾತ್ರ ಎನ್‌ಜಿಓಗಳಲ್ಲಿ ಪಕ್ಷದ ಕೇಡರ್‌ಗಳು ಕೆಲಸ ಮಾಡಬೇಕು. ಯಾವುದೇ ಎನ್‌ಜಿಓಗಳ ಜೊತೆ ಕೆಲಸ ಮಾಡಿದಲ್ಲಿ ಲೆಕ್ಕಪತ್ರ-ನಿಧಿ ಕುರಿತು ಸಂಬಂಧಿತ ಪಕ್ಷದ ಸಮಿತಿ ಪರಿಶೀಲಿಸಬೇಕು.


ಪಕ್ಷದ ಅನುಮತಿಯೊಂದಿಗೆ ಆರಂಭಿಸಿದ ಎನ್‌ಜಿಓ/ ಸಂಘಟನೆ ವಿದೇಶಿ ನಿಧಿ ಪಡೆಯಬಾರದು. ಯಾವುದೇ ರಿಯಾಯಿತಿಗೆ ರಾಜ್ಯಸಮಿತಿ ಅನುಮತಿ ಪಡೆಯಬೇಕು, ಪಿ.ಬಿ. ಒಪ್ಪಿಗೆ ಪಡೆಯಬೇಕು. ಸರ್ಕಾರದ ನಿಧಿ ಪಡೆಯುವಾಗಲೂ ಸಂಬಂಧಿತ ಪಕ್ಷದ ಸಮಿತಿಯ ಅನುಮತಿ ಪಡೆಯಬೇಕು. ಬಲಹೀನ ರಾಜ್ಯಗಳಲ್ಲಿ ರಾಜ್ಯ ಸಮಿತಿ ಒಪ್ಪಿಗೆ ಪಡೆಯಬೇಕು.

**ಸ್ವಸಹಾಯ ಗುಂಪುಗಳು :** ಸ್ವಸಹಾಯ ಗುಂಪುಗಳ ಬೆಳವಣಿಗೆಯನ್ನು ನಿರ್ಲಕ್ಷಿಸಲಾಗದು. ಇವು ವಿಶ್ವಬ್ಯಾಂಕ್‌ನ ಅಭಿವೃದ್ಧಿ ಮಾದರಿಯನ್ನು ಪ್ರೋತ್ಸಾಹಿಸುವುದಿಲ್ಲವೆ ಎಂಬ ಪ್ರಶ್ನೆಗಳು ಇವೆ. ಇವುಗಳನ್ನು ಅವುಗಳ ಉತ್ತಮ ಕೊಡುಗೆಗಳಿಗಾಗಿ ಬಳಸುವಾಗಲೇ ಖಾಸಗೀಕರಣಕ್ಕೆ ಅವುಗಳನ್ನು ಬಳಸುವುದರ ಮತ್ತು ಬಹುರಾಷ್ಟ್ರೀಯ ಕಂಪನಿಗಳ ವಸ್ತುಗಳ ಮಾರಾಟಕ್ಕೆ ಬಳಸುವುದರ ಬಗ್ಗೆ ಎಚ್ಚರ ವಹಿಸಬೇಕು. ಗ್ರಾಮೀಣ ಸಾಲಕ್ಕೆ ಪರ್ಯಾಯವಾಗಿ ಅವುಗಳನ್ನು ಬಳಸುವ ಸರ್ಕಾರ ಹಾಗೂ ವಿಶ್ವಬ್ಯಾಂಕ್ ಯೋಜನೆಯ ಪರಿಕಲ್ಪನೆ ಯನ್ನು ವಿರೋಧಿಸಬೇಕು. ಚಳುವಳಿ ಬಲ ಪಡಿಸಲು ನಮ್ಮ ಸಾಮೂಹಿಕ ಸಂಘಟನೆಗಳು ಅವುಗಳನ್ನು ಬಳಸಿರುವ ಉದಾಹರಣೆ ಗಮನಾರ್ಹ.

'ಕೆಲವು ಧೋರಣೆಯ ಕುರಿತು' ರಾಜಕೀಯ-ಸಂಘಟನಾ ವರದಿಯ ಈ ಭಾಗ ಕುರಿತು ಗಂಭೀರ ಚರ್ಚೆಯು ಮಹಾಧಿವೇಶನದಲ್ಲಿ ನಡೆದಿದೆ. ಅನೇಕ ತಿದ್ದುಪಡಿಗಳನ್ನು ಸಹಾ ಸಂಗಾತಿಗಳು ಸೂಚಿಸಿದ್ದಾರೆ. ಅವುಗಳ ಆಧಾರದಲ್ಲಿ ಕೇಂದ್ರ ಸಮಿತಿಯು ಅಂತಿಮಗೊಳಿಸಲಿದೆ.

# ವಿಯೆಟ್ನಾಂ ವಿಮೋಚನೆಯ 30ನೇ ವಾರ್ಷಿಕೋತ್ಸವ

**ಈ ವರ್ಷ ವಿಯೇಟ್ನಾಂ ವಿಮೋಚನೆಯ 30ನೇ ವಾರ್ಷಿಕೋತ್ಸವ. 60-70 ರದಶಕಗಳಲ್ಲಿ ಪ್ರಸಿದ್ಧ ಘೋಷಣೆ 'ಹಮಾರಾ ನಾಮ್, ತುಮಾರಾ ನಾಮ್ ವಿಯೆಟ್ನಾಂ, ವಿಯೆಟ್ನಾಂ' ಯೊಂದಿಗೆ ಸಾಮ್ರಾಜ್ಯಶಾಹಿ-ವಿರೋಧಿ ಚಳುವಳಿಗೆ ಸ್ಫೂರ್ತಿ ನೀಡಿದ್ದ ವಿಯೆಟ್ನಾಂ ನ ವಿಮೋಚನಾ ಹೋರಾಟದ ವಿಜಯವಾಗಿ 30 ವರ್ಷಗಳು ಕಳೆದಿವೆ. ಆ ವರ್ಷ (1975ರಲ್ಲಿ) ವಿಯೆಟ್ನಾಂ ಮಾತ್ರವಲ್ಲ ಕೆಂಬೋಡಿಯಾ, ಲಾವೋಸ್‌ನ ವಿಮೋಚನಾ ಹೋರಾಟಗಳು ವಿಜಯಕಂಡು ಇಂಡೋ-ಚೀನಾ ಪ್ರದೇಶ ಹೆಚ್ಚು ಕಡಿಮೆ ಅಮೆರಿಕನ್ ಸಾಮ್ರಾಜ್ಯಶಾಹಿಯ ಕಪಿಮುಷ್ಠಿಯಿಂದ ವಿಮೋಚನೆಗೊಂಡಿತ್ತು. ಇಂಡೋ-ಚೀನಾದ ವಿಮೋಚನೆಯ 30ನೇ ವಾರ್ಷಿಕೋತ್ಸವವನ್ನು ಜಗತ್ತಿನಾದ್ಯಂತ 'ಶಾಂತಿ ಮತ್ತು ಐಕ್ಯತೆ'ಯ ಘೋಷಣೆಗಳೊಂದಿಗೆ ಆಚರಿಸಲಾಗುತ್ತಿದೆ. ವಿಮೋಚನಾ ಹೋರಾಟದ ನವಿರೇಳಿಸುವ ಕಥೆ ನೆನಪಿಸುತ್ತಾರೆ ಅನಿಲ್ ಬಿಸ್ವಾಸ್**



ವಿಮೋಚನಾ ಹೋರಾಟದ ಮಹಾನ್ ಯೋಧರು

## 'ಹಮಾರಾ ನಾಮ್ ತುಮಾರಾ ನಾಮ್... ವಿಯೇಟ್ನಾಮ್, ವಿಯೆಟ್ನಾಮ್'

ಈ ವರ್ಷ ಏಪ್ರಿಲ್ 19 ರಿಂದ ಮೇ 3 ರವರೆಗಿನ ಎರಡು ವಾರಗಳಲ್ಲಿ ವಿಯೆಟ್ನಾಂ ಜನತೆ ವಿಮೋಚನೆಯ ಉತ್ಸವ ಆಚರಿಸುತ್ತಿದೆ. ಮುಖ್ಯ ಕಾರ್ಯಕ್ರಮ ರಾಜಧಾನಿ ಹೋ-ಚಿಮಿನ್ ನಗರದಲ್ಲಿ ನಡೆಯಲಿದೆ. (1917) ನವೆಂಬರ್ 7 ರಿಂದ 17 ರವರೆಗೆ 'ಜಗತ್ತನ್ನು ಅಲುಗಾಡಿಸಿದ ಹತ್ತು ದಿನಗಳು' (ರಶ್ಯನ್ ಕ್ರಾಂತಿ) ಎಂದು ಪ್ರಸಿದ್ಧವಾದಂತೆ, 29 ಏಪ್ರಿಲ್‌ನಿಂದ ಮೇ 3, 1975 ವರೆಗಿನ 5 ದಿನಗಳು ಸ್ವಾತಂತ್ರ್ಯ ಪ್ರಿಯ ಮತ್ತು ಶಾಂತಿಪ್ರಿಯ ಜನತೆಯ ವಿಜಯ ಯಾತ್ರೆಯ ದಿನಗಳು ಎಂದು ಚರಿತ್ರೆಯಲ್ಲಿ ದಾಖಲಾಗಿವೆ.

1975 ರ ಏಪ್ರಿಲ್ 29 ರಂದು ಸ್ಯಾಗನ್ (ಹೊ-ಚಿ-ಮಿನ್ ನಗರದ ಆಗಿನ ಹೆಸರು) ವಿಮೋಚನಾ ಹೋರಾಟಗಾರರು ಸುತ್ತುವರೆದಿದ್ದರು. ಏಪ್ರಿಲ್ 30 ರಂದು ಅಮೆರಿಕನ್ ಆಕ್ರಮಣಕಾರರಿಂದ ವಿಯೆಟ್ನಾಂನ್ನು ವಿಮೋಚನೆ ಮಾಡಲಾಯಿತು. ಏಕೀಕೃತ ವಿಯೇಟ್ನಾಂನ ಹೊ-ಚಿ-ಮಿನ್‌ರ ಕನಸು ನನಸಾಯಿತು. ಮೇ 1 ರಂದು ಖೇಮರ್ ರೋಜ್ ಹೋರಾಟಗಾರರು ಕೆಂಬೋಡಿಯಾದ ರಾಜಧಾನಿ ನಾಂಪೆಸ್‌ನ್ನು ವಿಮೋಚನೆಗೊಳಿಸಿದರು. ಪಾಥೆಟ್ ಲಾವೊ ಹೋರಾಟಗಾರರು ಲಾವೋಸ್ ರಾಜಧಾನಿ ವಿಯೆಂಟೀನ್‌ನ್ನು ಬಿಡುಗಡೆ ಮಾಡಿದರು. ಈ ವಿಜಯಗಳೊಂದಿಗೆ ಇಂಡೋ-ಚೀನಾ ಪರ್ಯಾಯ ದ್ವೀಪ ಅಮೆರಿಕನ್ ಸಾಮ್ರಾಜ್ಯಶಾಹಿ ಕಪಿಮುಷ್ಠಿಯಿಂದ ಬಿಡುಗಡೆ ಹೊಂದಿದಂತಾಗಿತ್ತು.

ಈ ವಿಮೋಚನಾ ಹೋರಾಟಗಳ ವಿಜಯಗಳು ಶಾಂತಿ ಮತ್ತು ಸೌಹಾರ್ದತೆಯ ಹೊಸ ಯುಗವನ್ನೇ ಆರಂಭಿಸಿತ್ತು. ವಿಯೆಟ್ನಾಂ, ಕೆಂಬೋಡಿಯಾ ಮತ್ತು ಲಾವೋಸ್ ಜನತೆಯ ಚಾರಿತ್ರಿಕ ವಿಜಯದ 30ನೇ ವಾರ್ಷಿಕೋತ್ಸವದ ಆರಂಭ ಮತ್ತು ತ್ಯಾಗ ಬಲಿದಾನವನ್ನು, ಪ್ರಧಾನ ಘೋಷಣೆ 'ಶಾಂತಿ ಮತ್ತು ಐಕ್ಯತೆ' ಪ್ರತಿಬಿಂಬಿಸಿದೆ. ಈ ಮಹಾನ್ ಹೋರಾಟ ಎಂದೆಂದಿಗೂ ಸ್ಮರಣೀಯ.

30ನೇ ವಾರ್ಷಿಕೋತ್ಸವದ ಹೊತ್ತಿಗೆ ಜಾಗತಿಕ ಸನ್ನಿವೇಶ ಗುಣಾತ್ಮಕ ಬದಲಾವಣೆಗಳನ್ನು ಕಂಡಿದೆ. ಐಕ್ಯತೆ ಮತ್ತು ತಿಳುವಳಿಕೆಗೆ ವಿಶ್ವ-ವ್ಯಾಪಕ ಪ್ರಯತ್ನ ನಡೆದಿದೆ. ಆದರೆ ಇನ್ನೂ ಅಮೆರಿಕನ್ ಸಾಮ್ರಾಜ್ಯಶಾಹಿ ಶಕ್ತಿಗಳ ಕಣ್ಣೋಟ ಏನೇನೂ ಬದಲಾಗಿಲ್ಲ. ಈ ಶಕ್ತಿಗಳು 30 ವರ್ಷಗಳ ಹಿಂದೆ ಮೂವತ್ತು ಲಕ್ಷ ವಿಯೆಟ್ನಾಂ ಜನತೆಯ (ಹೆಂಗಸರು, ಮಕ್ಕಳು ಸೇರಿದಂತೆ) ಸಾವಿಗೆ ಕಾರಣವಾಗಿತ್ತು. ತನ್ನದೇ 58 ಸಾವಿರ ಸೈನಿಕರನ್ನು ಬಲಿತೆಗೆದು ಕೊಂಡಿತ್ತು ಎಂದು ಮರೆಯಬಾರದು. ಇಂದಿಗೂ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಅದೇ ನರಮೇಧವನ್ನು ಇರಾಕ್ ಮತ್ತು ಪ್ಯಾಲೆಸ್ಟೀನ್‌ಗಳಲ್ಲಿ ಮುಂದುವರೆಸಿದ್ದಾರೆ.

ಸ್ಯಾಗಾನ್‌ನ ವಿಮೋಚನೆಯ ಹಿಂದಿನ 10 ದಿನಗಳ ಬಗ್ಗೆ ಅಮೆರಿಕನ್ ಪತ್ರಕರ್ತ ಜಾನ್ ಪಿಲ್ಲರ್ ಬರೆದಿದ್ದಾನೆ. ಏಪ್ರಿಲ್ ವಿಯೆಟ್ನಾಂ ವರ್ಷದಲ್ಲಿ ಮೊದಲ ತಿಂಗಳು. ಏಪ್ರಿಲ್ 20 ರಂದೇ ವಿಯೆಟ್ನಾಂ ಜನತಾ ವಿಮೋಚನಾ ಸೈನ್ಯ, ಸ್ಯಾಗಾನ್ ಮೂರು ದಿಕ್ಕಿನಿಂದಲೂ ಸುತ್ತುವರೆದಿತ್ತು.


ವಿಮೋಚನಾ ಸಮರದ ನಾಯಕ ಹೊಚಿ ಮಿನ್

ಅಮೆರಿಕನ್ ರಾಯಭಾರಿ ಗ್ರಹಾಂ ಮಾರ್ಟಿನ್ ಸ್ಯಾಗಾನ್‌ನಿಂದ ಕತ್ತಲಲ್ಲಿ ಓಡಿಹೋಗುವುದಿಲ್ಲ ಎಂದು ಸಾರ್ವಜನಿಕವಾಗಿ ಘೋಷಿಸಿದ್ದ. ಸ್ಯಾಗಾನ್ ಟಿ.ವಿ.ಸ್ಟೇಷನ್‌ನಲ್ಲಿ ಭಾಷಣ ಮಾಡುತ್ತಾ, ಇಲ್ಲಿಂದ ಓಡಿ ಹೋಗಲು ಯಾವುದೇ ಪ್ಯಾಕಿಂಗ್ ತಯಾರಿ ಮಾಡಿಲ್ಲ ಎಂದು ಯಾರು ಬೇಕಾದರೂ ನೋಡಬಹುದು' ಎಂದು ಘೋಷಿಸಿದ್ದನಂತೆ! ಸ್ಯಾಗಾನ್‌ನಲ್ಲಿ ತಾನು ಏಶ್ಯಾದಲ್ಲಿ ಅಮೆರಿಕನ್ ಹಿತಾಸಕ್ತಿ ಕಾಪಾಡಲು ಇರುವವನು. ವಿಯೆಟ್ನಾಮಿನಲ್ಲಿ ತನ್ನ ಮಗನನ್ನು ಕಳೆದು ಕೊಂಡಿದ್ದೇನೆ ಎಂದೂ ಹೇಳಿದ. ತನಗೆ ನ್ಯೂಮೇನಿಯಾ ಬಂದು ಮಾತಾಡಲು ಸಾಧ್ಯವಾಗ ದಿದ್ದರೂ, ಇನ್ನೂ ಹೆಚ್ಚಿನ ಬಿ52 ಬಾಂಬುಗಳನ್ನು ಕಳಿಸುವಂತೆ ಅಮೆರಿಕನ್ ಸರ್ಕಾರದ ಜತೆ ಮಾತನಾಡಿದ್ದೇನೆ ಎಂದ. ಸ್ಯಾಗಾನ್ ನಲ್ಲಿ ಅಳಿದುಳಿದ ಅಮೆರಿಕನ್ ಕೈಗೊಂಬೆ 'ದೇಶಪ್ರೇಮಿ'ಗಳು ಘನತೆ-ಗೌರವದಿಂದ ಬದುಕಬಹುದು ಎಂದು ಆಶ್ವಾಸನೆ ಕೊಟ್ಟ.

ಮಾರ್ಟಿನ್ ಮಾತನಾಡುತ್ತಿರುವಂತೆ ದಕ್ಷಿಣ ವಿಯೆಟ್ನಾಂನ 'ಅಮೆರಿಕನ್ ಕೈಗೊಂಬೆ' ಅಧ್ಯಕ್ಷ ಥೀಯು ಫ್ರೆಂಚರು ನೂರು ವರ್ಷಗಳ ಹಿಂದೆ 'ರಾಯಭಾರ ಕಛೇರಿ ಪಕ್ಕ' ದ ಅಡಿಯ ಗುಪ್ತ ಬಂಕರ್‌ನಲ್ಲಿ ಅಡಗಿ ಕುಳಿತಿರಲು ತಯಾರಿ ನಡೆಸಿದ್ದ. ಮಾರ್ಟಿನ್‌ನ ಭಾಷಣದ ಎರಡೇ ದಿನಗಳಲ್ಲಿ, ಸ್ಯಾಗಾನ್ ಪ್ರತಿಯೊಂದು ಮನೆಯ ಮೇಲೆ ಕೆಂಪು ಬಾವುಟ ಹಾರುತ್ತಿತ್ತು. ಪ್ರತಿಯೊಂದು ಮನೆ ಎದುರು ಕೆಂಪು ಸೈನಿಕರು ಕಾವಲು ನಿಂತಿದ್ದರು.

ಅಮೆರಿಕನ್ ರಾಯಭಾರ ಕಚೇರಿಯನ್ನು ವಿಯೇಟ್ನಾಂ ವಿಮೋಚನಾ ಸೈನ್ಯದ ರಾಕೆಟ್ ದಾಳಿ ನಿರ್ನಾಮ ಮಾಡಿತ್ತು. ಮಾರ್ಟಿನ್ ಕೇಳಿದ್ದ ಬಿ-52 ಬಾಂಬರುಗಳು ಮೆಕಾಂಗ್ ಡೆಲ್ಟಾ ದಾಟಿ ವಿಯೆಟ್ನಾಂ ಪ್ರವೇಶಿಸುವ ಮೊದಲನೇ ಜನತಾ ವಿಮೋಚನಾ ಸೈನ್ಯದ ದಾಳಿಗೆ ಬಲಿಯಾಗಿತ್ತು. ಒಂದೇ ಹೆಲಿಕಾಪ್ಟರ್ ಕೈಗೊಂಬೆ 'ಅಧ್ಯಕ್ಷ' ಥೀಯು ಮತ್ತು ಮಾರ್ಟಿನ್ (ಅಮೆರಿಕನ್ ರಾಯಭಾರಿ) ಓಡಿಹೋಗಲು ಸಾಧ್ಯವಾಯಿತು. ಹಲವಾರು 'ವೀರ' ಅಮೆರಿಕನ್ ಸೈನಿಕರೊಂದಿಗೆ ಕಿಕ್ಕಿರಿದಿದ್ದ ಹೆಲಿಕಾಪ್ಟರ್‌ನಲ್ಲಿ ಥಿಯು ಮತ್ತು ಮಾರ್ಟಿನ್ ಓಡಿಹೋದರು.

ವಿಯೆಟ್ನಾಂ ವರ್ಕರ್ಸ್ ಪಾರ್ಟಿ (ಆ ಮೇಲೆ ವಿಯೇಟ್ನಾಂ ಕಮ್ಯುನಿಸ್ಟ್ ಪಾರ್ಟಿ)ಯ ಪೊಲಿಟ್‌ಬ್ಯೂರೋ ಸದಸ್ಯ ಲೆ ಡೊಕ್ ತೊ ಸೈಕಲ್‌ನಲ್ಲಿ ನಗರ ಪ್ರವೇಶಿಸಿ ಒಂದು (ನಾಪಾಮ್ ಬಾಂಬ್‌ಗಳಿಂದ ನಿರ್ನಾಮವಾಗಿದೆ)ಮನೆಯ ಮೇಲೆ ನಿಂತು ವಿಯೆಟ್ನಾಂ ಹೋರಾಟದ ವಿಜಯ ಗೀತೆ ಹಾಡಿದ್ದರು. ವಿಜಯ ಘೋಷಣೆ ಮಾಡಿದ್ದರು.

ಅಮೆರಿಕನ್ ಇತಿಹಾಸಕಾರರು, ವಿಯೆಟ್ನಾಮ್‌ನಲ್ಲಿ ಅಮೆರಿಕನ್ ಸೈನ್ಯದ ಪರಾಭವದ ಬಗ್ಗೆ ಕಾರಣಗಳನ್ನು ವಿಶ್ಲೇಷಿಸಿದ್ದಾರೆ. ಅಮೆರಿಕದ ಜನತೆ ವಿಯೇಟ್ನಾಂ ಯುದ್ಧ ದ್ವೇಷಿಸಲು ಆರಂಭಿಸಿ ತಮ್ಮನ್ನು ತಾವೇ ದ್ವೇಷಿಸಲಾರಂಭಿಸಿದರು - ಅಂತಾರೆ ಡಾ. ಕೀಪ್ ಟೈಲರ್. ವಿಯೇಟ್ನಾಂ ಯುದ್ಧದ ಅವಧಿಯಿಂದಲೇ ಅಮೆರಿಕಾದಲ್ಲಿ ಯುದ್ಧ-ವಿರೋಧಿ ಚಳುವಳಿ ರೂಪುಗೊಂಡು ಶಾಶ್ವತ ರೂಪ ತಳೆದಿದೆ. ಕೆನಡಿ, ಜಾನ್ಸನ್, ನಿಕ್ಸನ್ ಶತಪ್ರಯತ್ನ ಮಾಡಿದರೂ ವಿಯೆಟ್ನಾಂ ಯುದ್ಧ ಅಂತರ್ರಾಷ್ಟ್ರೀಯ ಕಾರಣಗಳಿಂದಾಗಿ, ಜನರನ್ನು ನಂಬಿಸಲು ಅವರಿಗೆ ಸಾಧ್ಯವಾಗಲಿಲ್ಲ.



1954 ರಿಂದ 1975 ಏಪ್ರಿಲ್ ವರೆಗೆ, ವಿಯೆಟ್ನಾಂ ಮೇಲೆ ಬಾಂಬ್‌ಗಳ ಸುರಿಮಳೆ ಮಾಡುತ್ತಿದ್ದಾಗ, ಬೇರೆ ದೇಶಗಳಂತೆ ಅಮೆರಿಕಾದಲ್ಲೂ ಶಾಂತಿಪ್ರಿಯ ಜನತೆ ಈ ಅನರ್ಥಕಾರಿ ಯುದ್ಧದ ವಿರುದ್ಧ ತೀವ್ರ ಪ್ರತಿಭಟನೆ ನಡೆಸಿದರು. ವಿಯೆಟ್ನಾಂ ಯುದ್ಧದ ಬಗ್ಗೆ ತೀವ್ರ ದ್ವೇಷವಿತ್ತು ಅಮೆರಿಕದ ನಾಗರಿಕರಲ್ಲಿ. ಅಮೆರಿಕದ ದಮನಕಾರಿ ತಂತ್ರ ಮತ್ತು ವ್ಯಾಪಕ ಯುದ್ಧ-ವಿರೋಧಿ ಚಳುವಳಿಗಾರರ ಮನೋಬಲ ಮತ್ತು ಸ್ಫೂರ್ತಿಯನ್ನು ಹೆಚ್ಚಿಸಿತು.

ಅಮೆರಿಕ ದಕ್ಷಿಣ ವಿಯೆಟ್ನಾಂನಲ್ಲಿ ನಗುಯೆನ್ ದಿನ್ ದಿವ್ ನಾಯಕತ್ವದ ಕೈಗೊಂಬೆ ಸರ್ಕಾರ

ಪುಟ 10 ನೋಡಿ


### ಅಮೆರಿಕನ್ ವಿಯೆಟ್ನಾಂ ಸೈನಿಕರ ಬಹಿರಂಗ ಪತ್ರ

ವಿಯೆಟ್ನಾಂ ವಿಮೋಚನೆಯ 30ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ವಿಯೆಟ್ನಾಂ ಯುದ್ಧದಲ್ಲಿ ಭಾಗವಹಿಸಿದ ಅಮೆರಿಕನ್ ಸೈನಿಕರು ವಿಯೆಟ್ನಾಂ ಜನತೆಗೆ ಬಹಿರಂಗ ಪತ್ರ ಬರೆದಿದ್ದಾರೆ. ವಿಯೆಟ್ನಾಂ ಜನತೆಗೆ ಶುಭಾಶಯ ಹೇಳುತ್ತಾ ಎರಡೂ ದೇಶಗಳ ಮುಂದಿನ ಪೀಳಿಗೆಗಳ ಶಾಂತಿ ಮತ್ತು ಸಮೃದ್ಧಿ ಕಾಣಲಿ ಎಂದು ಹಾರೈಸಿದ್ದಾರೆ.

"ಅಮೆರಿಕದ ಪ್ರಜೆಗಳಾದ ನಾವು - ನಮ್ಮಲ್ಲಿ ಹಲವರು ವಿಯೆಟ್ನಾಂನಲ್ಲಿ ಯುದ್ಧದಲ್ಲಿ ಭಾಗವಹಿಸಿದ ಮಾಜಿ ಯೋಧರು. ಯುದ್ಧ ಅಂತ್ಯವಾಗಿ 30ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ವಿಯೆಟ್ನಾಂ ಜನತೆಗೆ ಶುಭ ಸಂದೇಶ ಹೇಳಲಿಚ್ಛಿಸುತ್ತೇವೆ.

ವಿಯೆಟ್ನಾಂ ಯುದ್ಧದಲ್ಲಿ ಮಡಿದ 58 ಸಾವಿರಕ್ಕೂ ಹೆಚ್ಚು ಅಮೆರಿಕನ್ ಮಿಲಿಟರಿ ಸಿಬ್ಬಂದಿ, ಮೂವತ್ತು ಲಕ್ಷಕ್ಕೂ ಹೆಚ್ಚು ವಿಯೆಟ್ನಾಮಿ ಯೋಧರು ಮತ್ತು ನಾಗರಿಕರ ನೆನಪಿಗೆ ಶ್ರದ್ಧಾಂಜಲಿ ಅರ್ಪಿಸಬಯಸುತ್ತೇವೆ. ಈ ಯುದ್ಧದಲ್ಲಿ ತಮ್ಮ ನಿಕಟ ಸಂಬಂಧಿ - ಮಿತ್ರನ್ನು ಕಳೆದುಕೊಂಡ ಮತ್ತು ಬದುಕುಳಿದರೂ ತೀವ್ರವಾಗಿ ಅಂಗವಿಕಲರಾದವರಿಗೆ ನಮ್ಮ ಅನುಕಂಪ ಮತ್ತು ಎದೆಯಾಳದ ಕಂಬನಿ ಅರ್ಪಿಸುತ್ತೇವೆ.

ಯುದ್ಧದ ದುರಂತಮಯ ಭೂತಕಾಲವನ್ನು ಬದಲಾಯಿಸಲು ಆಗುವುದಿಲ್ಲ. ಆದರೆ ಜತೆ ಜತೆಯಾಗಿ ನಮ್ಮ ಮಕ್ಕಳ ಮತ್ತು ಮುಂದಿನ ಪೀಳಿಗೆಗಳ ಒಳಿತಿಗೆ ದುಡಿಯ ಬಯಸುತ್ತೇವೆ. ವಿಯೆಟ್ನಾಮಿ ಭಾಷೆಯಲ್ಲಿ ಒಂದು ಮಾತಿದೆ 'ಭೂತವನ್ನು ಮುಚ್ಚು, ಭವಿಷ್ಯವನ್ನು ತೆರೆ' ಈ ಮಾತಿನಲ್ಲಿ ಅಡಗಿರುವ ಕ್ಷಮಾಗುಣ, ಪ್ರಾಮಾಣಿಕತೆ ಮತ್ತು ದೊಡ್ಡ ಮನಸ್ಸಿಗೆ ನಾವು ವಿಯೆಟ್ನಾಮ್ ಜನತೆಗೆ ಋಣಿಯಾಗಿರುತ್ತೇವೆ."




# ಪಶ್ಚಿಮ ಬಂಗಾಳ : ಸಾಮಾನ್ಯ ಗ್ರಹಿಕೆ ಮತ್ತು ವಾಸ್ತವ

ಆರ್ಥಿಕ ಅಭಿವೃದ್ಧಿ ಅಳೆಯುವವರು ಆ ದೇಶದ ಔದ್ಯಮೀಕರಣ ಎಷ್ಟಾಗಿದೆ ಎಂಬುದರ ಮೇಲೆ ಈ ಅಳತೆ ಮಾಡುತ್ತಾರೆ. ಔದ್ಯಮೀಕರಣ ಆರ್ಥಿಕ ಅಭಿವೃದ್ಧಿಗೆ ಅವಶ್ಯ ಎಂಬುದನ್ನು ಒಪ್ಪಿಕೊಂಡರೂ ಔದ್ಯಮೀಕರಣದಿಂದ ಮಾತ್ರ ಆರ್ಥಿಕ ಅಭಿವೃದ್ಧಿ ಆಗುತ್ತದೆ ಎಂಬುದು ಸರಿಯಲ್ಲ. ಭಾರತದಲ್ಲಿ ಔದ್ಯಮೀಕರಣದ ದರ ಕಡಿಮೆ ಇರುವಾಗಲೂ ಒಟ್ಟು ಉತ್ಪಾದನೆಯ ಬೆಳವಣಿಗೆ 'ಹಿಂದಿನ' ಬೆಳವಣಿಗೆ ದರದ ದುಪ್ಪಟ್ಟು ದರದಲ್ಲಿ ಆಗಿದೆ. ಇದು ಕಳೆದೆರಡು ದಶಕಗಳ ಕಥೆ.

ಪ್ರಾದೇಶಿಕ ಮಟ್ಟದಲ್ಲಿ ಇದಕ್ಕೆ ಹಲವು ವೈವಿಧ್ಯತೆಗಳಿರುತ್ತವೆ. ಪ.ಬಂಗಾಳ ರಾಜ್ಯದಲ್ಲಿ ಔದ್ಯಮೀಕರಣ ನಿಧಾನವಾಗಿದ್ದರೂ ಆರ್ಥಿಕ ಬೆಳವಣಿಗೆ ಆಗುತ್ತದೆ. ಪಶ್ಚಿಮ ಬಂಗಾಳ ಆರ್ಥಿಕ ಅಭಿವೃದ್ಧಿ ದರ ಮತ್ತು ತಲಾ ಆದಾಯ ಎರಡರಲ್ಲೂ ಪ್ರಮುಖ ಸ್ಥಾನ ಪಡೆದಿದೆ. ಈಗ ಭಾರತ ಸರ್ಕಾರ ನೀಡಿರುವ ಅಂಕಿ ಸಂಖ್ಯೆಗಳನ್ನು ನೋಡಿದರೆ ನಮಗೆ ಗೊತ್ತಾಗುವುದು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಔದ್ಯಮಿಕ ಕ್ಷೇತ್ರದಲ್ಲಿ ಹೂಡಿಕೆಯಾಗಿರುವ ರಾಜ್ಯಗಳೆಂದರೆ ಮಹಾರಾಷ್ಟ್ರ, ಗುಜರಾತ್ ಮತ್ತು ತಮಿಳುನಾಡು ನಗರಗಳಲ್ಲಿನ ಕಾರ್ಖಾನೆಗಳು, ಪಂಚತಾರಾ ಹೋಟೆಲುಗಳನ್ನೇ ನೋಡಿ ಆ ರಾಜ್ಯದ ಅಭಿವೃದ್ಧಿ ಬಗ್ಗೆ ನಿರ್ಧರಿಸುವ ನಮಗೆ ಪಶ್ಚಿಮ ಬಂಗಾಳ ಅತ್ಯಂತ ಹೆಚ್ಚಿನ ದರದ ಆರ್ಥಿಕ ಬೆಳವಣಿಗೆ ತೋರುತ್ತಿದೆ ಎಂದರೆ ನಂಬಲಾಗುವುದಿಲ್ಲ. ಸಿಪಿಐ(ಎಂ) ನೇತೃತ್ವದ ಎಡರಂಗ ರಾಜ್ಯವನ್ನು ಹಾಳು ಮಾಡಿದೆ ಎಂಬ ಸುಲಭ ಗ್ರಹಿಕೆಗೆ ಜನರೆಲ್ಲ ಒಳಗಾಗಿಬಿಡುತ್ತಾರೆ.

**ಆದರೆ ವಾಸ್ತವ?**

ಕೇಂದ್ರ ಸಂಖ್ಯಾಶಾಸ್ತ್ರ ವಿಭಾಗದ ಅಂಕಿಸಂಖ್ಯೆಗಳ ಪ್ರಕಾರ 1993-94ರಿಂದ ತೆಗೆದುಕೊಂಡರೆ ಪಶ್ಚಿಮ ಬಂಗಾಳಕ್ಕೆ ಅತ್ಯಂತ ಹೆಚ್ಚಿನ ಬೆಳವಣಿಗೆ ಇದೆ. ಅದು ಶೇ8.55 ರಷ್ಟು ಎರಡನೇ ಸ್ಥಾನದಲ್ಲಿರುವ ಕರ್ನಾಟಕ ಶೇ.7.29ರ ದರದಲ್ಲಿ ಬೆಳೆಯುತ್ತಿದೆ. ಇಡೀ ಭಾರತವನ್ನು ತೆಗೆದುಕೊಂಡರೆ ಈ ದರ ಶೇ 6.87 ರಷ್ಟು.

ತಲಾ ಆದಾಯದ ವಿಷಯದಲ್ಲೂ ಪಶ್ಚಿಮ ಬಂಗಾಳ ಉದಾರೀಕರಣದ ನಂತರದ ವರ್ಷಗಳಲ್ಲಿ ಇತರ ರಾಜ್ಯಗಳಿಗಿಂತ ಮುಂದಿದೆ. 1993-94ರ ನಂತರ ಅದು ಶೇ.5.5 ರಷ್ಟನ್ನು ಮುಟ್ಟಿದೆ. ಅಖಿಲ ಭಾರತದ ಈ ದರ ಶೇ.4.3 ರಷ್ಟು ಪಶ್ಚಿಮ ಬಂಗಾಳಕ್ಕೆ ಬಾಂಗ್ಲಾದೇಶದಿಂದ, ಈಶಾನ್ಯ ಭಾರತದ ಹಲವು ರಾಜ್ಯಗಳಿಂದ ಬಿಹಾರ, ಒರಿಸ್ಸಾಗಳಿಂದ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಗುಳೆ ಬರುತ್ತಾರೆ ಎಂಬ ವಾಸ್ತವವನ್ನು ನಾವು ಗಣನೆಗೆ ತೆಗೆದುಕೊಂಡರೆ ಪಶ್ಚಿಮ ಬಂಗಾಳದ ಈ ಬೆಳವಣಿಗೆ ದರದ ನಿಜ ಮಹತ್ವ ಸ್ಪಷ್ಟವಾಗಿ ಗೊತ್ತಾಗುತ್ತದೆ. ಇದರಿಂದಾಗಿ ಪಶ್ಚಿಮ ಬಂಗಾಳದ ಜನಸಂಖ್ಯೆ ಬೆಳವಣಿಗೆ ಹೆಚ್ಚಾಗಿಯೇ ಇದೆ ಎಂಬುದೂ ವಾಸ್ತವ.

ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದ ತಲಾ ಆದಾಯವನ್ನು ಅಲ್ಲಿಯ ಮಹಾನಗರಗಳನ್ನು ತೆಗೆದಿರಿಸಿ ನೋಡಿದರೆ ಗೊತ್ತಾಗುವುದು. ಪಶ್ಚಿಮ ಬಂಗಾಳದ ತಲಾ ಆದಾಯ 12671 ರೂಗಳಾದರೆ ಮಹಾರಾಷ್ಟ್ರದ್ದು 13897ರೂ.ಗಳು.

> **ಪಶ್ಚಿಮ ಬಂಗಾಳ ಅಭಿವೃದ್ಧಿಯ ಹಿಂದಿರುವ ಗುಟ್ಟೇನು?**

ಪಶ್ಚಿಮ ಬಂಗಾಳದಲ್ಲಿ ಬರೀ ಶೇ.28 ರಷ್ಟು ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಇದೆ ಎಂಬುದನ್ನು ಗಮನಿಸಿದರೆ ಈ ಸಾಧನೆಯ ಮಹತ್ವ ಅರಿವಾಗುತ್ತದೆ. ಪಂಜಾಬ್ ಮತ್ತು ಹರಿಯಾಣಗಳಲ್ಲಿ ನೀರಾವರಿ ಸೌಲಭ್ಯವಿರುವ ಕೃಷಿ ಭೂಮಿಯ ಪ್ರಮಾಣ ಅನುಕ್ರಮವಾಗಿ ಶೇ.89.72 ಮತ್ತು ಶೇ.65. ಪಶ್ಚಿಮ ಬಂಗಾಳದಲ್ಲಿ ನೀರಾವರಿಗೆ ಕೇಂದ್ರ ಸರ್ಕಾರದಿಂದ ಹಣ ದೊರೆತಿದ್ದರೆ ಅಲ್ಲಿಯ ಕೃಷಿ ಬೆಳವಣಿಗೆ ಏನಾಗಬಹುದಿತ್ತು ಎಂಬುದು ಊಹೆಗೆ ಬಿಟ್ಟದ್ದು.

ಇದನ್ನು ಗಮನಿಸಿ! 1984-2001 ರ ನಡುವೆ ಪಶ್ಚಿಮ ಬಂಗಾಳದಲ್ಲಿನ ಔದ್ಯಮಿಕ ಹೂಡಿಕೆ ಬರೀ ನಾಲ್ಕು ಪಟ್ಟು ಹೆಚ್ಚಾದರೆ ದೇಶದ ಇತರ ಭಾಗಗಳನ್ನು ತೆಗೆದುಕೊಂಡರೆ ಇದು ಏಳುಪಟ್ಟು ಹೆಚ್ಚಾಯಿತು. ಈ ಅವಧಿಯಲ್ಲಿ ಪಶ್ಚಿಮ ಬಂಗಾಳದಲ್ಲಿ ಉದ್ದಿಮೆಗಳ ಸಂಖ್ಯೆ 5369ರಿಂದ ಬರೀ 6091ಕ್ಕೆ ಏರಿತು. ಇಡೀ ಭಾರತವನ್ನು ತೆಗೆದುಕೊಂಡರೆ ಅದು 97000ರಿಂದ 131000 ಕ್ಕೆ ಏರಿತು. ಈ ಅವಧಿಯಲ್ಲಿ ಸುಸಂಘಟಿತ ವಲಯುದಲ್ಲಿ ಪಶ್ಚಿಮ ಬಂಗಾಳದಲ್ಲಿನ ಉದ್ಯೋಗಗಳ ಸಂಖ್ಯೆ 917000ದ 456000ಕ್ಕೆ ಕುಸಿಯಿತು.

ಪಶ್ಚಿಮ ಬಂಗಾಳದಲ್ಲಿ ಎಲ್ಲವೂ ಸರಿಯಾಗಿರಲಿಲ್ಲ ಎಂಬುದು ನಿಜ. ಬಂಡವಾಳದ ಗುಳೆ ಔದ್ಯಮೀಕರಣದ ದರದಲ್ಲಿ ಕುಸಿತ ಇತ್ಯಾದಿಗಳು ಸಾಮಾನ್ಯವಾಯಿತು. ಆದರೆ ಸಾರ್ವಜನಿಕ ವಲಯದಲ್ಲಿನ ಅರಾಜಕತೆ ಬೇರೆ ರಾಜಕೀಯ ವ್ಯವಸ್ಥೆ ಇದ್ದರೆ ಕಡಿಮೆಯಾಗುವುದು/ ಬೇರೆಯಾಗುವುದು ಸಾಧ್ಯವಿತ್ತೆ? ದೇಶ ವಿಭಜನೆಯ ದುಷ್ಪರಿಣಾಮ ಪಶ್ಚಿಮ ಬಂಗಾಳದ ವಾಣಿಜ್ಯ ವ್ಯವಸ್ಥೆಯ ಮೇಲೆ ಹೇಗಾಯಿತು ಎಂಬುದು ಗೊತ್ತಿರುವ ವಿಷಯ.

ಕಲ್ಲಿದ್ದಲು ಮತ್ತು ಉಕ್ಕು ಉದ್ದಿಮೆಗಳು ಪಶ್ಚಿಮ ಬಂಗಾಳದ ಹತ್ತಿರವಿದ್ದರೂ ಸಾಗಾಣಿಕಾ ದರ ಸಮಾನತೆಯ ನೀತಿಯಿಂದಾಗಿ ಪಶ್ಚಿಮ ಬಂಗಾಳಕ್ಕೆ ಯಾವುದೇ ಲಾಭ ದೊರೆಯಲಿಲ್ಲ.

ಔದ್ಯಮಿಕ ರೋಗಗ್ರಸ್ತತೆಯೂ ಪಶ್ಚಿಮ ಬಂಗಾಳವನ್ನು ಬಹಳವಾಗಿ ಕಾಡಿದೆ. ದೇಶದಾದ್ಯಂತ ಈ ದರ ಶೇ.2.54 ರಷ್ಟಿದ್ದಾಗ ಪಶ್ಚಿಮ ಬಂಗಾಳದಲ್ಲಿ ಅದು ಶೇ4.14 ರಷ್ಟಿತ್ತು. ಮಹಾರಾಷ್ಟ್ರ ಮತ್ತು ತಮಿಳುನಾಡುಗಳಲ್ಲಿ ಇದು ಅನುಕ್ರಮವಾಗಿ ಶೇ3.3 ಮತ್ತು 1.54ರಷ್ಟಿತ್ತು.

ಸಣ್ಣ ಕೈಗಾರಿಕೆಗಳನ್ನು ತೆಗೆದುಕೊಂಡರೆ ಇದು ಇನ್ನೂ ನಿರಾಶಾದಾಯಕವಾಗಿ ಕಾಣುತ್ತದೆ. ಇಡೀ ದೇಶದಲ್ಲಿ ರೋಗಗ್ರಸ್ತ ಸಣ್ಣ ಕೈಗಾರಿಕೆಗಳ ಸಂಖ್ಯೆ 249630 ಇದ್ದರೆ ಪಶ್ಚಿಮ ಬಂಗಾಳವೊಂದರಲ್ಲೇ ಈ ಸಂಖ್ಯೆ 1,13,846 ಅಥವಾ ಶೇ 45.60 ರಷ್ಟು.

ಎಡರಂಗ ಸರ್ಕಾರದ ಮಹತ್ವವನ್ನು ನೋಡಿ 2001 ರಲ್ಲಿ ದೇಶದಾದ್ಯಂತ 151 ಮಿಲ್ಲುಗಳು ಮುಚ್ಚಿದರು. ಆದರೆ ಪಶ್ಚಿಮ ಬಂಗಾಳದಲ್ಲಿ ಒಂದೂ ಮುಚ್ಚಲಿಲ್ಲ. ಹೆಚ್ಚು ರೋಗಗ್ರಸ್ತ ಉದ್ದಿಮೆಗಳು ಪಶ್ಚಿಮ ಬಂಗಾಳದಲ್ಲಿರುವುದು ಸಹಜವಲ್ಲವೆ?

ಪಶ್ಚಿಮ ಬಂಗಾಳದ ಔದ್ಯಮಿಕ ಹಿಂಜರಿತ ಅದರ ಆರ್ಥಿಕ ರಚನೆಯ ಮೇಲೂ ಪ್ರಭಾವ ಬೀರಿದೆ. ಅಖಿಲ ಭಾರತ ಮಟ್ಟದಲ್ಲೂ ಒಟ್ಟು ಉತ್ಪಾದನೆಯಲ್ಲಿ ಕೃಷಿ ವಲಯದ ಪಾಲು ಶೇ33.43 1993-94ರಲ್ಲಿ ಇದ್ದದ್ದು 2001-02 ರಲ್ಲಿ ಶೇ.26.28ಕ್ಕೆ ಇಳಿಯಿತು.

ಪಶ್ಚಿಮ ಬಂಗಾಳದಲ್ಲಿ ಅದು ಶೇ 33.84 ರಿಂದ ಶೇ27.36 ಕ್ಕೆ ಇಳಿಯಿತು. ಆದರೆ ಉತ್ಪಾದನೆಯಲ್ಲಿ ಅಖಿಲ ಭಾರತದ ಬೆಳವಣಿಗೆ 1993-94 ರಲ್ಲಿ ಶೇ23.68 ಇದ್ದದ್ದು 2001-02 ರಲ್ಲಿ 24.36ಕ್ಕೆ ಏರಿತು. ಪಶ್ಚಿಮ ಬಂಗಾಳದಲ್ಲಿ ಇದು ಶೇ.23.02ರಿಂದ 21.68 ಕ್ಕೆ ಕುಸಿಯಿತು. ಸೇವಾ ವಲಯದ ಬೆಳವಣಿಗೆ ದರ ಪಶ್ಚಿಮ ಬಂಗಾಳದಲ್ಲಿ ಶೇ.7.81 ರಷ್ಟಾದರೆ ಅಖಿಲ ಭಾರತ ಮಟ್ಟದಲ್ಲಿ ಇದು ಶೇ 6.54ರಷ್ಟಿತ್ತು. ಅಂದರೆ ಔದ್ಯಮೀಕರಣ ಕಡಿಮೆ ಪ್ರಮಾಣದಲ್ಲಿದ್ದೂ ಪಶ್ಚಿಮ ಬಂಗಾಳ ಒಟ್ಟಾರೆ ಆರ್ಥಿಕ ಅಭಿವೃದ್ಧಿ ಸಾಧಿಸಿದೆ ಎಂದಾಯಿತು.

ಇದೊಂದು ಮುಖ್ಯ ಕ್ಷೇತ್ರವೆಂದರೆ ವಿದ್ಯುತ್. ಈ ವಲಯದಲ್ಲಿ ಪಶ್ಚಿಮ ಬಂಗಾಳ ಬಹಳ ಹಿಂದೆಬಿದ್ದಿದೆ. ಇಡೀ ಭಾರತ 2001-02 ರಲ್ಲಿ ಹಿಂದೆ ಇದ್ದದ್ದಕ್ಕಿಂತ ಶೇ.43.75 ರಷ್ಟು ಹೆಚ್ಚಿನ ವಿದ್ಯುತ್ ಉತ್ಪಾದಿಸಿತು. ಪಶ್ಚಿಮ ಬಂಗಾಳ ಶೇ.38.64 ರಷ್ಟು ಹೆಚ್ಚು ವಿದ್ಯುತ್ತನ್ನು ಉತ್ಪಾದಿಸಿತು.

ಆದರೆ ಪಶ್ಚಿಮ ಬಂಗಾಳ ತಲಾ ವಿದ್ಯುತ್ ಬಳಕೆಯಲ್ಲಿ ಹೆಚ್ಚಳ ಕಂಡಿದೆ.

ಗ್ರಾಮೀಣ ವಿದ್ಯುದ್ದೀಕರಣದಲ್ಲಿ ಪಶ್ಚಿಮ ಬಂಗಾಳ ಹಿಂದೆ ಬಿದ್ದಿದೆ. ಅಖಿಲ ಭಾರತ ಮಟ್ಟದಲ್ಲಿ ಇದು ಶೇ.86.65 ರಷ್ಟಾದರೆ ಪಶ್ಚಿಮ ಬಂಗಾಳದ ಸಾಧನೆ ಶೇ.78.17 ರಷ್ಟು.

1977 ರಲ್ಲಿ ಎಡರಂಗ ಸರ್ಕಾರ ಅಧಿಕಾರಕ್ಕೆ ಬಂದಾಗ ಪಶ್ಚಿಮ ಬಂಗಾಳದಲ್ಲಿ ಬಡತನ ಶೇ.60.52 ರಷ್ಟಿತ್ತು. (ರಾಷ್ಟ್ರದ್ದು ಶೇ. 51.32 ರಷ್ಟಿತ್ತು) 1997-2000 ದಲ್ಲಿ ಇದು ಅನುಕ್ರಮವಾಗಿ ಶೇ.27.02 ಮತ್ತು 26.10 ಆಗಿತ್ತು. ಇದರರ್ಥ ಪಶ್ಚಿಮ ಬಂಗಾಳದ ಸಾಧನೆ ಅಖಿಲ ಭಾರತ ಮಟ್ಟದಲ್ಲಿನ ಸಾಧನೆಗಿಂತ ದೊಡ್ಡದು.

ಇವೆಲ್ಲಕ್ಕಿಂತ ಬಹಳ ಮುಖ್ಯವಾದದ್ದು **ಮಲತಾಯಿ ಧೋರಣೆ ತೋರುವ ಕೇಂದ್ರ ಸರ್ಕಾರಗಳೇ ಇರುವಾಗಲೂ ಪಶ್ಚಿಮ ಬಂಗಾಳದ ಎಡರಂಗ ಇಂತಹ ಸಾಧನೆ ತೋರಿರುವುದು.** (ಬಿಸಿನೆಸ್ ಲೈನ್ ದಿನ ಪತ್ರಿಕೆಯಲ್ಲಿ ಪ್ರಕಟವಾದ ಮೋಹನ್ ಗುರುಸ್ವಾಮಿಯವರ ಲೇಖನದ ಸಂಗ್ರಹಾನುವಾದ)

# ತಾರುಣ್ಯದಲ್ಲಿ ನಿರುದ್ಯೋಗ ಉಣ್ಣುವುದು

ದೇಶದಲ್ಲಿನ ನಿರುದ್ಯೋಗ ಸಮಸ್ಯೆ ಕಳೆದೆರಡು ವರ್ಷಗಳಲ್ಲಿ ಹೆಚ್ಚಾಗಿದೆ. 2001-02ನೇ ಸಾಲಿನಲ್ಲಿ ಶೇ.8.87ರಷ್ಟಿದ್ದ ನಿರುದ್ಯೋಗ 2004-5 ರಲ್ಲಿ ಶೇ 9.11 ಕ್ಕೆ ಏರಿದೆ. ಇದು ದೇಶದ ಯೋಜನಾ ಆಯೋಗದ ಅಂಕಿ ಸಂಕಿಗಳ ಪ್ರಕಾರ.

ಈ ಸುದ್ದಿಗೆ ಇನ್ನೂ ಮುಖ್ಯವಾದ ಆಯಾಮವಿದೆ. ಅದೆಂದರೆ ಈ ಉದ್ಯೋಗ ಕಡಿಮೆ ಆಗಿರುವುದು ಸುಸಂಘಟಿತ ವಲಯುದಲ್ಲಿ ಸುಸಂಘಟಿತ ವಲಯದಲ್ಲಿ ಮಾತ್ರ ನಿರಂತರ ಉದ್ಯೋಗ ದೊರೆಯುತ್ತದೆ. ಅಸಂಘಟಿತ ವಲಯದಲ್ಲಿ ಉದ್ಯೋಗ ಎಂದರೆ ಇಂದು ಇರುವ ನಾಳೆ ಇರುವ ಭರವಸೆಯಿಲ್ಲ. ಅಂದರೆ ಇದು ಅತಂತ್ರ ಉದ್ಯೋಗ.

ಈ ಅವಧಿಯಲ್ಲಿ ನಿರುದ್ಯೋಗ ಹೆಚ್ಚಿದೆ ಎಂದರೆ ಈ ಅವಧಿಯಲ್ಲಿ ಉದ್ಯೋಗ ಮಾರುಕಟ್ಟೆಗೆ ಬಂದ ಯುವಜನರಿಗೆ ಉದ್ಯೋಗ ದೊರೆತಿಲ್ಲ ಎಂದರ್ಥ. ಯುವಜನ ಉತ್ಸಾಹಶಾಲಿಗಳು ಮತ್ತು ಹೆಚ್ಚು ಕೆಲಸ ಮಾಡಬಲ್ಲ ತಾಕತ್ತುಳ್ಳವರು. ಇಂತಹ ಉತ್ಪಾದಕ ಶಕ್ತಿಯನ್ನು ದೇಶ ಬಳಸುತ್ತಿಲ್ಲ ಎಂಬ ಅರ್ಥವೂ ಇದರಿಂದ ಆಗುತ್ತದೆ.

ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಎಡಪಕ್ಷಗಳ ಒತ್ತಡದಿಂದಾಗಿ ಅಲ್ಪಸ್ವಲ್ಪ ಜನಪರ ಕೆಲಸ ಮಾಡುವ ತೋರಿಕೆ ಮಾಡುತ್ತಿದೆಯಾದರೂ ಇದು ಬರೀ ತೋರಿಕೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಅಲ್ಲವೆ?

ಈ ಸಾಲಿನ ಬಜೆಟೂ ಸಹ ಅಂತಹುದೇ ಧೋರಣೆ ತೋರಿದೆ.

# ವಿಯೆಟ್ನಾಂ ವಿಮೋಚನೆಯ 30ನೇ ವಾರ್ಷಿಕೋತ್ಸವ.............

ಪುಟ 9 ರಿಂದ

ಸ್ಥಾಪಿಸಿದ್ದರು ಮಹಾನ್ ಪ್ರಮಾದ ಎಂದು ಕೆಲವು ಚರಿತ್ರಕಾರರು ಹೇಳುತ್ತಾರೆ. ಇಂತಹುದೇ ಪ್ರಮಾದಗಳನ್ನು ಇರಾನ್‌ನಲ್ಲಿ ಶಾ ಪೆಹಲವಿ, ಇಂಡೋನೇಶ್ಯಾದಲ್ಲಿ ಸುಹಾರ್ತೋ, ಚಿಲಿಯಲ್ಲಿ ಪಿನೋಶೆ ಯಂತಹವರನ್ನು ಸ್ಥಾಪಿಸುವುದರಲ್ಲಿ ಅಮೆರಿಕನ್ ಸರ್ಕಾರ ಮಾಡಿದೆ. 1945 ರ ನಂತರದ ಅವಧಿಯಲ್ಲಿ ಹೊ-ಚಿ-ಮಿನ್ ವಿಯೆಟ್ನಾಂನ ಸ್ವಾಭಾವಿಕ ನಾಯಕರಾಗಿ ಹೊಮ್ಮಿದ್ದರು.

ವಿಯೆಟ್ನಾಂ ಕಮ್ಯುನಿಸಂ ಮತ್ತು ರಾಷ್ಟ್ರೀಯ ವಿಮೋಚನಾ ಚಳುವಳಿ ಬೇರೆ ಬೇರೆ ಅಲ್ಲ ಎಂಬ ನೀತಿ ಮುಂದಿಡುವ ಮೂಲಕ ಜನತೆಯಲ್ಲಿ ಸ್ಫೂರ್ತಿ ತುಂಬಿದರು. ವಿಯೆಟ್ನಾಂ ಕಮ್ಯುನಿಸ್ಟ್ ಪಾರ್ಟಿ ಭೂ-ಸುಧಾರಣೆಯನ್ನು ಕೈಗೆತ್ತಿಕೊಳ್ಳುವ ಮೂಲಕ, ಜನತೆಯನ್ನು ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲೂ ಭಾಗವಹಿಸುವಂತೆ ಮಾಡಿದರು. ವಿಯೆಟ್ನಾಂನಲ್ಲಿ ಭೂಸುಧಾರಣೆ ಆಗದೆ ಕಾರ್ಷಿಕ ಕ್ರಾಂತಿ ಆಗದೆ, ಜನತೆಯಲ್ಲಿ ವ್ಯಾಪಕವಾಗಿದ್ದ ಹಸಿವು ಹೋಗುವುದಿಲ್ಲ ಎಂದು ತಿಳಿಸಿದರು. ಕಾರ್ಷಿಕ ಕ್ರಾಂತಿ ಮತ್ತು ರಾಷ್ಟ್ರೀಯ ವಿಮೋಚನಾ ಹೋರಾಟ ಎರಡರ ರೂಪುರೇಷೆಗಳನ್ನು ಜತೆ ಜತೆಯಾಗೇ ರೂಪಿಸಿದರು. ರಾಷ್ಟ್ರೀಯ ವಿಮೋಚನಾ ಹೋರಾಟವನ್ನು ಕಮ್ಯುನಿಸ್ಟ್ ಪಕ್ಷ ಮೂರು ರಂಗಗಳಲ್ಲಿ ಹಮ್ಮಿಕೊಂಡಿತು - ಮಿಲಿಟರಿ, ರಾಯಭಾರ ಮತ್ತು ಆರ್ಥಿಕ ರಂಗಗಳಲ್ಲಿ.

ಅಮೆರಿಕದ ಕೈಗೊಂಬೆ ಸರ್ಕಾರ ವಿಯೆಟ್ನಾಂನ ರೈತರ ಮೇಲೆ ಧಾಳಿಯನ್ನು ಕೇಂದ್ರೀಕರಿಸಿತ್ತು. 1954-58 ಅವಧಿಯಲ್ಲಿ ಬಂಧಿತನಾದ 40 ಸಾವಿರ ರಾಜಕೀಯ ಕಾರ್ಯಕರ್ತರಲ್ಲಿ ಬಹುಪಾಲು ರೈತರೇ. ಆ ಅವಧಿಯಲ್ಲಿ ಕೊಲ್ಲಲ್ಪಟ್ಟ ರಾಜಕೀಯ ಕಾರ್ಯಕರ್ತರಲ್ಲಿ ಹೆಚ್ಚಿನವರು ರೈತರೇ. ಅಮೆರಿಕದ ಕೈಗೊಂಬೆ ಸರ್ಕಾರದ ಭೂಮಿಯ ಕೆಲವು ದೊಡ್ಡ ಎಸ್ಟೇಟ್‌ಗಳಾಗಿ ಪರಿವರ್ತಿಸುವ ನೀತಿ ಮತ್ತು ಭೂಮಿಯನ್ನು ಎಲ್ಲಾ ರೈತರಿಗೆ ಹಂಚುವ ಕಮ್ಯುನಿಸ್ಟ್ ಪಾರ್ಟಿಯ ನೀತಿಗಳ ನಡುವೆಯೂ ಈ ಯುದ್ಧ ನಡೆದಿತ್ತು. ಆದ್ದರಿಂದ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ವಿಜಯ, ಕಾರ್ಷಿಕ ಕ್ರಾಂತಿಗೆಹಾದಿ ಮಾಡಿಕೊಟ್ಟಿತು. ಪ್ರಜಾಸತ್ತಾತ್ಮಕ ವಿಯೆಟ್ನಾಂ, ವಿಯೆಟ್ನಾಂ ಸಮಾಜವಾದಿ ಪ್ರಜಾಸತ್ತೆ ಆಯಿತು.

ವಿಯೆಟ್ನಾಂನಲ್ಲಿ ಈಗ ರಾಷ್ಟ್ರದ ಪುನರ್ರಚನೆ ಭರದಿಂದ ಸಾಗಿದೆ. ವಿಯೆಟ್ನಾಂ ನ ವಿಮೋಚನೆಗೆ ಬಂದೂಕು ಹಿಡಿದು ಹೋರಾಡಿದ ಯೋಧರು ಈಗ ಸಮಾಜದ ಪುನರ್ರಚನೆಯ ಕಾರ್ಯದಲ್ಲಿ ತೊಡಗಿದ್ದಾರೆ.

ಇಂದು ವಿಯೆಟ್ನಾಂ ಮಾರ್ಕ್ಸ್‌ವಾದ-ಲೆನಿನ್ ವಾದದ ಆಧಾರದ ಮೇಲೆ ಸಮಾಜವಾದದ ರಕ್ಷಣೆ ಮತ್ತು ಬೆಳವಣಿಗೆಯ ಸರಿಯಾದ ನೀತಿಗಳನ್ನು ರೂಪಿಸಿ ಜಾರಿ ಮಾಡುತ್ತಿದೆ. ಇಡೀ ಜಗತ್ತಿನ ಬೆಳವಣಿಗೆಗೆ ತನ್ನನ್ನು ತೆರೆದುಕೊಂಡಿದೆ ಹೋ ಚಿ-ಮಿನ್‌ರ ಕೊನೆಯ ಆಸೆಯನ್ನು ಈಡೇರಿಸಲು ವಿಯೆಟ್ನಾಂ ಜನತೆ ಪಣ ತೊಟ್ಟಿದ್ದಾರೆ. ಸೆಪ್ಟೆಂಬರ್ 6, 1969 ರಂದು ಹನೋಯ್ ರೇಡಿಯೋ ಸ್ಟೇಷನ್ ಬಿತ್ತರಿಸಿದ ಹೊ ಚಿ ಮಿನ್‌ರ ಈ ಪ್ರಸಿದ್ಧ ಉಯಿಲು, ವಿಮೋಚನೆಯ 30ನೇ ವಾರ್ಷಿಕೋತ್ಸವದಲ್ಲಿ ವಿಶೇಷ ಮಹತ್ವ ಪಡೆದಿದೆ.

**ಮಂಗಳೂರು ಮಹಾನಗರ ಪಾಲಿಕೆ ಕುಡಿಯುವ ನೀರಿಗಾಗಿ ತುಂಬೆ ಎಂಬ ಸ್ಥಳದಲ್ಲಿ 1983 ರಲ್ಲಿ ವೆಂಟೆಡ್ ಡ್ಯಾಂ ನಿರ್ಮಿಸಿತು. ಅದು ಕಳಪೆ ಕಾಮಗಾರಿಯಿಂದಾಗಿ ಸೋರುತ್ತಿದೆ ಮತ್ತು ಹೂಳು ತುಂಬಿದೆ. ಅದನ್ನೇ ಕಾರಣವಾಗಿಸಿಕೊಂಡು ಪರ್ಯಾಯ ಡ್ಯಾಂ ನಿರ್ಮಿಸಬೇಕೆಂದು ಹೊರಟಿರುವ ಮಹಾನಗರ ಪಾಲಿಕೆಯ ಹಠಮಾರಿತನ ನೈಜ ಕಾಳಜಿಯೇ ಇಲ್ಲ. ಕಾಮಗಾರಿ ಪರ್ಸಂಟೇಜೋ ಎಂಬುದು ಚರ್ಚಾ ವಿಷಯ. ಈ ಬಗ್ಗೆ ಡಿವೈಎಫ್ಐ ಸತ್ಯಶೋಧನಾ ಸಮಿತಿ ವರದಿ**

# ಮಂಗಳೂರು ಮಹಾನಗರ ಪಾಲಿಕೆಗೆ ಇನ್ನೊಂದು ವೆಂಟೆಡ್ ಡ್ಯಾಮ್ ಅಗತ್ಯವಿದೆಯೇ?

ತುಂಬೆಯ ವೆಂಟೆಡ್ ಡ್ಯಾಂನ ಸುತ್ತ ಸುತ್ತಿರುವ ಪರ ವಿರೋಧದ ಅಭಿಪ್ರಾಯಗಳು 2005 ರ ಪ್ರಾರಂಭದಿಂದ ಹೊಸ ರೂಪ ಪಡೆದುಕೊಂಡಿದೆ. ಈ ಬೇಡಿಕೆಗೆ ಯಾವ ವಿಭಾಗದಿಂದ ಹಕ್ಕೋತ್ತಾಯ ಮೂಡಿಬಂತು ಎಂಬುದನ್ನು ನಾವು ಗಮನಿಸಬೇಕು. ಈ ಬೇಡಿಕೆಯ ಆಸೆ, ಆಕಾಂಕ್ಷೆ, ಬೇಕುಬೇಡಗಳ ಪ್ರತಿಫಲನವೇ ಅಥವಾ 60 ಮಂದಿ (ಮೇಯರ್ ಹೇಳುವಂತೆ) ಮಹಾ ಮೇಧಾವಿ ಕಾರ್ಪೊರೇಟರ್‌ಗಳ ಮತ್ತು ಅಧಿಕಾರಿಗಳ ಹಪಹಪಿಕೆಯ ಪ್ರತಿಫಲನವೇ ಎಂಬುದನ್ನು ನಾವು ವಿಶ್ಲೇಷಿಸಬೇಕು. ಏಕಾಏಕಿ ಮೂಡಿಬಂದ ಹೊಸ ಯೋಜನೆಗೆ ಭಾರತದ ಇತಿಹಾಸದಲ್ಲಿ ಕಂಡುಬರುವಂತೆ ಯಾವುದೇ ಬೇಡಿಕೆ, ಮನವಿ, ಹೋರಾಟ, ಚಳುವಳಿಗಳು ಯಾವುದೇ ವಿಭಾಗದಿಂದ ಸಂಘಟನೆಗಳಿಂದ, ಪಕ್ಷದಿಂದ ಮೂಡಿಬಂದಿಲ್ಲ. ಆಳುವ ಪಕ್ಷದಿಂದಲೂ ಮೂಡಿಬಂದಿಲ್ಲ. ವಿರೋಧ ಪಕ್ಷದಿಂದಲೂ 2005 ರ ಲಗಾಯ್ತು ಮೊದಲು ಕೇಳಿಬಂದಿಲ್ಲ. ಹಾಗಿರುವಾಗ ಈಗ ಗಂಡಾಗುಂಡಿಯಾದರೂ ಡ್ಯಾಂ ರೂಪಿಸಿ ಮನುಷ್ಯ ಕಲ್ಯಾಣದ ಹೊಸಕಲ್ಪನೆ ಎಷ್ಟು ನಂಬಲರ್ಹವಾದುದು?

ತುಂಬೆಯಲ್ಲಿ 1983 ರಲ್ಲಿ ರೂಪಿಸಿರುವ ವೆಂಟೆಡ್ ಡ್ಯಾಮ್ ಸೋರುತ್ತಿದೆ ಎಂಬ ವಾದವನ್ನು ಇದೇ 'ಜನಕಲ್ಯಾಣ ಮಂಡಳಿ' ತೇಲಾಡಿಸಿ ಬಿಟ್ಟು ಪ್ರತಿಕ್ರಿಯೆಯನ್ನು ಗಮನಿಸಿತು. ಆಗ ವಾಸ್ತವಿಕವಾಗಿ ಈ ಕಳಪೆ ಕಾಮಗಾರಿಗೆ ಯಾರು ಕಾರಣ? ಯಾರು ಆಗ ಅಧಿಕಾರದಲ್ಲಿದ್ದದ್ದು? ಆಗ ಅದರ ಜವಾಬ್ದಾರಿ ಹೊತ್ತ ಇಂಜಿನಿಯರ್ ಯಾರು? ಕಂಟ್ರಾಕ್ಟದಾರರು ಯಾರು? ಅವರೆಲ್ಲರಿಗೂ ಇಷ್ಟೊಂದು ಕಡಿಮೆ ಅವಧಿಯಲ್ಲಿ ಯೋಜನೆಯೊಂದು ವಿಫಲವಾಗುವಾಗ ಶಿಕ್ಷೆ ಅಥವಾ ಕಪ್ಪು ಪಟ್ಟಿ ಅಥವಾ ತನಿಖೆಯ ಪ್ರಸ್ತಾಪವೇ ಇಲ್ಲ. ಇಲ್ಲಿಯೇ ಇವರ ನಿಜವಾದ ಪ್ರಾಮಾಣಿಕತೆ ಪ್ರಶ್ನಿಸಲಾಗುವುದು? ಕಳಪೆ ಕಾಮಗಾರಿಯ ಪರ್ಸೆಂಟೇಜ್ ರಾಜಕೀಯ ಇವರ ರಕ್ತಗತ ಗುಣಗಾನವಾಗಿರುವಾಗ ಇಂತಹ ಮರು ಪ್ರಶ್ನೆಯನ್ನು ಅಪೇಕ್ಷಿಸುವುದೇ ತಪ್ಪು ಕ್ರಿಯೆ.

ಹೌದು ತುಂಬೆ ಡ್ಯಾಂ ಸೋರುತ್ತಿದೆ ಅದಕ್ಕಾಗಿಯೇ ಏಪ್ರಿಲ್ 6 2005 ರಿಂದ ನೀರಿನ ಬರ ಬಂದಿದೆ ಎಂದು ಹೇಳಿ ಮೂರು ದಿನಕ್ಕೊಮ್ಮೆ ನೀರು ಬಿಡುವುದಕ್ಕೆ ಮಹಾನಗರ ಪಾಲಿಕೆ ತೀರ್ಮಾನಿಸಿ ಜನರಿಗೆ ತೊಂದರೆ ಕೊಟ್ಟಿದೆ. ಆದರೆ ತುಂಬೆ ಡ್ಯಾಂ ಸೋರುತ್ತಿದ್ದರೆ ಅದನ್ನು ಸರಿಪಡಿಸುವುದರಿಂದ ಏನೂ ಪ್ರಯೋಜನ ವಿಲ್ಲವೆಂದು ಹೇಳುತ್ತಿದ್ದಾರೆ. ಬದಲಾಗಿ ಹೊಸ ಡ್ಯಾಂ ನಿರ್ಮಿಸುವುದೇ ಇರುವ ಏಕೈಕ ಪರ್ಯಾಯ ಮಾರ್ಗ ಎಂದು ಹೇಳುತ್ತಿದ್ದಾರೆ. ಸರಿಸುಮಾರು ಒಂದೆರಡು ಶೇಕಡಾ ಪ್ರಮಾಣ ನೀರು ಸೋರುತ್ತಿರುವುದಕ್ಕೆ ಮಾಡಬೇಕಾದ ಆಧುನಿಕ ತಂತ್ರಜ್ಞಾನ ಅಳವಡಿಸಿದ ರಿಪೇರಿ ಕೆಲಸ ಮಾಡಿ ಅದರ ಫಲಿತಾಂದ ಮೇಲೆ ಮುಂದಿನ ಕೆಲಸಕ್ಕೆ ಮುಂದಡಿ ಇಡಬಹುದಾಗಿತ್ತು. ಅದಕ್ಕೂ ಈ ಮ.ನ.ಪಾ. ಸಿದ್ದವಿಲ್ಲ. ದೇಶ ಮತ್ತು ವಿದೇಶಗಳಲ್ಲಿ ಇಂತಹ ಅಣೆಕಟ್ಟುಗಳ ಸೋರುವಿಕೆ ಕಂಡಕೂಡಲೇ ಅದನ್ನು ಏಕಾಏಕಿ ತ್ಯಜಿಸಿ ಹೊಸ ಅಣೆಕಟ್ಟಿನ ಪ್ರಸ್ತಾಪ ಎಲ್ಲೂ ಇರಲು ಸಾಧ್ಯವಿಲ್ಲ. ಇದು ಕಾಲಿಗೆ ಗಾಯವಾದರೆ ಕಾಲನ್ನೇ ಕಡಿಯಬೇಕೆಂಬ ವಿತಂಡವಾದಕ್ಕೆ ಸಮನಲ್ಲವೇ?

ಇಲ್ಲಿ ಸೋರುತ್ತಿರುವ ನೀರು ವಾಸ್ತವವಾಗಿ ಎಲ್ಲವೂ ಕಿಂಡಿ ಅಣೆಕಟ್ಟಿನಿಂದ ಬಂದ ನೀರು ಅಲ್ಲ ಏಕೆಂದರೆ ನಾವು ಗಮನಿಸಿದಂತೆ ಸುಮಾರು 1 ತಾಸುಗಳ ಅವಧಿಯಲ್ಲಿ 45HP ಎರಡು ಪಂಪುಗಳಿಂದ ನಿರಂತರವಾಗಿ ನೀರನ್ನು ಮತ್ತೆ ಅಣೆಕಟ್ಟಿನ ಆವರಣಕ್ಕೆ ಹಾಕಿದರೂ ಒಂದೇ ಒಂದು ಇಂಚು ನೀರು ಕೆಳಗಿಳಿಯಲಿಲ್ಲ. ಅಲ್ಲೇ ಈಜಾಡುತ್ತಿದ್ದ ಇಬ್ಬರು ಬಾಲಕರೊಂದಿಗೆ ವಿಚಾರಿಸಿದಾಗ ಫೆಬ್ರವರಿಯಿಂದ ಮೇ ತನಕವೂ ಇಷ್ಟೇ ಮಟ್ಟದಲ್ಲಿ ನೀರು ಇರುತ್ತದೆ ಎಂದು ಹೇಳಿದರು. ಮಾತ್ರವಲ್ಲ ಒಮ್ಮೊಮ್ಮೆ ಉಪ್ಪು ನೀರು ಕೂಡಾ ಬರುತ್ತದೆ ಎಂದು ಹೇಳಿದರು. ಅಂದರೆ ನೆಲ ಒರತೆಯ ಪರಿಣಾಮದಿಂದಲೇ ಇಲ್ಲಿ ಸದಾ ನೀರು ಇದೆ. ಸೋರಿವಿಕೆಯೇ ಏಕೈಕ ಕಾರಣವೇ ಅಲ್ಲ ಎಂಬುದು ದೃಢಪಟ್ಟಿದೆ.

ಮಹಾನಗರ ಪಾಲಿಕೆ ಮತ್ತು ಅದರ ಅಧಿಕಾರಿ ವರ್ಗ ಸಿದ್ಧಪಡಿಸಿರುವ ಒಂದು ಸಿದ್ಧಾಂತವೆಂದರೆ ತುಂಬೆ ವೆಂಟೆಡ್ ಡ್ಯಾಂನಲ್ಲಿರುವ 13 ಅಡಿ ಆಳದ ನೀರಿನ ಸಂಗ್ರಹ ಅದು ಒಡ್ಡು ಕಟ್ಟಿ ನಿಲ್ಲಿಸಲ್ಪಟ್ಟ ನೀರು ಆಗಿದ್ದು ಅದಕ್ಕೆ ಹೆಚ್ಚುವರಿಯಾಗಿ ನೀರಿನ ಹರಿವು ಮಳೆ ಬಂದರೆ ಮಾತ್ರ ಅಲ್ಪ ಪ್ರಮಾಣದಲ್ಲಿ ಒದಗುತ್ತದೆ. ಮತ್ತು ಈ ಜಲ ಸಂಗ್ರಹ ಪ್ರದೇಶದಲ್ಲಿರುವ ನೀರಿನ ಒರತೆಯ ಬಗ್ಗೆ ದಿವ್ಯ ಮೌನ ವಹಿಸುತ್ತಾರೆ. ಎರಡನೆಯದಾಗಿ ತುಂಬೆಯಿಂದ ಬಂಟ್ವಾಳ ವೆಂಕಟರಮಣ ದೇವಸ್ಥಾನದ ತನಕ ಈ ನೀರು ಸಂಗ್ರಹವಿದ್ದು ಇದರ ಆಳ ಎಲ್ಲಾ ಕಡೆ 13 ಅಡಿಯೇ ಆಗಿರಬೇಕಾಗಿಲ್ಲ. ಮಾತ್ರವಲ್ಲ ಕೆಲವು ಕಡೆ ಒಂದೆರೆಡು ಮೀಟರ್ ಇದ್ದರೂ ಹಲವಾರು ಕಡೆ 25 ಫೀಟು ನೀರು ಸಂಗ್ರಹ ಆಳವಿರುವ ಸಾಧ್ಯತೆ ಇದೆ. ಇವೆಲ್ಲವುಗಳ ಬಗ್ಗೆ ಮಹಾನಗರ ಪಾಲಿಕೆಯಲ್ಲಿ ವೈಜ್ಞಾನಿಕ ಅಧ್ಯಯನಗಳು ಇಲ್ಲ.

ಈ ಜಲಾಶಯದಲ್ಲಿ ಹೆಚ್ಚಿನ ನೀರು ಇರಬೇಕಾದ ಜಾಗ ಮರಳು ತುಂಬಿದೆ. ಹೂಳೆತ್ತುವುದರಿಂದ ಏನೂ ಪ್ರಯೋಜನವಿಲ್ಲ ಎಂದು ಶಾಸಕ ಯೋಗೀಶ್ ಭಟ್‌ರೊಂದಿಗಿದ್ದ ಇಂಜಿನಿಯರ್ ಸುರೇಶಬಾಬುರವರು ಅಭಿಪ್ರಾಯ ಪಡುತ್ತಾರೆ (ಸಂಜೆವಾಣಿ ದಿನಾಂಕ 5.4.2005 ರವರದಿ) ಈ ರೀತಿ ಮೊಂಡು ವಾದಕ್ಕೆ ಯಾಕೆ ಬಲಿ ಬಿದ್ದಿರುತ್ತಾರೆ. ಇದರಿಂದಾಗಿ ಎಷ್ಟೊಂದು ಪ್ರಯೋಜನವಿಲ್ಲ? ಕೆಸರು ಮತ್ತು ಇತರೆ ಕಾರಣಗಳಿಗಾಗಿ ಬಂದ್ ಆಗಿರುವ ನೀರಿನ ಒರತೆ ಸರಾಗವಾಗಿ ಹೊರಬರಲು ಅವಕಾಶವಾಗುತ್ತದೆ. ಆದುದರಿಂದಲೇ ಕೆರೆಗಳ, ಬಾವಿಗಳ ಹೂಳೆತ್ತುವುದು ನಮ್ಮ ಜಿಲ್ಲೆಯ ಸಾಮಾನ್ಯ ಅನುಭವ. ನೀರು ಇಲ್ಲದೆ ಬಾವಿಗಳಲ್ಲಿ ಹೂಳು ತೆಗೆದ ನಂತರ ನೀರು ಕೆಲ ಸಮಯ ಇರುವುದು ಇದೇ ಕಾರಣಕ್ಕಾಗಿ. ಎರಡನೆಯದಾಗಿ ನೀರು ತುಂಬುವ ಪ್ರದೇಶ ಜಾಸ್ತಿಯಾಗುತ್ತದೆ. ನೆಲ ಒರತೆ ಮತ್ತು ಬದಿ ಒರತೆಗಳಿದ್ದು, ನೆಲ ಒರತೆ ಸಮರ್ಪಕವಾಗಿ ಹೊರಬರಲು ಇದು ಅನಿವಾರ್ಯ. ನದಿ ಜಲಾನಯನ ಪ್ರದೇಶದ ಉದ್ದಕಲಕ್ಕೂ ಹಚ್ಚ ಹಸುರಿನ ಸಸ್ಯ ರಾಶಿ ಸಹಜವಾಗಿಯೂ ಈ ಬತ್ತಲಾರದ ನೀರಿನ ಒರತೆಯ ಪರಿಣಾಮ.

ಡಿವೈಎಫ್ಐ ನ ಪತ್ರಿಕಾಗೋಷ್ಠಿಯಲ್ಲಿ ಕೆಲ ಪತ್ರಕರ್ತ ಮಿತ್ರರು ಪೂರ್ವಾಗ್ರಪೀಡಿತರಾಗಿದ್ದು ಕಂಡುಬಂತು. ಏಕಮುಖ ಪ್ರವಾಹಕ್ಕೆ ಬಲಿಬೀಳಬಾರದು. ನಮ್ಮ ಅನುಭವ ಮತ್ತು ಒಮ್ಮತಾಭಿಪ್ರಾಯವೆಂದರೆ ಈಗ ನಡೆಯುತ್ತಿರುವ ಇನ್ನೊಂದು ಡ್ಯಾಂನ ಕಸರತ್ತು ಮತ್ತು ನೀರಿನ ಅಭಾವದ ಕೃತಕ ಸೃಷ್ಟಿ ಪೂರ್ವಯೋಜಿತವಾದುದು. ತುಂಬೆಯಿಂದ ಮುಂದೆ ಮಂಗಳೂರು ದಿಕ್ಕಿಗೆ 50 ಮೀಟರು ದೂರದಲ್ಲಿ ಇನ್ನೊಂದು ಡ್ಯಾಂನಿಂದ ಏನೊಂದು ಹೆಚ್ಚಿನ ಪ್ರಯೋಜನವಿಲ್ಲ. ಅಷ್ಟೇ ಲಾಭವನ್ನು ಹಾಲಿ ಇರುವ ಡ್ಯಾಂನಿಂದಲೇ ಪಡೆಯಬಹುದು. ಏಕೆಂದರೆ ಈಗ ಇರುವ ಡ್ಯಾಂನ ನೀರು ಸಂಗ್ರಹಣಾ ಮಟ್ಟ ಜಾಸ್ತಿಯಾಗುತ್ತದೆ. ಆದರೆ ಹರಿದುಬರುವ ಹೊಸ ನೀರಿನ ಪ್ರಮಾಣವೇನೂ ಜಾಸ್ತಿಯಾಗುವುದಿಲ್ಲ. ಮೇಲ್ಮುಖ ಒರತೆ ಅದು ಅಂತರ್ಜಲದ ಭಾಗವಾಗಿದ್ದು ಅದು ಹಾಲಿ ಡ್ಯಾಂ ಇರುವಲ್ಲಿ ಇರುವಾಗ ಅದನ್ನೇ ಸಮರ್ಥವಾಗಿ ಹೂಳು ಎತ್ತಿ ಉಪಯೋಗಿಸಬಹುದಲ್ಲವೇ? ಅದಲ್ಲದೆ ಈ ಡ್ಯಾಂನ ಹೂಳು ಎತ್ತಿ ನೀರು ಸಂಗ್ರಹದ ಪ್ರದೇಶವನ್ನು ಇನ್ನಷ್ಟು ದೂರಕ್ಕೆ ವಿಸ್ತರಿಸಬಹುದಲ್ಲವೇ? ಆದರೆ ಹೊಸ ಡ್ಯಾಂ ಗೆ ಮ.ನ.ಪಾ. ಜೋತುಬಿದ್ದಿರುವುದು 2026 ರ ಅವಧಿಕೆ ಮುಂದಾಲೋಚನೆಯ ಭಾಗ ಎಂದು ಹೇಳುತ್ತಿದೆ. 2026 ರ ಗಡಿಯೇ ಏಕೆ? ನೂರು ವರ್ಷದ ಗಡಿಯನ್ನು ಇಡಬಹುದಲ್ಲವೇ? ವಾಸ್ತವವಾಗಿ ಇಲ್ಲಿರುವ ನೀರಿನ ಸಂಗ್ರಹವೇ ಈ 2026 ರ ಅವಧಿತನಕ ಸಾಕು. ಕಳೆದ 1991 ರ ಮತ್ತು 2001 ರ ಜನಗಣತಿಯಲ್ಲಿ ಮಂಗಳೂರಿನಲ್ಲಿ ಹೆಚ್ಚಾಗಿರುವ ಜನಸಂಖ್ಯೆ ಅದು ಹೊಸ ಹೊಸ ಪ್ರದೇಶಗಳ ಜೋಡಣೆಯಿಂದ.ವಾಸ್ತವವಾಗಿ ಒಂದು ರೀತಿಯಲ್ಲಿ ಜನಸಂಖ್ಯೆಯು ಹೆಚ್ಚಿನ ನಿಯಂತ್ರಣದಲ್ಲಿ ಇದೆ. ಹೊಸತಾಗಿ ಸೇರ್ಪಡೆಯಾಗಿರುವ ಭಾಗಗಳಲ್ಲಿ ಬಾವಿಯ ನೀರು ಉಪಯೋಗಿಸುವ ಪ್ರದೇಶಗಳು ಜಾಸ್ತಿ ಇದೆ ಎಂಬುದನ್ನು ನಾವು ಗಮನಿಸಬೇಕು. 1200 ಮಿ.ಮಿ. ಮಳೆ ಬೀಳುವ ದೇಶದ ಸಾವಿರಾರು ನಗರಗಳು ಕುಡಿಯುವ ನೀರಿನ ಸಮಸ್ಯೆಯನ್ನು ನಿಭಾಯಿಸುತ್ತಿದೆ. ಆದರೆ 14000 ಮಿ.ಮಿ. ಮಳೆ ಬೀಳುವ ದ.ಕ.ದಲ್ಲಿ ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗಿ ಯಾಕೆ ಇದೆ? ಇದು ನಾವೆಲ್ಲರೂ ಪ್ರಶ್ನಿಸಬೇಕಾದ ಅಂಶ. ಜನಪ್ರತಿನಿಧಿಗಳು ಅಧಿಕಾರಿಗಳು ಎಂದಾದರೂ ಪ್ರಶ್ನಿಸಿದ್ದಾರೆಯೇ?

ದ.ಕ.ದಲ್ಲಿ ಮತ್ತು ನಗರ ಪಾಲಿಕೆ ವ್ಯಾಪ್ತಿಯಲ್ಲಿ ನೀರಿನ ದುಂದು ವೆಚ್ಚ ಇದೆ. ಜಲ ಶಿಕ್ಷಣ ನೀಡಲಾಗಿಲ್ಲ. ಮಿತ ಬಳಕೆ, ಮಿತ ವ್ಯಯ ನಮ್ಮ ಬದುಕಿನ ಭಾಗವಾಗಿಲ್ಲ. ಪ್ರತೀ ವ್ಯಕ್ತಿಗಳ ತಲಾ ನೀರಿನ ವ್ಯಯ ಮತ್ತು ಲಭ್ಯತೆಗಳ ಬಗ್ಗೆ ಮಹಾನಗರ ಪಾಲಿಕೆ ಮುಕ್ತ ಮನಸ್ಸಿನಿಂದ ಚರ್ಚೆಗೆ ತೆರೆದುಕೊಳ್ಳಬೇಕು. ಅದು ಯಾವುದನ್ನು ಮಾಡದೆ ಏಕಾಏಕಿ ಇನ್ನೊಂದು 'ಡ್ಯಾಂ' ಮಾತ್ರ ಪರಿಹಾರ ಎಂದು ಹೇಳುವುದರಲ್ಲಿ ಅರ್ಥ ಎಲ್ಲಿದೆ? ಅಣೆಕಟ್ಟು ಎಂಬುದು ಕೇವಲ ಕುಡಿಯುವ ನೀರಿಗಾಗಿನ ಏಕ ಅಂಶದ ಕಾರ್ಯಕ್ರಮ ಏಕಾಗಬೇಕು. ಜಲ ವಿದ್ಯುತ್, ಕೃಷಿಗೆ ಮತ್ತು ಕುಡಿಯುವ ಈ ಮೂರು ಅಂಶಗಳಿಗೂ ಅದು ಉಪಯೋಗವಾಗಬೇಕು. ಈ ನಿಟ್ಟಿನಲ್ಲಿ ಎಲ್ಲಿದೆ ನಗರ ಪಾಲಿಕೆಯ ಯೋಜನೆ?

ಕೊನೆಯದಾಗಿ ಈಗ ಪ್ರಸ್ತಾಪಿತವಾಗಿರುವ ಪ್ರದೇಶ ಉಪ್ಪು ನೀರು ಬರುತ್ತಿರುವ ಪ್ರದೇಶವೂ ಹೌದು. ಈ ಬಗ್ಗೆ ವ್ಯಾಪಕ ಚರ್ಚೆಯೂ ಆಗಬೇಕು. ಸಾರ್ವಜನಿಕ ಹಣವನ್ನು ಕೋಟಿ ಕೋಟಿ ಲೆಕ್ಕದಲ್ಲಿ ದುಂದುವೆಚ್ಚ ಮಾಡುವ ಕ್ರಮ ಬದಲಾಗಬೇಕು. Social Audit ಆಗಲೇಬೇಕು. ಮೇಯರ್ ಪುರಂದರದಾಸ ಇನ್ನೊಂದು ಕಿಂಡಿ ಅಣೆಕಟ್ಟು ಬೇಡವೆಂದು ಯಾರೋ 10 ಜನರ ತಂಡ ಹೇಳಿದರೆ 60 ಸದಸ್ಯರಿರುವ ಮಹಾನಗರ ಪಾಲಿಕೆಯ ಅಗತ್ಯವಿದೆಯೇ? ಎಂದು ಪ್ರಶ್ನಿಸಿದ್ದಾರೆ. ಇದು ಕೇವಲ 10 ಮತ್ತು 60 ಎಂಬ ಅಂಕ ಗಣಿತವಲ್ಲ. ಹೇಳಿದವರು ಯಾರೇ ಆಗಿರಲಿ. ಈ ಬಗ್ಗೆ ಗ್ರಹಿಸುವ ಸಂವೇದನೆ ಬೇಕು. ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಕ್ಕೆ ಅರ್ಥವಿದೆ. ಆದರೆ ಸರ್ವಾಧಿಕಾರ ದರ್ಪಕ್ಕೆ ಅಲ್ಲ. ತೋಳ್ಬಲ ಮತ್ತು ಅಧಿಕಾರ ಮರ್ಜಿ ಶಾಶ್ವತವಲ್ಲ. ವೈಜ್ಞಾನಿಕ ವಿಶ್ಲೇಷಣೆಗೆ ಡಿವೈಎಫ್ಐ ಸದಾ ಸಿದ್ಧವಿದೆ. ಡಿವೈಎಫ್ಐ ಪ್ರಾಯೋಜಿತ ತಂಡದ ಅಭಿಪ್ರಾಯವೆಂದರೆ ಪಾಣೆಮಂಗಳೂರು ಮತ್ತು ಸರಪಾಡಿ ಮಧ್ಯ ಡ್ಯಾಂ ಕಟ್ಟಿದರೆ ಮಂಗಳೂರು ಮಾತ್ರವಲ್ಲ ಉಳಿದ ಹತ್ತಿರದ ಪುರಸಭಾ ವ್ಯಾಪ್ತಿ ಪ್ರದೇಶಗಳಿಗೂ ಕುಡಿಯುವ ನೀರು ಒದಗಿಸಬಹುದು. ಅದಕ್ಕೆ ಮಹಾನಗರ ಪಾಲಿಕೆ ಸಿದ್ಧವಿಲ್ಲ. ಡಿವೈಎಫ್ಐ ನ ವಾದದಿಂದ ಕಕ್ಕಾಬಿಕ್ಕಿಯಾದ ಕಾಂಗ್ರೆಸ್ಸು ಪಾಲಿಕಾ ಸದಸ್ಯರು, ಬಡಬಡಿಸುತ್ತಿದ್ದರೆ, ಮುಖ್ಯಮಂತ್ರಿ, ಉಸ್ತುವಾರಿ ಮಂತ್ರಿ ಕೆಪಿಸಿಸಿ ಅಧ್ಯಕ್ಷರುಗಳೆಲ್ಲರೂ ಅದೇ ರಾಗ ಎಳೆಯುತ್ತಿದ್ದಾರೆ. ಡಿವೈಎಫ್ಐನ ಸತ್ಯಶೋಧನಾ ಸಮಿತಿಯಲ್ಲಿ ಸಿಪಿಐ(ಎಂ), ಮಾನವತಾ ವೇದಿಕೆ, ಪ್ರಗತಿಪರ ಚಿಂತಕರ ವೇದಿಕೆ ಮತ್ತು ಕೆಲವು ಇಂಜಿನಿಯರ್ಸ್‌ಗಳು, ಬಿಲ್ಡರ್ಸ್‌ಗಳೂ ಇದ್ದರು.

**ಕೃಷ್ಣಪ್ಪ ಕೊಂಚಾಡಿ**

# ಮಹಿಳೆಯ ಮೇಲೆ ಹಲ್ಲೆ, ಅತ್ಯಾಚಾರ.....

ಪುಟ 3 ರಿಂದ

ಕಾರ್ಯಕರ್ತರು ಸೇರಿಕೊಂಡು ಒಂದು ಸತ್ಯ ಶೋಧನಾ ತಂಡವನ್ನು ರಚಿಸಿಕೊಂಡು ಹುಳ್ಳೇನಹಳ್ಳಿ ಮತ್ತು ಕರಡಹಳ್ಳಿಗೆ ತೆರಳಿ ಮಾಹಿತಿಗಳನ್ನು ಸಂಗ್ರಹಿಸಿದ್ದಾರೆ. ಶಾಂತಮ್ಮ ತನ್ನ ಪಾಡಿಗೆ ತಾನು ಕೂಲಿ ಕೆಲಸ ಮಾಡಿಕೊಂಡು ಜೀವನ ನಿರ್ವಹಿಸುತ್ತಿದ್ದಳೆಂದೂ, ಇದುವರೆಗೆ ಅವಳು ಒಂದು ಸಣ್ಣ ಕಳ್ಳತನವನ್ನು ಸಹ ಮಾಡಿದ್ದನ್ನು ನಾವ್ಯಾರು ಕಂಡಿಲ್ಲ ಎಂದು ಗ್ರಾಮಸ್ಥರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಪ್ರಕರಣವು ಪತ್ರಿಕೆಗಳಲ್ಲಿ ವರದಿಯಾದ ನಂತರ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಜನವಾದಿ ಮಹಿಳಾ ಸಂಘಟನೆಗಳ ಮುಖಂಡರು ಜಿಲ್ಲಾಧಿಕಾರಿಗಳನ್ನು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಕಂಡು ದೂರು ಸಲ್ಲಿಸಿದ ನಂತರವಷ್ಟೇ ಪೋಲಿಸರು ಆಸ್ಪತ್ರೆಗೆ ಹೋಗಿ, ಅಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಂತಮ್ಮಳಿಂದ ಹೇಳಿಕೆಯನ್ನು ಪಡೆದು ಅಪರಾಧಿಗಳಾದ ಹರೀಶ್, ಧರ್ಮ, ಪಣಿ, ಸುಧಾ, ನಾಗ ಮತ್ತು ಶೀನ ಎಂಬವರ ವಿರುದ್ಧ ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದಾರೆ.

**ಅಪರಾಧಿಗಳ ಬಂಧನಕ್ಕೆ ಆಗ್ರಹ :**

ಅಪರಾಧಿಗಳು ಶಾಂತಮ್ಮಳ ಮೇಲೆ ಮಾರಣಾಂತಿಕ ಹಲ್ಲೆ ಮಾಡಿದ್ದರೂ ಸಹ ಅಪರಾಧಿಗಳ ವಿರುದ್ಧ ಕಲಂ 307ರ ಅಡಿಯಲ್ಲಿ ಕ್ರಮ ಜರುಗಿಸಿ ಅವರನ್ನು ಇದುವರೆಗೂ ಬಂಧಿಸದಿರುವುದನ್ನು ನೋಡಿದರೆ ಪೊಲೀಸ್ ಅಧಿಕಾರಿಗಳು ಅಪರಾಧಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಟೀಕೆ ವ್ಯಾಪಕವಾಗಿ ಕೇಳಿಬರುತ್ತಿದೆ. ಈ ನಡುವೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಹಿತೇಂದ್ರ ಅವರು ಪತ್ರಿಕೆಗಳಿಗೆ ಹೇಳಿಕೆಯೊಂದನ್ನು ನೀಡಿ ಅತ್ಯಾಚಾರಕ್ಕೆ ಒಳಗಾಗಿದ್ದರು ಎನ್ನಲಾದ ಮಹಿಳೆಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ವೈದ್ಯರು ಮಹಿಳೆಯ ಮೇಲೆ ಅತ್ಯಾಚಾರ ನಡೆದಿಲ್ಲ ಎಂದು ವರದಿ ನೀಡಿರುವುದರಿಂದ ಈ ಸಂಬಂಧ ದಾಖಲಾಗಿದ್ದ ಪ್ರಕರಣವನ್ನು ಕೈಬಿಡಲಾಗುವುದೆಂದೂ, ಹಲ್ಲೆ ನಡೆದಿರುವ ಕುರಿತು ತನಿಖೆ ನಡೆಸಲಾಗುವುದು ಎಂದು ಹೇಳಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯ ಈ ಹೇಳಿಕೆಯನ್ನು ಖಂಡಿಸಿ ಈ ಎರಡು ಸಂಘಟನೆಗಳಿಂದ ಜಿಲ್ಲಾಧಿಕಾರಿಗಳ ಕಚೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಅತ್ಯಾಚಾರದ ಪ್ರಕರಣ ನಡೆದು ಒಂದು ತಿಂಗಳ ನಂತರ ವೈದ್ಯಕೀಯ ಪರೀಕ್ಷೆ ನಡೆಸಿ ವರದಿ ಪಡೆಯುವ ಕ್ರಮವನ್ನು ಸಂಘಟನೆಗಳು ಪ್ರಶ್ನಿಸಿದ್ದು ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಮಹಿಳೆಯೊಬ್ಬಳು ತನ್ನ ಮೇಲೆ ಅತ್ಯಾಚಾರ ನಡೆದಿದೆ ಎಂದು ಕೊಡುವ ಹೇಳಿಕೆಯೊಂದನ್ನೇ ಆಧಾರವಾಗಿಟ್ಟು ಅತ್ಯಾಚಾರ ಪ್ರಕರಣವನ್ನು ದಾಖಲು ಮಾಡಿಕೊಂಡು ಅಪರಾಧಿಗಳನ್ನು ಬಂಧಿಸಬೇಕೆಂದು ಸಂಘಟನೆಗಳು ಆಗ್ರಹಿಸಿವೆ. ಅಪರಾಧಿಗಳನ್ನು ಬಂಧಿಸಿ ಕ್ರಮ ಜರುಗಿಸಲು ಪೊಲೀಸರು ಹಿಂದೇಟು ಹಾಕಿದರೆ ರಾಜ್ಯಾದ್ಯಂತ ಎಲ್ಲ ಪೊಲೀಸ್ ಠಾಣೆಗಳ ಎದುರು ಪ್ರತಿಭಟಿಸಲಾಗುವುದು ಎಂಬ ಎಚ್ಚರಿಕೆಯನ್ನು ನೀಡಲಾಗಿದೆ. ದೌರ್ಜನ್ಯಕ್ಕೊಳಗಾದ ಶಾಂತಮ್ಮಳ ಕುಟುಂಬಕ್ಕೆ 2 ಲಕ್ಷ ರೂ. ಪರಿಹಾರ ನೀಡಬೇಕೆಂದೂ ಅವಳ ತಕ್ಷಣದ ವೈದ್ಯಕೀಯ ಚಿಕಿತ್ಸೆಯ ಖರ್ಚುವೆಚ್ಚಗಳನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾದ ಮನವಿಯಲ್ಲಿ ಒತ್ತಾಯಿಸಲಾಗಿದೆ.

ವರದಿ : **ಕುಮಾರಿ.ಸಿ**

**ಬಲಪಕ್ಷದ ಸಮಯಸಾಧಕತನವೂ ಹಾಗೂ ಎಡಪಕ್ಷದ ತೀವ್ರವಾದಿತನವೂ ಒಂದೇ ನಾಣ್ಯದ ಎರಡು ಮುಖಗಳು. ಚುನಾವಣೆಯ ಮೂಲಕ ಅಧಿಕಾರ ಗದ್ದುಗೆ ಹಿಡಿಯುವ ಸರಕಾರಕ್ಕೆ ದೇಶವನ್ನು ಸಮಾಜವಾದದತ್ತ ಹಂತ ಹಂತವಾಗಿ ಕೊಂಡೊಯ್ಯಬಹುದೆಂಬ ತಪ್ಪು ಕಲ್ಪನೆ ಈ ಎರಡು ಪಕ್ಷಗಳಿಗೂ ಇದೆ. ಹೀಗಿರುವಲ್ಲಿ ಮಾರ್ಕ್ಸ್‌ವಾದಿ-ಕಮ್ಯೂನಿಸ್ಟ್ ಪಕ್ಷ ಚುನಾವಣೆಯ ಮೂಲಕ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿರುವುದರ ಉದ್ದೇಶವೇನು?**

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಚುನಾವಣೆಯ ಮೂಲಕ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದೆ ಎಂದು ತಿಳಿದುಕೊಂಡಿರುವುದೇ ಮೂಲತಃ ಒಂದು ತಪ್ಪು ಭಾವನೆ. ಬೂರ್ಜ್ವಾ ಆಳ್ವಿಕೆಯ ಚೌಕಟ್ಟಿನಲ್ಲಿದ್ದುಕೊಂಡೇ ಕಾರ್ಮಿಕ ವರ್ಗಗಳನ್ನು ಆಳುವ ವರ್ಗವನ್ನಾಗಿ ಮಾರ್ಪಡಿಸಲು ಸಾಧ್ಯವೆಂಬ ಕಿರು ಬೂರ್ಜ್ವಾ ವ್ಯಾಮೋಹದಿಂದ ಕಾರ್ಮಿಕ ವರ್ಗವನ್ನು ಬಿಡುಗಡೆಗೊಳಿಸಲು ಶ್ರಮಿಸುತ್ತಿರುವ ಪಕ್ಷವು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ.

1857 -59 ರಲ್ಲಿ ಕೇರಳದಲ್ಲೂ, 1967-69 ರಲ್ಲಿ ಕೇರಳ ಹಾಗೂ ಪಶ್ಚಿಮ ಬಂಗಾಳದಲ್ಲೂ ಚುನಾವಣೆಯ ಮೂಲಕ ಕಾರ್ಮಿಕ ವರ್ಗ 'ಅಧಿಕಾರಕ್ಕೆ ಬರಲು ಸಾಧ್ಯವಾಯಿತೆಂಬ ತಪ್ಪು ಭಾವನೆ ಈ ಪ್ರಶ್ನೆಯಲ್ಲಡಗಿರುವ ಹಾಗಿದೆ. ಆದರೆ ಅದು ಸರಿಯಲ್ಲ. ಆಳುವ ಅಧಿಕಾರದ ಕೇಂದ್ರ ಶಕ್ತಿಯಾದ ಬಲಪ್ರಯೋಗದ ಉಪಕರಣಗಳಾದ ಸೈನ್ಯ, ಪೊಲೀಸ್, ನ್ಯಾಯಾಲಯಗಳು ಮತ್ತು ಶ್ರೀಮಂತ ಮನೆತನದಿಂದ ಬಂದ ಅಧಿಕಾರಿ ಮೇಧಾವಿಗಳಿಂದ ನಡೆಯುತ್ತಿರುವ ಆಡಳಿತಯಂತ್ರ ಯಾವಾಗಿನಂತೆ ಆಗಲೂ ಕೂಡ ಕೇಂದ್ರ ಸರ್ಕಾರದ ಹತೋಟಿಯಲ್ಲೆ ಇತ್ತು.


ಇನ್ನೊಂದು ಚುನಾವಣೆಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಗೆದ್ದು ಸರಕಾರ ರಚಿಸಲು ಸಾಧ್ಯವಾದರೆ ಪರಿಸ್ಥಿತಿ ಅದೇ ರೀತಿ ಇರುತ್ತದೆ.

ಆಡಳಿತ ವ್ಯವಸ್ಥೆಯ ಬಾಹ್ಯರೂಪಗಳಲ್ಲೊಂದಾದ ಸರಕಾರ ರಚನೆ (ಮಂತ್ರಿ-ಮಂಡಲ ರಚನೆ) 1957-59 ಹಾಗೂ 1967-69ರಲ್ಲಿ ಕಾರ್ಮಿಕ ವರ್ಗದ ವಶಕ್ಕೆ ಬಂತೆಂಬುದೇನೋ ನಿಜ. (ಅದಕ್ಕೂ ಸಹ ಕಾನೂನು ಬದ್ಧ ಹಾಗೂ ಸಂವಿಧಾನಾತ್ಮಕವಾದ ಸಾಕಷ್ಟು ಇತಿಮಿತಿಗಳಿವೆ) ಇಷ್ಟು ಇತಿ-ಮಿತಿ ಇರುವ ಅಧಿಕಾರ ಚೌಕಟ್ಟಿನಲ್ಲೇ ಕೆಲವು ಸಾಮಾಜಿಕ ಪರಿವರ್ತನೆಗಳನ್ನು ತನ್ನ ಹತೋಟಿಯಲ್ಲಿಟ್ಟು ಕೊಂಡಿದ್ದ ಕೇಂದ್ರ ಸರ್ಕಾರ ಹಾಗೂ ಅದರ ಆಡಳಿತ ವರ್ಗವು ಕಾರ್ಮಿಕ ವರ್ಗಕ್ಕೆ ವಿರುದ್ಧವಾಗಿ ಅಡ್ಡಬಂತು.

ಆದರೆ, ಕಾರ್ಮಿಕವರ್ಗ ಹಾಗೂ ಉಳಿದ ಶ್ರಮಿಕ ಸಮುದಾಯಕ್ಕೆ ಇಂಥ ಇತಿ-ಮಿತಿಯ

# ಚುನಾವಣೆ ಮತ್ತು ರಾಜಕೀಯ ಅಧಿಕಾರ

## ಪ್ರಶ್ನೋತ್ತರ



- ಇ.ಎಂ.ಎಸ್ ನಂಬೂದರಿಪಾಡ್

ಅಧಿಕಾರ ಒಂದು ಮಹತ್ತದ ಅನುಭವವಾಯಿತು. ಆಳುವ ವರ್ಗಗಳನ್ನು ಪ್ರತಿನಿಧಿಸಲು ಪಕ್ಷಗಳಿಗೆ ಇರುವ ರಾಜಕೀಯ ಸ್ವಾತಂತ್ರ?(ಚುನಾವಣೆಯಲ್ಲಿ ಭಾಗವಹಿಸುವುದು,. ಜಯಗಳಿಸಿ ಸರ್ಕಾರ (ಮಂತ್ರಿಮಂಡಲ) ರಚಿಸುವ ಸ್ವಾತಂತ್ರ?)ವು ಕಾರ್ಮಿಕ ವರ್ಗಕ್ಕೆ ಸಿಗಲಾರದು ಎಂಬ ಅರಿವು ಕಾರ್ಮಿಕ ವರ್ಗದ ಮುಂದಿನ ಸಾಲಿನಲ್ಲಿ ಕೆಲಸ ಮಾಡುತ್ತಿರುವವರಿಗೆ ಗೊತ್ತಾಗುವಂತೆ ಈ ಅನುಭವ (1957-59 ಹಾಗೂ 1967-69 ರಲ್ಲಿ ಪಶ್ಚಿಮ ಬಂಗಾಳ ಹಾಗ್ ಕೇರಳಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಸರಕಾರ ರಚನೆ ವಿಫಲಗೊಂಡಿದ್ದು) ಸಹಾಯ ಮಾಡಿತು. ಹಾಗೆಯೇ, ಮಾರ್ಕ್ಸ್‌ವಾದ ಲೆನಿನ್ ವಾದಗಳ ಆಧಾರದ ಮೇಲೆ ಕ್ರಾಂತಿ ಮಾರ್ಗಗಳನ್ನನುಸರಿಸಿದಾಗ ಮಾತ್ರ ಆಳುವ ವರ್ಗವಾಗಿ ತಾನು ಮಾರ್ಪಡಬಹುದೆಂಬ ಉನ್ನತವರ್ಗ ಪ್ರಜ್ಞೆ ಕಾರ್ಮಿಕ ವರ್ಗದ ಮುಂಚೂಣಿ ನಾಯಕರಲ್ಲಿ ಬೆಳೆಯಲು ಈ ಅನುಭವ ಸಹಾಯ ಮಾಡಿತು.

ಆದರೆ, ಭಾರತದ ಶ್ರಮಿಕ ಶ್ರೀಸಾಮಾನ್ಯರಲ್ಲಿ ಈ ಉನ್ನತ ವರ್ಗ ಪ್ರಜ್ಞೆ ಇವತ್ತಿಗೂ ಬೆಳೆದಿಲ್ಲ. ಸಂಸತ್ತಿನ ಮೂಲಕವೇ ಅಧಿಕಾರಕ್ಕೆ ಬರಲು ಸಾಧ್ಯವೆಂಬ ವ್ಯಾಮೋಹಕ್ಕೆ ಅವರಿನ್ನೂ ತುತ್ತಾಗಿದ್ದಾರೆ. ಇಂಥ ವ್ಯಾಮೋಹಕ್ಕೆ ಉತ್ತೇಜನ ಕೊಡುವ ಬಲ ಕಮ್ಯೂನಿಸ್ಟ್ ಪಕ್ಷವೂ ಸೇರಿದಂತೆ ಉಳಿದೆಲ್ಲಾ ಕಿರು ಬೂರ್ಜ್ವಾ ಪಕ್ಷಗಳು ಶ್ರಮಿಸುತ್ತಿವೆ. ಇವರ ಈ ವ್ಯಾಮೋಹವನ್ನು ತೊಡೆದುಹಾಕಲು ಸಂಸತ್ತಿನ ಮಾರ್ಗದಲ್ಲಿರುವ ಎಡರು-ತೊಡರುಗಳನ್ನು ಕುರಿತು ಅವರಿಗೆ ತಾತ್ವಿಕ ತಿಳುವಳಿಕೆ ಕೊಟ್ಟರೆ ಮಾತ್ರ ಸಾಲದು. 1957-59 ಹಾಗೂ 1967-69ರಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಸಿಕ್ಕಂತಹ ಪ್ರಾಯೋಗಿಕ ಅನುಭವಗಳು ಅವರಿಗೂ ಸಿಗಲೇಬೇಕು.

ಸಂಸತ್ತಿನ ಎಲ್ಲಾ ಮಾರ್ಗಗಳನ್ನು ಬಹಿಷ್ಕರಿಸಬೇಕೆಂದು ವಾದಿಸಿದ ಜರ್ಮನಿಯ ತೀವ್ರವಾದಿ ತಾತ್ವಿಕ ಧೋರಣೆಯನ್ನು ಕುರಿತು ಲೆನಿನ್ ಹೀಗೆ ಹೇಳಿದ್ದಾರೆ. "ಕೃಷಿಕಾರ್ಮಿಕರು ಲಕ್ಷಗಟ್ಟಲೆಯಲ್ಲಲ್ಲದಿದ್ದರೂ ಸಾಕಷ್ಟು ಸಂಖ್ಯೆಯಲ್ಲಿ ಭೂಮಾಲಿಕರನ್ನು ಹಾಗೂ ಮುಂದುವರಿದ ಕೃಷಿಕರನ್ನು ಅನುಸರಿಸುತ್ತಿರುವುದನ್ನು ನೋಡಿದರೆ ಜರ್ಮನಿಯಲ್ಲಿ ಸಂಸದೀಯವಾದಕ್ಕೆ ಕೊನೆಗಾಲ ಬಂದಿಲ್ಲವೆಂದೇ ಸಂಸದೀಯವಾದಕ್ಕೆ ಕೊನೆಗಾಲ ಬಂದಿಲ್ಲವೆಂದೇ ಅರ್ಥವಾಗುತ್ತದೆ. ತನ್ನ ವರ್ಗದವರೇ ಆದರೂ ವರ್ಗ ಪ್ರಜ್ಞೆ ಬೆಳೆಸಿಕೊಳ್ಳದಿರುವಂಥ ಜನರಿಗೆ ಮತ್ತು ಉಳಿದ ಗ್ರಾಮೀಣ ಪ್ರದೇಶದಲ್ಲಿರುವ ಶ್ರೀಸಾಮಾನ್ಯರಿಗೆ ಹಾಗೂ ಹಿಂದುಳಿದ ಜನಾಂಗದವರಿಗೆ ಸಂಸದೀಯ ಮಾರ್ಗದ ವೈಫಲ್ಯದ ಬಗ್ಗೆ ತಿಳುವಳಿಕೆ ಕೊಡಲು ಕಾರ್ಮಿಕ ವರ್ಗದ ಕ್ರಾಂತಿಕಾರಿ ಪಕ್ಷಗಳು ಸಂಸತ್ತಿಗೆ ನಡೆಯುವ ಚುನಾವಣೆಯಲ್ಲಿ ಭಾಗವಹಿಸಬೇಕು ಹಾಗೂ ಸಂಸತ್ತಿನೊಳಗೇ ಚಳುವಳಿಗಳನ್ನು ನಡೆಸಬೇಕು. ಬೂರ್ಜ್ವಾ ಸಂಸತ್ತನ್ನು ಅದರ ಸಹಾಯಕ್ಕೆಂದು ಇರುವ ಬಂಡವಾಳಶಾಹಿ ಸಂಸ್ಥೆಗಳನ್ನು ಕೊನೆಗೊಳಿಸಲು ಸಾಧ್ಯವಾಗದಿರುವಷ್ಟು ಕಾಲವೂ ಕ್ರಾಂತಿಕಾರಿಗಳು ಸಂಸತ್ತಿನೊಳಗೆ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ ಮತ ಪ್ರಚಾರಕರಿಂದ ಮರುಳುಹೋಗಿರುವವರನ್ನು, ಗ್ರಾಮಾಂತರ ಜೀವನದಲ್ಲಿ ಒಗ್ಗಿ ಹೋಗಿರುವ ಜನರನ್ನು ಸಂಸದೀಯ ಸಾಮಾಜಿಕ ಪದ್ಧತಿಯಲ್ಲಿ ಇನ್ನೂ ನೋಡಬಹುದಾಗಿದೆ. ಹಾಗೆ ಮಾಡದಿದ್ದಲ್ಲಿ ವಾಚಾಳಿಗಳಾಗೇ ಉಳಿಯ ಬೇಕಾಗುತ್ತದೆ. ಅಂದರೆ ಸಂಸತ್ತಿನ ವ್ಯಾಮೋಹ ದಿಂದ ಪೂರ್ಣವಾಗಿ ಬಿಡುಗಡೆ ಹೊಂದಲು, ಕ್ರಾಂತಿಕಾರಿ ಮಾರ್ಗದ ಮೂಲಕ ಅಧಿಕಾರಕ್ಕೆ ಬರಲು ಶ್ರಮಿಸುತ್ತಿರುವ ಕಾರ್ಮಿಕ ವರ್ಗಕ್ಕೆ ಜವಾಬುದಾರಿಯನ್ನು ನಿರ್ವಹಿಸಲು ಸಾಧ್ಯವಾಗ ಬೇಕಾದರೆ ಅದರ ಮುಂಚೂಣಿಯಲ್ಲಿರುವ ಕ್ರಾಂತಿಕಾರಿ ಕಾರ್ಮಿಕ ಪಕ್ಷದ ಜನರಿಗೆ ಮಾತ್ರವಲ್ಲದೆ ಅದರಲ್ಲಿ ಬೆಂಬಲಿಗರಾದ ಕಾರ್ಮಿಕ ಸಮುದಾಯದಲ್ಲಿ ಉನ್ನತ ವರ್ಗ ಪ್ರಜ್ಞೆ ಬರಬೇಕು. ಹಾಗೆ ಪ್ರಜ್ಞೆ ಬರಬೇಕಾದರೆ ಸಂಸತ್ತಿನ ಅಂಗಸಂಸ್ಥೆಗಳಿಗೆ ನಡೆಯುವ ಕೆಲಸಕಾರ್ಯಗಳ ಮತ್ತು ಅದರ ವಿಫಲತೆಗಳ ಪ್ರಾಯೋಗಿಕ ಅನುಭವ ಅವರಿಗೆ ಸಿಗಬೇಕು."

ಈ ದೃಷ್ಟಿಯಿಂದ ಕ್ರಾಂತಿಕಾರಿ ಅಧಿಕಾರವನ್ನು ವಹಿಸಿಕೊಳ್ಳಲು ಕಾರ್ಮಿಕ ವರ್ಗ ಹಾಗೂ ಉಳಿದ ಶ್ರಮಿಕ ಶ್ರೀಸಾಮಾನ್ಯರನ್ನು ಪೂರ್ಣವಾಗಿ ಅಣಿಗೊಳಿಸಲು ಸಂಸದೀಯ ಕಾರ್ಯಕಲಾಪಗಳಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಭಾಗವಹಿಸುತ್ತದೆ.

**- ಒಡನಾಡಿ,** ಏಪ್ರಿಲ್ 1978

# ಪರಿಚಯ ಪತ್ರ ಸಮಿತಿಯ ವರದಿ

ಪಕ್ಷದ 18ನೇ ಮಹಾಧಿವೇಶನವು ಕಾಂ.ಕೆ.ವರದರಾಜನ್ ಅವರ ಸಂಚಾಲಕತ್ವದಲ್ಲಿ ಪರಿಚಯ ಪತ್ರ ಸಮಿತಿಯನ್ನು ರಚಿಸಿದ್ದು ಅದರ ವರದಿಯ ಪ್ರಮುಖ ಅಂಶಗಳು.

1. 18ನೇ ಮಹಾಧಿವೇಶನಕ್ಕೆ ಹಾಜರಾಗಲು ಕೇಂದ್ರ ಸಮಿತಿ ನಿಗದಿಪಡಿಸಿದ ಪ್ರತಿನಿಧಿಗಳ ಸಂಖ್ಯೆ 699 ಮತ್ತು ವೀಕ್ಷಕರ ಸಂಖ್ಯೆ 59. ಒಟ್ಟು 758.

2. ಕೇಂದ್ರ ಸಮಿತಿ ಸದಸ್ಯರಾದ ಪಿ.ಸಾಸ್ಸ್‌ಗಿರಿ ಅನಾರೋಗ್ಯ ಕಾರಣದಿಂದ ಹಾಜರಾಗಿಲ್ಲ. ಇನ್ನೊರ್ವ ಕೇಂದ್ರಸಮಿತಿ ಸದಸ್ಯರಾಗಿದ್ದ ಸೋಮನಾಥ ಚಟರ್ಜಿಯವರೂ ಹಾಜರಾಗಿರಲಿಲ್ಲ. ಅಂದರೆ 697 ಪ್ರತಿನಿಧಿಗಳು ಹಾಗೂ 59 ವೀಕ್ಷಕರು (ಒಟ್ಟು 756) ಭಾಗವಹಿಸಿದ್ದ ಸಂಗಾತಿಗಳಲ್ಲಿ 686 ಪುರುಷರು ಹಾಗೂ 70 ಮಹಿಳೆಯರು.

3. 92 ವರ್ಷ ಪ್ರಾಯದ ಸಮರ್ ಮುಖರ್ಜಿಯವರು ಅತ್ಯಂತ ಹಿರಿಯ ಪ್ರತಿನಿಧಿಯಾಗಿದ್ದರೆ, ತಮಿಳುನಾಡಿನ ಜಿ.ಸೆಲ್ವ ಅತ್ಯಂತ ಕಿರಿಯ ಸಂಗಾತಿ(27 ವರ್ಷ)

4. ಆಂಧ್ರಪ್ರದೇಶದ ತೇಜೆಸ್ವರರಾವ್ ಅತೀ ಹೆಚ್ಚು ಕಾಲ ಜೈಲುವಾಸ (13 ವರ್ಷ 10 ತಿಂಗಳು)ದಲ್ಲಿದ್ದರು. ಪಶ್ಚಿಮ ಬಂಗಾಳದ ಬಿನೋದ್ ದಾಸ್ 11 ವರ್ಷ 1 ತಿಂಗಳು ಜೈಲಿನಲ್ಲಿದ್ದರು.

5. 12 ವರ್ಷ ಮತ್ತು 6 ತಿಂಗಳು ಭೂಗತರಾಗಿದ್ದ ಕೇರಳ ರಾಜ್ಯದ ಪಿ.ಕೆ.ಚಂದ್ರನಂದನ್ ಅತ್ಯಂತ ಹೆಚ್ಚು ಕಾಲ ಭೂಗತರಾಗಿದ್ದ ಸಂಗಾತಿಯಾಗಿದ್ದರು.

6. 1934ರಲ್ಲಿ ಪಕ್ಷಕ್ಕೆ ಸೇರಿದ ಹರ್‌ಕಿಶನ್ ಸಿಂಗ್ ಸುರ್ಜಿತ್ ಪಕ್ಷದ ಜೀವನದಲ್ಲಿ ಅತ್ಯಂತ ಹಿರಿಯ ಸಂಗಾತಿ.

7. ಕಾಂ. ಸುರ್ಜಿತ್, ಉಮಾನಾಥ್, ಕೊರಟಾಲ ಸತ್ಯನಾರಾಯಣ ಮತ್ತು ಎನ್.ಶಂಕಯ್ಯ 18 ಮಹಾಧಿವೇಶನಗಳಲ್ಲಿ 17ರಲ್ಲಿ ಭಾಗವಹಿಸಿದ್ದರು. ಕಾಂ. ಜ್ಯೋತಿಬಸುರವರು ಪಾಲ್ಘಾಟ್‌ನಲ್ಲಿ ನಡೆದ ಅಧಿವೇಶನಕ್ಕೆ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದರ್ರ, ಬಿಹಾರ ಮತ್ತು ಬಂಗಾಳ ರಾಜ್ಯಗಳ ವಿರುದ್ಧ ವಿಲೀನದ ನಿರ್ಧಾರದ ಆಂದೋಲನ ನಡೆಯುತ್ತಿದ್ದುದರಿಂದ ಅಧಿವೇಶನದಲ್ಲಿ ಬಾಗಿಯಾಗಿರಲಿಲ್ಲ (1956) ಅಂದರೆ ಅವರು 16 ಅಧಿವೇಶನಗಳಲ್ಲಿ ಭಾಗವಹಿಸಿದ್ದಾರೆ.

| | ಪ್ರತಿನಿಧಿ | ವೀಕ್ಷಕರು |
|---|---|---|
| **ಲಿಂಗ ಆಧಾರದಲ್ಲಿ** | | |
| ಮಹಿಳೆಯರು | 64 | 6 |
| ಪುರುಷರು | 633 | 53 |
| **ವರ್ಗಹಿನ್ನೆಲೆ** | | |
| ಕಾರ್ಮಿಕವರ್ಗ | 110 | 4 |
| ಕೃಷಿ ಕೂಲಿಕಾರರು | 33 | 2 |
| ಬಡರೈತರು | 86 | 7 |
| ಮಧ್ಯಮ ರೈತರು | 143 | 17 |
| ಶ್ರೀಮಂತ ರೈತರು | 36 | |
| ಮಧ್ಯಮ ವರ್ಗ | 252 | 27 |
| ಭೂಮಾಲಕರು | 23 | 1 |
| ಬಂಡವಾಳಶಾಹಿ | 4 | |
| ಪುಟ್ಟ ಬಂಡವಾಳಶಾಹಿ | 10 | |
| **ಪಕ್ಷಕ್ಕೆ ಸೇರಿದ ಅವಧಿ** | | |
| 1947ರ ಮೊದಲು | 27 | |
| 1947-1963ರ ನಡುವೆ | 121 | 03 |
| 1964-1977 ರ ನಡುವೆ | 354 | 16 |
| 1978-1990ರ ನಡುವೆ | 171 | 35 |
| 1990ರ ನಂತರ | 15 | 08 |
| ಏನನ್ನೂ ತಿಳಿಸದವರು | 09 | |
| **ಚುನಾಯಿತ ಸಂಸ್ಥೆಗಳಲ್ಲಿ** | | |
| ಸಂಸತ್ ಸದಸ್ಯರು | 31 | 01 |
| ಮಂತ್ರಿಗಳು | 25 | - |
| ಶಾಸಕರು | 32 | 01 |
| ವಿ. ಪರಿಷತ್ ಸದಸ್ಯರು | 01- | |
| ಕಾರ್ಪೊರೇಷನ್/ಮುನಿಸಿಪಲ್ | 14- | |
| ಜಿಲ್ಲಾ ಪರಿಷತ್ | 10 | 03 |
| ಪಂಚಾಯತ್ | 10 | 03 |
| ವಿಶ್ವ ವಿದ್ಯಾಲಯ ಸೆನೆಟ್ | 01 | |
| ಇತರೆ | 25 | 01 |
| **ಜೈಲುವಾಸ** | | |
| ಅನುಭವ ಇಲ್ಲದವರು | 53 | 28 |
| 2 ತಿಂಗಳಿಗಿಂತ ಕಡಿಮೆ | 225 | 22 |
| 2ರಿಂದ 6 ತಿಂಗಳವರೆಗೆ | 82 | 04 |
| 6 ತಿಂಗಳಿಂದ 1 ವರ್ಷ | 08 | |
| 1 ವರ್ಷದಿಂದ 2 ವರ್ಷ | 66 | 02 |
| 2 ವರ್ಷದಿಂದ 5 ವರ್ಷ | 47 | 02 |
| 5 ವರ್ಷದಿಂದ 10 ವರ್ಷ | 15 | 01 |
| 10 ವರ್ಷಗಳಿಗಿಂತಲೂ ಹೆಚ್ಚು | 02 | |
| **ಭೂಗತ ಜೀವನ** | | |
| 2 ತಿಂಗಳುಗಳಿಗಿಂತ ಕಡಿಮೆ | 51 | 06 |
| 2 ತಿಂಗಳುಗಳಿಂದ 6 ತಿಂಗಳು | 54 | 04 |
| 6 ತಿಂಗಳಿಂದ 1 ವರ್ಷ | 26 | 02 |
| 1 ವರ್ಷದಿಂದ 2 ವರ್ಷ | 67 | 01 |
| 2 ವರ್ಷದಿಂದ 5 ವರ್ಷ | 38 | 01 |
| 5 ವರ್ಷದಿಂದ 10 ವರ್ಷ | 09 | ? |
| 10 ವರ್ಷಕ್ಕಿಂತಲೂ ಹೆಚ್ಚು | 01 | |

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಸುಪ್ರಿಂಟರ್ಸ್, ಕ್ರೀನ್ ಲೈನ್ ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH